ಸಂಪುಟ: 05 ಸಂಚಿಕೆ: 196 ಪುಟಗಳು: 08 ಸೋಮವಾರ 29 ಸೆಪ್ಟೆಂಬರ್ 2025 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5




# ಉದಯ ವಾಹಿನಿ

ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ

## ಜಾತಿವಾರು ಸಮೀಕ್ಷೆಯಲ್ಲಿ ಕರ್ತವ್ಯ ಲೋಪ: ಅಮಾನತು

• ಉದಯವಾಹಿನಿ, ಕೊಪ್ಪಳ

ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿ ಕುರಿತು ಸಮೀಕ್ಷೆಗೆ ನಿಯೋಜನೆ ಮಾಡಿದ್ದರೂ ಕರ್ತವ್ಯ ಲೋಪ ಎಸಗಿದ ಕಾರಣಕ್ಕಾಗಿ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಜೂಲಕುಂಟಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹಾಯಕ ಶಿಕ್ಷಕ ರಾಮಪ್ಪ ತಳವಾರ ಎಂಬುವವರನ್ನು ಅಮಾನತು ಮಾಡಿ ಜಿಲ್ಲಾಧಿಕಾರಿ ಸುರೇಶ ಇಟ್ನಾಳ ಭಾನುವಾರ ಆದೇಶಿಸಿದ್ದಾರೆ. ರಾಮಪ್ಪ ತಳವಾರ ತಮಗೆ ವಹಿಸಿದ ಸಮೀಕ್ಷೆ ಕೆಲಸ ಆರಂಭಿಸಿಲ್ಲ. ಎರಡು ದಿನಗಳಿಂದ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದು, ಮನೆಗೆ ಭೇಟಿ ನೀಡಿದರೂ ಯಾವುದೇ ನಿಖರ ಮಾಹಿತಿ ಲಭ್ಯವಾಗಿಲ್ಲ. ಆದ್ದರಿಂದ ಕುಷ್ಟಗಿ ಸಿಆರ್‌ಪಿ ನೀಡಿದ ವರದಿ ಆಧರಿಸಿ ಅಮಾನತು ಮಾಡಲಾಗಿದೆ.

## ದುಪ್ಪಟ್ಟು ಕಮಿಷನ್ ಆರೋಪ ಆ ಫಾರ್ಮುಲಾ ಯಾವುದು

• ಉದಯವಾಹಿನಿ, ಬೆಂಗಳೂರು

ದುಪ್ಪಟ್ಟು ಕಮಿಷನ್‌ಗೆ ಕಾರಣವಾದ ಆ ಫಾರ್ಮುಲಾ ಯಾವುದು ಸಿದ್ದರಾಮಯ್ಯನವರೇ ಎಂದು ಕಾರ್ಕಳ ಶಾಸಕ ವಿ. ಸುನಿಲ್ ಕುಮಾರ್ ಪ್ರಶ್ನಿಸಿದ್ದಾರೆ. ಗುತ್ತಿಗೆಯಲ್ಲಿ ಕಮಿಷನ್ ಬಗ್ಗೆ ರಾಜ್ಯ ಗುತ್ತಿಗೆದಾರರ ಸಂಘ ಸಿಎಂಗೆ ಪತ್ರ ಬರೆದಿರುವ ಸುದ್ದಿ ತುಣುಕು ಹಂಚಿಕೊಂಡು ಅವರು ಸಿಎಂ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದ್ದಾರೆ. ರಾಜ್ಯದಲ್ಲಿ ಈ ಹಿಂದೆ ಇರುವ ಎಲ್ಲಾ ಸರ್ಕಾರಕ್ಕಿಂತ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ದುಪ್ಪಟ್ಟು ಕಮಿಷನ್ ಪಡೆಯುತ್ತಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘ ಖುದ್ದು ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದೆ. ಜೇಷ್ಠತೆ ಮತ್ತು ಪಾರದರ್ಶಕತೆಯನ್ನು ಮೀರಿ ಸ್ಪೆಷಲ್ ಫಾರ್ಮುಲಾ ಮೂಲಕ ಶೇ.15-20 ರಷ್ಟು ಎಲ್ ಓಸಿ ಬಿಡುಗಡೆಯಾಗುತ್ತಿದೆ ಎಂದು ಸಂಘ ಆರೋಪಿಸಿದೆ. ಹಾಗಾದರೆ ಎಲ್ಲದಕ್ಕಿಂತ ಹೆಚ್ಚಾಗಿ ನಿಮ್ಮ ಆಪ್ತ ಸಚಿವರ ಖಾತೆಯಲ್ಲೇ ಈ ರೀತಿ ವ್ಯವಸ್ಥೆ ಇದೆ ಎಂದು ಸಂಘ ಆರೋಪಿಸಿದೆ. ಹಾಗಾದರೆ ಈ ಸ್ಪೆಷಲ್ ಫಾರ್ಮುಲಾ ವ್ಯವಸ್ಥೆ ಇರುವುದು ನಿಮ್ಮ ಗಮನಕ್ಕೂ ಇದೆ ಎಂದೇ ಅರ್ಥವಲ್ಲವೇ ಗೊತ್ತಿದ್ದು ಸುಮ್ಮನಿರುವುದು ಎಂದರೆ ಅರ್ಥವೇನು ಸ್ವಾಮಿ ಎಂದು ಪ್ರಶ್ನಿಸಿದ್ದಾರೆ. ಮಠದೊಳಗಿನ ಬೆಕ್ಕು ಇಲಿಯ ಕಂಡೊಡನೆ ಪುಟ ನೆಗೆದಂತೆ ಕಾಣ ಎಂಬಂತಾಗಿದೆಯೇ ನಿಮ್ಮ ಸ್ಥಿತಿ ನಿಮ್ಮದೀಗ 50-50 ಅವಧಿಯ ಶೇ 80 ಕಮಿಷನ್ ಸರ್ಕಾರ ಬಿಡಿ ಎಂದು ವ್ಯಂಗ್ಯವಾಡಿದ್ದಾರೆ.

## ಪ್ರವಾಹ ಪರಿಸ್ಥಿತಿ: ಸಚಿವರೆ ಎಲ್ಲಿದ್ದೀರಿ ಎಲ್ಲಿ ಮಾಯಾವಾಗಿದ್ದೀರಿ

• ಉದಯವಾಹಿನಿ, ಬೆಂಗಳೂರು

ಕಲಬುರಗಿ ಸೇರಿದಂತೆ ಉತ್ತರ ಕರ್ನಾಟಕದ ಹಲವೆಡೆ ಪ್ರವಾಹ ಪರಿಸ್ಥಿತಿ ತಲೆದೂರಿದ್ದರ ಕುರಿತು ಆ ಭಾಗದ ಸಚಿವರನ್ನು ಜೆಡಿಎಸ್ ತರಾಟೆಗೆ ತೆಗೆದುಕೊಂಡಿದೆ. ಈ ಕುರಿತು ಎಕ್ಸ್‌ನಲ್ಲಿ ಜೆಡಿಎಸ್ ಟ್ವಿಟ್ ಮಾಡಿ, ಉತ್ತರ ಕರ್ನಾಟಕ ಭಾಗದ ಉಸ್ತುವಾರಿ ಸಚಿವರೇ ಎಲ್ಲಿದ್ದೀರಿ ಎಲ್ಲಿ ಮಾಯಾವಾಗಿದ್ದೀರಿ ಎಂದು ಪ್ರಶ್ನಿಸಿದೆ. ಭೀಮಾ ನದಿಯ ಪ್ರವಾಹಕ್ಕೆ ಉತ್ತರ ಕರ್ನಾಟಕದ ಕಲಬುರಗಿ, ವಿಜಯಪುರ, ಬೀದರ್, ಕೊಪ್ಪಳ ಸೇರಿದಂತೆ ಹಲವು ಜಿಲ್ಲೆಗಳು ಸಂಪೂರ್ಣ ಮುಳುಗಡೆಯಾಗಿದ್ದು, ಜನ ನರಕಯಾತನೆ ಅನುಭವಿಸುತ್ತಿದ್ದಾರೆ. ಹಲವು ಜಿಲ್ಲೆಯಲ್ಲಿ ಸಾವು ನೋವುಗಳಾಗಿವೆ. ನೆರೆಯಿಂದ ಗ್ರಾಮಗಳಿಗೆ ಗ್ರಾಮಗಳೇ ಮುಳುಗಡೆ ಆಗಿವೆ. ರಸ್ತೆ, ಸೇತುವೆಗಳು ಮುಳುಗಿವೆ. ಕುಡಿಯುವ ನೀರು, ವಿದ್ಯುತ್ ಸಂಪರ್ಕ ವ್ಯತ್ಯಯವಾಗಿದೆ. ಅಪಾರ ಪ್ರಮಾಣದಲ್ಲಿ ಬೆಳೆ ನಾಶವಾಗಿದೆ. ಉಸ್ತುವಾರಿ ಮಂತ್ರಿಗಳ ಪತ್ತೆಯೇ ಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದೆ. ನಿಮ್ಮ ಜಿಲ್ಲೆಗಳು ಸಂಪೂರ್ಣ ಮುಳುಗಿರುವಾಗ ಎಲ್ಲಿ ಓಡಿ ಹೋಗಿದ್ದೀರಿ ಜನರ ದುಃಖ, ಆರ್ತನಾದ ನಿಮಗೆ ಕೇಳುತ್ತಿಲ್ಲವೇ ನೆರೆ ಸಂತ್ರಸ್ತರಿಗೆ ಆಶ್ರಯ ಕೇಂದ್ರಗಳನ್ನು ನಿರ್ಮಿಸಿ ಅಗತ್ಯ ಸೌಲಭ್ಯ ಕಲ್ಪಿಸಿ, ನೆರೆ ಹಾನಿಯಿಂದ ನಷ್ಟಕ್ಕೊಳಗಾದವರಿಗೆ ತ್ವರಿತವಾಗಿ ಪರಿಹಾರ ನೀಡಲು ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಲಿ.

## ಸಿಎಂ ವೈಮಾನಿಕ ಸಮೀಕ್ಷೆ ವಿಶೇಷ ಪ್ಯಾಕೇಜ್‌ಗೆ ಮನವಿ

• ಉದಯವಾಹಿನಿ, ಬೀದರ್

ಬೀದರ್ ಜಿಲ್ಲೆಯಾದ್ಯಂತ ಕಳೆದ ಒಂದು ವಾರದಿಂದ ಸುರಿಯುತ್ತಿರುವ ಮಳೆಯಿಂದ ಭಾರಿ ಪ್ರಮಾಣದ ಬೆಳೆ, ಮನೆ ಹಾಗೂ ಮೂಲಸೌಕರ್ಯಕ್ಕೆ ಹಾನಿ ಉಂಟಾಗಿದ್ದು, ವೈಮಾನಿಕ ಸಮೀಕ್ಷೆ ನಡೆಸಿ, ವಿಶೇಷ ಪ್ಯಾಕೇಜ್ ಘೋಷಿಸಬೇಕು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ, ಅವರು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಮಾಡಿದ್ದಾರೆ.

ಪೌರಾಡಳಿತ ಸಚಿವ ರಹೀಂ ಖಾನ್ ಅವರೊಂದಿಗೆ ಬೆಂಗಳೂರಿನಲ್ಲಿ ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ. ಬಳಿಕ ಮಾತನಾಡಿದ ಈಶ್ವರ ಖಂಡ್ರೆ, ತಮ್ಮ ಮನವಿಗೆ ಮುಖ್ಯಮಂತ್ರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಸೆ. 30ರಂದು ವೈಮಾನಿಕ ಸಮೀಕ್ಷೆ ನಡೆಸುವ ಭರವಸೆ ನೀಡಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಭಾರತ ತಂಡ ಸಂಪ್ರಾದಾಯಿಯಕ ಎದುರಾಳಿ ಪಾಕಿಸ್ತಾನ ತಂಡವನ್ನ ಬಗ್ಗುಬಡಿದು 2025ರ ಏಷ್ಯಾ ಕಪ್ ತನ್ನದಾಗಿಸಿಕೊಂಡಿದೆ. ದುಬೈ ಅಂತಾರಾಷ್ಟ್ರೀಯ ಮೈದಾನದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಪಾಕಿಸ್ತಾನ ನೀಡಿದ್ದ 147 ರನ್ ಗಳ ಗುರಿಯನ್ನ ಟೀಮ್ ಇಂಡಿಯಾ 19.4 ಓವರ್ ಗಳಲ್ಲಿ ಓವರ್ ಗಳಲ್ಲಿ 5 ವಿಕೆಟ್ ಕಳೆದುಕೊಂಡು ತಲುಪಿತು. ತಿಲಕ್ ವರ್ಮಾ ಅಜೇಯ ಅರ್ಧಶತಕ ಸಿಡಿಸಿ ಗೆಲುವಿನ ರೂವಾರಿಯಾದರು.





# ಭಾರತದ ತಿಲಕ್ ಎಸ್ 400ಗೇ ಬಲಿಯಾದ ರೌಫ್ 700

### ಫೈನಲ್‌ನಲ್ಲಿ ಪಾಕ್ ಬಗ್ಗು ಬಡಿದು ಟ್ರೋಫಿ ಎತ್ತಿ ಹಿಡಿದ ಟೀಮ್ ಇಂಡಿಯಾ

## 9ನೇ ಬಾರಿಗೆ ಏಷ್ಯಾ ಕಪ್ ಎತ್ತಿಹಿಡಿದ ಭಾರತ

### ಹ್ಯಾರಿಸ್ ರೌಫ್ ಬುಡಕ್ಕೇ ಬಿತ್ತು ಫೈಟರ್ ಜೆಟ್!



ಪಾಕಿಸ್ತಾನದ ವೇಗಿ ಹ್ಯಾರಿಸ್ ರೌಫ್ ಮಾಡಿದ್ದ 6-0 ಸಂಜ್ಞೆಗೆ ಭಾರತದ ವೇಗಿ ಜಸ್ಪ್ರಿತ್ ಬುಮ್ರಾ ಅವರು ತಕ್ಕ ಪ್ರತಿಕ್ರಿಯೆ ನೀಡಿದ್ದಾರೆ. ಏಷ್ಯಾ ಕಪ್ ಫೈನಲ್ ಪಂದ್ಯದಲ್ಲಿ ಹ್ಯಾರಿಸ್ ರೌಫ್ ಅವರನ್ನು ತಮ್ಮ ಅತ್ಯುತ್ತಮ ಯಾರ್ಕರ್‌ಗೆ ಕ್ಲೀನ್ ಬೌಲ್ಡ್ ಮಾಡಿದ ನಂತರ ವಿಮಾನ ಅಪಘಾತದ ಸನ್ನೆ ಮಾಡಿ ಅಣಕಿಸಿದ್ದಾರೆ. ಇದರ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಕೆಲ ನಿಮಿಷಗಳಲ್ಲೇ ವೈರಲ್ ಆಗಿದೆ.

### ಪಾಕ್ ಅದ್ಭುತ ಆರಂಭ

ಇದಕ್ಕೂ ಮೊದಲು ಟಾಸ್ ಸೋತು ಬ್ಯಾಟಿಂಗ್ ಗೆ ಇಳಿಸಲ್ಪಟ್ಟ ಪಾಕಿಸ್ತಾನ ತಂಡ ಅದ್ಭುತ ಆರಂಭ ಪಡೆಯಿತು. ಆರಂಭಿಕರಾದ ಸಾಹಿಬ್ಜಾದ ಫರ್ಹಾನ್ ಮತ್ತು ಫಖರ್ ಅವರು ಕೇವಲ 9.4 ಓವರ್ ಗಳಲ್ಲಿ 84 ರನ್ ಗಳಿಸಿ ತಂಡವನ್ನು ಸುಸ್ಥಿತಿಗೆ ತಲುಪಿಸಿದರು. ಪವರ್ ಪ್ಲೇನಲ್ಲಿ ಈ ಜೋಡಿ 45 ರನ್ ಕಲೆ ಹಾಕಿತ್ತು.

• ಉದಯವಾಹಿನಿ, ಬೆಂಗಳೂರು

ಪೆಹಲ್ಗಾಮ್ ಉಗ್ರ ದಾಳಿಗೆ ಪ್ರತಿಯಾಗಿ ಭಾರತ ತಂಡ ನೋ ಶೇಕ್ ಹ್ಯಾಂಡ್ ಮೌನ ಪ್ರತಿಭಟನೆಯ ಮೂಲಕ ತಿರುಗೇಟು ನೀಡಿದೆ. ಮಾತ್ರವಲ್ಲದೆ ಅತ್ಯುತ್ತಮ ಕ್ರಿಕೆಟ್ ಆಟದ ಮೂಲಕ ಪಾಕಿಸ್ತಾನದ ಬಾಯಿ ಮುಚ್ಚಿಸಿದೆ. ಕೇವಲ 6 ತಿಂಗಳ ಹಿಂದಷ್ಟೇ ದುಬೈನಲ್ಲಿ ಏಕದಿನ ಮಾದರಿಯಲ್ಲಿ ನಡೆದ ಐಸಿಸಿ ಚಾಂಪಿಯನ್ ಟ್ರೋಫಿ ಎತ್ತಿ ಹಿಡಿದಿದ್ದ ಟೀಂ ಇಂಡಿಯಾ ಇದೀಗ ಟಿ20 ಮಾದರಿಯಲ್ಲಿ ನಡೆದ ಏಷ್ಯಾ ಕಪ್ ನಲ್ಲೂ ವಿಕ್ರಮ ಮೆರೆದಿದೆ. ದುಬೈ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ ತಂಡ 146 ರನ್ ಗಳಿಗೆ ಆಲೌಟ್ ಆಯಿತು. ಇದಕ್ಕೆ ಉತ್ತರವಾಗಿ ಭಾರತ ತಂಡ 19.4 ಓವರ್ ಗಳಲ್ಲಿ 5 ವಿಕೆಟ್ ನಷ್ಟಕ್ಕೆ ಗುರಿ ತಲುಪಿತು. ಈ ಮೂಲಕ 9ನೇ ಬಾರಿ ಏಷ್ಯಾ ಕಪ್ ಜಯಿಸಿತು.

**ಸಂಕಷ್ಟಕ್ಕೆ ಸಿಲುಕಿದ್ದ ಭಾರತ:** ಗೆಲ್ಲಲು ಸಾಧಾರಣ ಗುರಿ ಪಡೆದ ಭಾರತ ತಂಡ ಮೊದಲ 4 ಓವರ್ ಗಳಲ್ಲಿ 20 ರನ್ ಗೆ 3 ವಿಕೆಟ್ ಕಳೆದುಕೊಂಡಿತ್ತು. ಉತ್ತಮ ಫಾರ್ಮ್ ನಲ್ಲಿದ್ದ ಅಭಿಷೇಕ್ ಶರ್ಮಾ(5), ನಾಯಕ ಸೂರ್ಯಕುಮಾರ್ ಯಾದವ್ (1), ಶುಭಮನ್ ಗಿಲ್ 12(10) ವಿಕೆಟ್ ಅನ್ನು ಫಾಹಿಮ್ ಅಶ್ರಫ್ ಮತ್ತು ಶಾಹಿನ್ ಶಾ ಅಫ್ರಿದ್ ಅವರು ಉರುಳಿಸಿದರು. ಇದು ಭಾರತದ ಪಾಳಯದಲ್ಲಿ ಆತಂಕಕ್ಕೆ ಕಾರಣವಾಗಿತ್ತು. ಆದರೆ ತಿಲಕ್ ವರ್ಮಾ ಮತ್ತು ಸಂಜು ಸ್ಯಾಮ್ಸನ್ ಅವರು ತಾಳ್ಮೆಯಿಂದ 4ನೇ ವಿಕೆಟ್ ಗೆ 57 ರನ್‌ಗಳ ಜೊತೆಯಾಟವಾಡಿದರು. 13ನೇ ಓವರ್ ನಲ್ಲಿ ಸ್ಪಿನ್ನರ್ ಅಬ್ರಾರ್ ಅಹ್ಮದ್ ಗೆ ದೊಡ್ಡ ಹೊಡೆತವನ್ನು ಹೊಡೆಯಲು ಯತ್ನಿಸಿ ಸಂಜು ಸ್ಯಾಮ್ಸನ್ ಅವರು ಫರ್ಹಾನ್ ಅವರಿಗೆ ಕ್ಯಾಚ್ ನೀಡಿದರು. ಆ ಬಳಿಕ ಜೊತೆಯಾದ ತಿಲಕ್ ವರ್ಮಾ ಮತ್ತು ಶಿವಂ ದುಬೆ ಜೋಡಿಯು ಸಂಪೂರ್ಣವಾಗಿ ಪಾಕ್ ಕೈಯಿಂದ ಪಂದ್ಯವನ್ನು ಕಸಿದು ಕೊಂಡಿತು. 41 ಎಸೆತದಲ್ಲಿ ಅರ್ಧಶತಕ ಪೂರೈಸಿದ ತಿಲಕ್ ವರ್ಮಾ ಅಂತಿಮವಾಗಿ 53 ಎಸೆತಗಳಲ್ಲಿ 69 ರನ್ ಗಳಿಸಿ ಅಜೇಯರಾಗಿ ಉಳಿದರು. ಅವರ ಇನ್ನಿಂಗ್ಸ್ ನಲ್ಲಿ 3 ಬೌಂಡರಿ ಮತ್ತು 4 ಭರ್ಜರಿ ಸಿಕ್ಸರ್ ಗಳಿದ್ದವು. ತಿಲಕ್ ಮತ್ತು ದುಬೆ 5ನೇ ವಿಕೆಟ್ ಗೆ 60 ರನ್ ಗಳ ಜೊತೆಯಾಟವಾಡಿದರು. ಒಂದು ಓವರ್ ಉಳಿದಿರುವಾಗ ಫಾಹಿಮ್ ಅಶ್ರಫ್ ಎಸೆತದಲ್ಲಿ ಶಿವಂ ದುಬೆ ಅವರು ಲಾಂಗ್ ಆನ್ ನಲ್ಲಿ ಶಾಹಿನ್ ಶಾ ಅಫ್ರಿದಿ ಅವರಿಗೆ ಕ್ಯಾಚ್ ನೀಡಿದರು. ಆದರೆ ಅಷ್ಟಾರಲ್ಲಾಗಲೇ ಅವರು ಮಾಡಬೇಕಿದ್ದ ಕಾರ್ಯವನ್ನು ಮಾಡಿ ಮುಗಿಸಿದ್ದರು. ಅಂತಿವಾಗಿ ತಂಡದ ಗೆಲುವಿಗೆ ಅಗತ್ಯವಿದ್ದ ರನ್ ಗಳನ್ನು ತಿಲಕ್ ವರ್ಮಾ ಮತ್ತು ರಿಂಕು ಸಿಂಗ್ ಗಳಿಸುವಲ್ಲಿ ಎಡವಲಿಲ್ಲ.

### ತಿಲಕ್ ವರ್ಮಾ ಪಂದ್ಯ ಶ್ರೇಷ್ಠ

ತಿಲಕ್ ವರ್ಮಾ ಹಾಗೂ ಶಿವಂ ದುಬೆ (33 ರನ್) ಅವರ ಬ್ಯಾಟಿಂಗ್ ಬಲದಿಂದ 19.4 ಓವರ್‌ಗಳಿಗೆ 150 ರನ್‌ಗಳನ್ನು ಕಲೆ ಹಾಕಿ ಗೆದ್ದು ಬೀಗಿತು. ಜವಾಬ್ದಾರಿಯುತವಾಗಿ ಬ್ಯಾಟ್ ಮಾಡಿ ಅರ್ಧಶತಕವನ್ನು ಬಾರಿಸಿ ಭಾರತ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದ ತಿಲಕ್ ವರ್ಮಾ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

**3 ಫೋರ್ ಹಾಗೂ 4 ಸಿಕ್ಸರ್ ಸಮೇತ 69 ರನ್**



**ಪಾಕಿಸ್ತಾನಕ್ಕೆ ಕಾಡಿದ ಕುಲ್ ದೀಪ್ ಯಾದವ್**

### ಪಾಕ್ ವಿಕೆಟ್ಸ್ ಉದುರಿಸಿದ ಕುಲ್ ದೀಪ್

ಏಷ್ಯಾಕಪ್ ಫೈನಲ್ ಪಂದ್ಯದಲ್ಲಿ ಪಾಕಿಸ್ತಾನ ಟೀಮ್ ಸಾಧಾರಣ ಮೊತ್ತದ ಟಾರ್ಗೆಟ್ ಅನ್ನು ಟೀಮ್ ಇಂಡಿಯಾಕ್ಕೆ ನೀಡಿದೆ. ಕುಲ್‌ದೀಪ್‌ಯಾದವ್ ಅವರ ಮಾರಕ ಸ್ಪಿನ್‌ಗೆ ಪಾಕ್ ವಿಕೆಟ್ ಗಳು ಪಟ ಪಟ ಎಂದು ಉದುರಿ ಹೋದವು. ಓಪನರ್ ಸಾಹಿಬ್ಜಾದಾ ಫರ್ಹಾನ್ 3 ಸಿಕ್ಸರ್‌ಗಳಿಂದ 57, ಫಖರ್ ಜಮಾನ್ 2 ಸಿಕ್ಸರ್ ಗಳಿಂದ 46 ರನ್ ಗಳಿಸಿದರು. ಆದರೆ ಅರ್ಧಶತಕದ ಸಮೀಪ ಬಂದಾಗ ಕುಲ್ ದೀಪ್ ಯಾದವ್ ಸ್ಪಿನ್ ಬೌಲಿಂಗ್‌ನಲ್ಲಿ ವಿಕೆಟ್ ಒಪ್ಪಿಸಿದರು. ಸೈಮ್ ಅಯುಬ್ 14 ರನ್ ಬಿಟ್ಟರೇ ಉಳಿದ ಬ್ಯಾಟರ್‌ಗಳು ಕ್ರೀಸ್‌ಗೆ ಹಾಗೇ ಬಂದು ಹೀಗೆ ಹೋದರು ಎನ್ನಬಹುದು. ಏಕೆಂದರೆ ಉಳಿದ ಬ್ಯಾಟ್ಸ್‌ಮನ್‌ಗಳು ಯಾರು 8 ರನ್‌ಗಳ ಗಡಿ ದಾಟಲಿಲ್ಲ.

## ಕಲ್ಯಾಣ ಕರ್ನಾಟಕದಲ್ಲಿ ಪ್ರವಾಹ: ತುರ್ತು ಪರಿಹಾರ ಕಾರ್ಯ ಕೈಗೊಳ್ಳಲು ಆಗ್ರಹ

• ಉದಯವಾಹಿನಿ, ಬೆಂಗಳೂರು

ಕಲ್ಯಾಣ ಕರ್ನಾಟಕದ ಹಲವಾರು ಜಿಲ್ಲೆಗಳಲ್ಲಿ ನೆರೆ ಹಾವಳಿಗೆ ಸಿಲುಕಿ ಸಂಕಷ್ಟಕ್ಕೆ ತುತ್ತಾಗಿರುವ ಜನರ ನೆರವಿಗೆ ತಕ್ಷಣವೇ ಧಾವಿಸಬೇಕು ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ಅವರು ರಾಜ್ಯ ಸರ್ಕಾರವನ್ನು ಒತ್ತಾಯ ಮಾಡಿದ್ದಾರೆ.

ಈ ಬಗ್ಗೆ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಪರಿಸ್ಥಿತಿಯನ್ನು ಅವಲೋಕಿಸಲು ಮತ್ತು ಪರಿಹಾರ ಕ್ರಮಗಳ ತ್ವರಿತ ಸಮನ್ವಯವನ್ನು ಖಚಿತಪಡಿಸಿಕೊಳ್ಳಲು ನಾನು ಖುದ್ದಾಗಿ ಕಲಬುರಗಿ, ಯಾದಗಿರಿ, ವಿಜಯಪುರ, ಬೀದರ್ ಮತ್ತು ರಾಯಚೂರು ಜಿಲ್ಲಾಧಿಕಾರಿಗಳೊಂದಿಗೆ ದೂರವಾಣಿಯಲ್ಲಿ ಮಾತುಕತೆ ನಡೆಸಿ ಪರಿಹಾರ ಕಾರ್ಯ, ಆಗಿರುವ ನಷ್ಟದ ಬಗ್ಗೆ ಮಾಹಿತಿ ಪಡೆದು ತುರ್ತು ಕ್ರಮ ವಹಿಸುವಂತೆ ಸೂಚಿಸಿದ್ದೇನೆ ಎಂದು ತಿಳಿಸಿದ್ದಾರೆ. ಕಲ್ಯಾಣ ಕರ್ನಾಟಕದ ಕಲಬುರಗಿ, ವಿಜಯಪುರ, ಬೀದರ್, ರಾಯಚೂರು ಮತ್ತು ಕೊಪ್ಪಳ ಸೇರಿ ವಿವಿಧ ಜಿಲ್ಲೆಗಳಲ್ಲಿ ಭಾರೀ ಪ್ರವಾಹ ಉಂಟಾಗಿ ಜನರು ಅತೀವ ಸಂಕಷ್ಟಕ್ಕೆ ಸಿಲುಕಿದ್ದಾರೆ. ಅವರ ಕ್ಷೇಮಕ್ಕಾಗಿ ನಾನು ಹೃದಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ. ಈ ಸಂಕಷ್ಟದ ಸಮಯದಲ್ಲಿ ಪ್ರತಿಯೊಬ್ಬರ ಜೀವ ರಕ್ಷಣೆ, ಅವರಿಗೆ ಅಗತ್ಯ ಸೌಕರ್ಯ ಕಲ್ಪಿಸುವುದು ರಾಜ್ಯ ಸರ್ಕಾರದ ಆದ್ಯ ಕರ್ತವ್ಯ ಎಂದು ಅವರು ಒತ್ತಿ ಹೇಳಿದ್ದಾರೆ.

ನೆರೆಪೀಡಿತ ಪ್ರತೀ ತಾಲ್ಲೂಕಿನಲ್ಲಿ ಕಾಳಜಿ ಕೇಂದ್ರಗಳನ್ನು ತೆರೆಯಬೇಕು ಮತ್ತು ಎಲ್ಲಾ ತುರ್ತು ಸೌಲಭ್ಯಗಳು ಜನರಿಗೆ ಸುಲಭವಾಗಿ ಲಭ್ಯವಾಗುವಂತೆ ನೋಡಿಕೊಳ್ಳಬೇಕೆಂದು ಒತ್ತಾಯಿಸುತ್ತೇನೆ. ಆಹಾರ, ಕುಡಿಯುವ ನೀರು, ಉಡುಪು, ಹೊದಿಕೆ ಮತ್ತು ತುರ್ತು ಔಷಧಿಗಳ ಸಾಕಷ್ಟು ದಾಸ್ತಾನನ್ನು ವಿಳಂಬವಿಲ್ಲದೆ ಅಷ್ಟೂ ಜಿಲ್ಲೆಗಳಿಗೂ ತಲುಪಿಸಬೇಕು. ಓಆಖಈ ಮತ್ತು ಖಆಖಈ ಸಿಬ್ಬಂದಿ ರಕ್ಷಣಾ ಪ್ರಯತ್ನಗಳನ್ನು ತೀವ್ರಗೊಳಿಸಿ ವೃದ್ಧರು, ಮಕ್ಕಳು ಮತ್ತು ಮಹಿಳೆಯರ ರಕ್ಷಣೆಗೆ ಹೆಚ್ಚು ಮುತುವರ್ಜಿ ವಹಿಸಬೇಕು ಎಂದು ಕೇಂದ್ರ ಸಚಿವರು ಸಲಹೆ ನೀಡಿದ್ದಾರೆ.

ವಿದ್ಯಾರ್ಥಿಗಳ ಬಗ್ಗೆಯೂ ವಿಶೇಷ ಗಮನ ಹರಿಸಬೇಕು. ಶಾಲೆ, ಹಾಸ್ಟೆಲ್ ಮತ್ತು ಶಿಕ್ಷಣ ಸಂಸ್ಥೆಗಳನ್ನು ತಕ್ಷಣವೇ ತಾತ್ಕಾಲಿಕ ಪರಿಹಾರ-ಆರೋಗ್ಯ ಕೇಂದ್ರಗಳನ್ನಾಗಿ ಪರಿವರ್ತಿಸಿ ನೆರೆಪೀಡಿತ ಕುಟುಂಬಗಳು, ಚಿಕ್ಕ ಮಕ್ಕಳು ಸುರಕ್ಷಿತ ಸ್ಥಳದಲ್ಲಿ ಆಶ್ರಯ ಪಡೆಯಲು ಸೂಕ್ತ ವ್ಯವಸ್ಥೆ ಮಾಡಬೇಕು ಎಂದು ಅವರು ಹೇಳಿದ್ದಾರೆ.



ಜನರ ಪ್ರಾಣ ನಷ್ಟದ ಜೊತೆಗೆ ಈ ಜಿಲ್ಲೆಗಳಲ್ಲಿ ತೀವ್ರ ಬೆಳೆನಷ್ಟ ಮತ್ತು ಹಾನಿ ಸಂಭವಿಸಿದೆ. ರೈತರ ಸ್ಥಿತಿ ಹೃದಯವಿದ್ರಾವಕವಾಗಿದ್ದು, ಅವರಿಗೆ ಸೂಕ್ತ-ಸಕಾಲಿಕ ಪರಿಹಾರ ಒದಗಿಸಬೇಕು. ಇದರಿಂದ ಅವರು ತಮ್ಮ ಜೀವನೋಪಾಯವನ್ನು ಮರಳಿ ಪಡೆಯಲು ಸಾಧ್ಯವಾಗುತ್ತದೆ. ಪಶು-ಪ್ರಾಣಿಗಳು ಅತೀವ ಸಂಕಷ್ಟಕ್ಕೆ ತುತ್ತಾಗಿವೆ. ವಿಶೇಷವಾಗಿ ಕೃಷಿ ಸಮುದಾಯದ ಜೀವನಾಡಿಯಾಗಿರುವ ಜಾನುವಾರುಗಳಿಗೆ ಮೇವು, ಆಶ್ರಯ ಮತ್ತು ವೈದ್ಯಕೀಯ ಆರೈಕೆ ಒದಗಿಸಲು ತುರ್ತು ಕ್ರಮ ಕೈಗೊಳ್ಳಬೇಕು. ಜನಾರೋಗ್ಯ, ಪಶು ಆರೋಗ್ಯ ತಂಡಗಳನ್ನು ಸದಾ ಸನ್ನದ್ಧ ಸ್ಥಿತಿಯಲ್ಲಿಡಬೇಕು ಎಂದು ಸಚಿವರು ಒತ್ತಾಯ ಮಾಡಿದ್ದಾರೆ.

### ಸಾಧ್ಯವಿರುವ ಎಲ್ಲಾ ಸಹಕಾರವನ್ನೂ ಕೇಂದ್ರವು ನೀಡಲಿದೆ

ಗೌರಿ ಗಣೇಶ ಹಬ್ಬದ ಸಮಯದಲ್ಲಿ ಬೀದರ್, ವಿಜಯಪುರ, ಯಾದಗಿರಿ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಭಾರೀ ಮಳೆ ಸುರಿದು ಈಗಾಗಲೇ ಸಂಕಷ್ಟಕ್ಕೆ ತುತ್ತಾಗಿವೆ. ಆಯುಧ ಪೂಜೆ, ದಸರಾ, ದೀಪಾವಳಿಯ ಸಮಯದಲ್ಲಿ ಜನರು ಮತ್ತೆ ತೊಂದರೆ ಅನುಭವಿಸುವಂತೆ ಆಗಬಾರದು. ಆದ್ದರಿಂದ ಪರಿಹಾರ ಕಾರ್ಯಗಳು ನಿರಂತರವಾಗಿ ಮುಂದುವರಿಯಬೇಕು ಎಂದು ಅವರು ತಿಳಿಸಿದ್ದಾರೆ. ಪ್ರಧಾನಿಗಳಾದ ನರೇಂದ್ರ ಮೋದಿ ಅವರ ಕೇಂದ್ರ ಸರಕಾರವು ಕರ್ನಾಟಕದ ಪರವಾಗಿ ದೃಢವಾಗಿ ನಿಲ್ಲುತ್ತದೆ ಎಂದು ಕೇಂದ್ರ ಸಚಿವನಾಗಿ ಖಚಿತ ಭರವಸೆ ನೀಡುತ್ತೇನೆ. ನಮ್ಮ ಜನರ ಕ್ಷೇಮ ಮತ್ತು ಅವರ ಸುರಕ್ಷಿತ ಜೀವನೋಪಾಯಕ್ಕಾಗಿ ಕಾಳಜಿ ವಹಿಸಿ ಸಾಧ್ಯವಿರುವ ಎಲ್ಲಾ ಸಹಕಾರವನ್ನೂ ಕೇಂದ್ರವು ನೀಡಲಿದೆ ಎಂದು ಸಚಿವ ಕುಮಾರಸ್ವಾಮಿ ಅವರು ಭರವಸೆ ನೀಡಿದ್ದಾರೆ.


# ರಾಜ್ಯ ಸರ್ಕಾರ ಕೂಡಲೇ ಮೀಸಲಾತಿ ಪ್ರಮಾಣ ಹೆಚ್ಚಿಸದಿದ್ದಲ್ಲಿ ಉಗ್ರ ಹೋರಾಟ

■ ಬಂಜಾರ ಸಮುದಾಯದ ಬಗ್ಗೆ ಗಮನಹರಿದೇ ಇರುವದಕ್ಕೆ ಕಾಣದ ಕೈಗಳ ಕೈವಾಡ ■ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿ ಎಚ್ಚರಿಕೆ

• ಉಮೇಶ್ ಬಾಣಾವರ ಉದಯವಾಹಿನಿ ಬೆಂಗಳೂರು

ಸರ್ಕಾರ ರಾಜ್ಯದಲ್ಲಿರುವ ಬಂಜಾರ ಸಮುದಾಯಕ್ಕೆ ಸೂಕ್ತ ಮೀಸಲಾತಿ ಕಲ್ಪಿಸಬೇಕಿದೆ. ಸಮಾಜದ ಸ್ಥಿತಿಗತಿಯನ್ನು ಅರಿಯಬೇಕಿದೆ. ಆರ್ಥಿಕ ಪರಿಸ್ಥಿತಿ ಜೀವನ ನಿರ್ವಹಣೆಗೆ ಒಂದೆಡೆಯಿಂದ ಮತ್ತೊಂದೆಡೆಗೆ ಕೂಲಿಗಾಗಿ ಗೂಳೇ ಹೋಗಿ ಜೀವನ ನಿರ್ವಹಿಸುತ್ತಿದ್ದಾರೆ ಇಂತಹ ಸಮುದಾಯದ ಪರಿಸ್ಥಿತಿಯನ್ನು ಅರ್ಥೈಸಿಕೊಂಡರೆ ಕಣ್ಣೀರು ಬರುವಂತ ಪರಿಸ್ಥಿತಿ ಇದೆ.

ತಮ್ಮ ಖಾಸಗಿ ಹಾಗೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಅರಸಿಕೆರೆ ತಾಲ್ಲೂಕಿನಲ್ಲಿ ಭಾಗವಹಿಸಿದ ಅವರು ಉದಯವಾಹಿನಿ ಪತ್ರಿಕೆಯೊಂದಿಗೆ ಮಾತನಾಡಿ ಹಿಂದುಳಿದ ವರ್ಗಗಳ ಧ್ವನಿಯಾಗಿರುವ ಉದಯವಾಹಿನಿ ಪತ್ರಿಕೆಯ ಬಗ್ಗೆ ಶ್ಲಾಘನೆ ವ್ಯಕ್ತಪಡಿಸಿದರು. ಅರಸೀಕೆರೆಯ ಮೈಸೂರು ಸೀಮೆ ಲಂಬಾಣಿ ಸಂಘದ ಕೇಂದ್ರ ಕಚೇರಿಯಲ್ಲಿ ತಮ್ಮ ಸಮುದಾಯದ ಮೀಸಲಾತಿ ಹೆಚ್ಚಿಗೆ ಬಗ್ಗೆ ಸಭೆ ನಡೆಸಿ ಮಾತನಾಡಿ ಮುಂದಿನ ಹೋರಾಟದ ರೂಪುರೇಷೆಗಳ ಬಗ್ಗೆ ಚರ್ಚೆ ನಡೆಸಿದರು . ಮೈಸೂರು



ಸೀಮೆ ಲಂಬಾಣಿ ಸಂಘದ ಜಿಲ್ಲಾ ಉಪಾಧ್ಯಕ್ಷ ಹಾಗೂ ಸರ್ಕಾರದ ನಾಮ ನಿರ್ದೇಶಕ ಸದಸ್ಯರಾದ ಜಯಣ್ಣ, ಕೃಷ್ಣನಾಯಕ್, ಗಂಗಾಧರ್ ಸೇರಿದಂತೆ ಹಲವಾರು ಮುಖಂಡರು ಮಾತನಾಡಿ ಹಾಸನ ಜಿಲ್ಲೆಯಿಂದಲೇ ಸರ್ಕಾರ ನಮಗೆ ನೀಡಿರುವ ಅಧಿಕಾರಗಳನ್ನು ರಾಜೀನಾಮೆ ನೀಡುವ ಮುಖಾಂತರ ನಮ್ಮ ಸಮುದಾಯಕ್ಕೆ ಸಿಗದ ಮೀಸಲಾತಿ ಸಿಗುವವರೆಗೆ ನಮಗೆ ಯಾವ ಅಧಿಕಾರವೂ ಬೇಡ. ಆದ್ದರಿಂದ ನಮ್ಮ ನಮ್ಮ ಅಧಿಕಾರದ ರಾಜೀನಾಮೆಗಳನ್ನು ನೀಡಿ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿಗಳ ನೇತೃತ್ವದಲ್ಲಿ ಸರ್ಕಾರದ ವಿರುದ್ಧ ಜಿಲ್ಲಾಧಿಕಾರಿಗಳಿಗೆ ಮನವಿ ನೀಡಿ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ. ಇದೇ ಸಂದರ್ಭದಲ್ಲಿ ಶ್ರೀ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿಗಳೊಂದಿಗೆ ಉದ್ಯಮಿಗಳು ಹಾಗೂ ಕಾಂಗ್ರೆಸ್ ಪ್ರಭಾವಿ ಮುಖಂಡರಾದ ಸೋನು ಲಂಬಾಣಿ ಉಪಸ್ಥಿತರಿದ್ದರು.

### ಫ್ರೀಡಂ ಪಾರ್ಕ್‌ನಲ್ಲಿ ಸರ್ಕಾರದ ವಿರುದ್ಧ ಬೃಹತ್ ಪ್ರತಿಭಟನೆ

ಮುಖ್ಯಮಂತ್ರಿಗಳಿಗೆ ಈ ಬಂಜಾರ ಸಮುದಾಯದ ಬಗ್ಗೆ ಗಮನಹರಿದೇ ಇರುವದಕ್ಕೆ ಕಾಣದ ಕೈಗಳ ಕೈವಾಡವಿದೆ ಆದರೆ ಮುಖ್ಯಮಂತ್ರಿಗಳು ಹಿಂದುಳಿದ ವರ್ಗಗಳ ನೇತಾರರು, ರಾಜ್ಯ ಕಂಡಂತ ಎರಡನೇ ದೇವರಾಜ ಅರಸು ಎಂಬ ಹೆಸರು, ಕೀರ್ತಿ ಪಡೆದಿದ್ದಾರೆ. ಬಂಜಾರ ಸಮುದಾಯಕ್ಕೆ ಕೂಡಲೇ ಮೀಸಲಾತಿಯನ್ನು ಹೆಚ್ಚಿಸದಿದ್ದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದಲೂ ಪ್ರತಿಭಟನೆ ನಡೆಸಿ ಕೊನೆಗೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಸರ್ಕಾರದ ವಿರುದ್ಧ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಸರ್ಕಾರಕ್ಕೆ ಕರ್ನಾಟಕದ ಬಂಜಾರ ಸಮುದಾಯದ ಪೀಠಾಧ್ಯಕ್ಷರಾದ ಚಿತ್ರದುರ್ಗದ ಶ್ರೀ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿ ಅರಸೀಕೆರೆಯಲ್ಲಿ ಸರ್ಕಾರಕ್ಕೆ ಎಚ್ಚರಿಸಿದ್ದಾರೆ.



ಕಾಂಗ್ರೆಸ್ ಪಕ್ಷದ ಮುಖಂಡ ಉದ್ಯಮಿಗಳು ಆಗಿರುವ ಸೋನು ಲಂಬಾಣಿ ಅವರಿಗೆ ಅರಸೀಕೆರೆಯ ಬಂಜಾರ್ ಮೈಸೂರು ಸೀಮೆ ಲಂಬಾಣಿ ಸಂಘದ ವತಿಯಿಂದ ಸನ್ಮಾನಿಸಲಾಯಿತು

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹11,548/Gram24ct ₹10,585/Gram22ct ಬೆಳ್ಳಿ: ₹149.50/Gram

## ಮಾನವ ಕಳ್ಳಸಾಗಣಿಕೆ ಹೆಸರಲ್ಲಿ ಮಹಿಳಾ ವಿಜ್ಞಾನಿಗೆ ಬೆದರಿಕೆ

• ಉದಯವಾಹಿನಿ, ಬೆಂಗಳೂರು

ಮಾನವ ಕಳ್ಳಸಾಗಣಿಕೆ ಪ್ರಕರಣದಲ್ಲಿ ನೀನು ಭಾಗಿಯಾಗಿದ್ದೀಯ ಅಂತ ಮಹಿಳಾ ವಿಜ್ಞಾನಿಗೆ ಬೆದರಿಕೆ ಹಾಕಿ ಆನ್‌ಲೈನ್ ವಂಚಕರು ಲಕ್ಷ ಲಕ್ಷ ಪೀಕಿದ ಪ್ರಕರಣ ಬೆಂಗಳೂರಿನಲ್ಲಿ ನಡೆದಿದೆ. ಇತ್ತೀಚೆಗಷ್ಟೇ ಸಂಸದರ ಪತ್ನಿಗೆ ಮನಿಲ್ಯಾಂಡ್ರಿಂಗ್ ಮಾಡಿದ್ದೀರಿ ಎಂದು ಬೆದರಿಸಿ 14 ಲಕ್ಷ ರೂ. ಹಣ ಹಾಕಿಸಿಕೊಂಡಿದ್ದರು. ಅದೇ ರೀತಿ ಮಹಿಳಾ ವಿಜ್ಞಾನಿ ಐಐಎಸ್‌ಸಿಯ ನ್ಯೂ ಹೌಸಿಂಗ್ ಕಾಲೋನಿ ನಿವಾಸಿ ಡಾ.ಸಂಧ್ಯಾ ಅವರಿಗೆ ಬೆದರಿಸಿ ಲಕ್ಷ ಲಕ್ಷ ಹಣ ಹಾಕಿಸಿಕೊಂಡಿದ್ದಾರೆ. ಸೆ.16 ರಂದು ಸಂಧ್ಯಾ ಅವರಿಗೆ ಅಪರಿಚಿತ ವ್ಯಕ್ತಿ ಕರೆ ಮಾಡಿ, ನಿಮ್ಮ ಮೊಬೈಲ್ ನಂಬರ್ ಬೇರೆ ಕಡೆಗಳಲ್ಲಿ ಬಳಸಲಾಗುತ್ತಿದೆ ಎಂದು ಹೇಳಿದ್ದ. ಬಳಿಕ 17 ಪ್ರಕರಣಗಳು ದಾಖಲಾಗಿವೆ ಎಂದು ಮೆಸೇಜ್ ಮಾಡಿದ್ದ. ಇದಾದ ಬಳಿಕ ಮತ್ತೊಬ್ಬ ಕರೆ ಮಾಡಿ ನೀವು ಮಾನವ ಕಳ್ಳಸಾಗಾಣಿಕೆ ಪ್ರಕರಣದಲ್ಲಿ ಭಾಗಿಯಾಗಿದ್ದೀರಿ ಎಂದು ಬೆದರಿಸಿದ್ದ. ಅಲ್ಲದೇ ಸುಪ್ರೀಂ ಕೋರ್ಟ್ ಕೆಲ ದಾಖಲೆಗಳನ್ನು ತೋರಿಸಿ, ನಿಮ್ಮನ್ನು ಸಿಬಿಐ ಅಧಿಕಾರಿಗಳು ಅರೆಸ್ಟ್ ಮಾಡುತ್ತಾರೆ ಎಂದು ಬೆದರಿಕೆ ಹಾಕಿದ್ದ. ಬಳಿಕ ಸಂಧ್ಯಾ ಅವರ ಬಳಿ 8.8 ಲಕ್ಷ ರೂ. ಹಣ ಬ್ಯಾಂಕ್ ಖಾತೆಯಿಂದ ವರ್ಗಾವಣೆ ಮಾಡಿಸಿಕೊಂಡಿಸಿ ಕೊಂಡಿದ್ದರು. ಈ ಸಂಬಂಧ ಕೇಂದ್ರ ವಿಭಾಗದ ಸೆನ್ ಠಾಣೆಯಲ್ಲಿ FIR ದಾಖಲಾಗಿದ್ದು, ವಂಚಕರಿಗೆ ಪೊಲೀಸರು ಬಲೆ ಬೀಸಿದ್ದಾರೆ.

## ಬಿಕ್ಕಟ್ಟು, ಸವಾಲು ಎದುರಿಸಿದ್ದ ಇಂದಿರಾ: ಲೇಖಕ ಪೀಟರ್ ರೋನಾಲ್ಡ್

• ಉದಯವಾಹಿನಿ, ಬೆಂಗಳೂರು

ದೇಶದ ಪ್ರಧಾನಿಯಾಗಿ ಇಂದಿರಾ ಗಾಂಧಿ ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ ಹಲವು ಬಿಕ್ಕಟ್ಟು, ಸಾಕಷ್ಟು ಸವಾಲುಗಳನ್ನು ಎದುರಿಸಬೇಕಾಗಿತ್ತು ಎಂದು ಲೇಖಕ ಪೀಟರ್ ರೋನಾಲ್ಡ್ ಡಿಸೋಜಾ ಹೇಳಿದರು. ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ ಏರ್ಪಡಿಸಿದ್ದ 50 ಇಯರ್ಸ್ ಆಫ್ ದಿ ಇಂಡಿಯನ್ ಎಮರ್ಜೆನ್ಸಿ' ಎಂಬ ಪುಸ್ತಕ ಕುರಿತು ನಡೆದ ಗೋಷ್ಠಿಯಲ್ಲಿ ಮಾತನಾಡಿದರು.

ಆರ್ಥಿಕ, ರಾಜಕೀಯ ಬಿಕ್ಕಟ್ಟಿನ ಜತೆಗೆ ಬಡತನ, ನಿರುದ್ಯೋಗ, ಅನಕ್ಷರತೆ ಸೇರಿ ಹಲವು ಸಮಸ್ಯೆಗಳಿದ್ದವು. ಎಲ್ಲಾ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಿ, ಪರಿಹರಿಸಲು ಪ್ರಯತ್ನಿಸಿದರು. ಪುತ್ರ ಸಂಜಯ್ ಗಾಂಧಿ ಹೊರತುಪಡಿಸಿ ಯಾರನ್ನೂ ಅವರು ಹೆಚ್ಚು ನಂಬುತ್ತಿರಲಿಲ್ಲ.

1975ರಲ್ಲಿ ತುರ್ತು ಪರಿಸ್ಥಿತಿ ಘೋಷಿಸಿದಾಗ ಸಾಕಷ್ಟು ವಿರೋಧ ವ್ಯಕ್ತವಾಯಿತು. ಹಲವು ನಾಯಕರನ್ನು ಬಂಧಿಸಿ, ಜೈಲಿಗೆ ಕಳುಹಿಸಲಾಯಿತು. ನಂತರ ನಡೆದ ಬೆಳವಣಿಗೆಯಲ್ಲಿ ಇಂದಿರಾ ಅವರು ಯಾರ ಸಲಹೆಯನ್ನು ಪಡೆಯದೇ ತುರ್ತು ಪರಿಸ್ಥಿತಿಯನ್ನು ಹಿಂದಕ್ಕೆ ಪಡೆದು ಅಚ್ಚರಿ ಮೂಡಿಸಿದ್ದರು' ಎಂದು ತಿಳಿಸಿದರು. ವಿರೋಧ ಪಕ್ಷದ ನಾಯಕರಿಗೆ ಪ್ರಚಾರ ಮಾಡಲು ಅವಕಾಶ ನೀಡಿದರು. ತಾನು ಸೋಲುವುದು ಖಚಿತ ಎಂಬುದು ಅವರಿಗೂ ಗೊತ್ತಿತ್ತು. ಇಂದಿರಾ ಗಾಂಧಿ ಧೈರ್ಯವಂತೆ, ಬಿಕ್ಕಟ್ಟು ಉಂಟಾದಾಗ ಎದೆಗುಂದುತ್ತಿರಲಿಲ್ಲ ಎಂದರು.

## ಸಫಾರಿಗೆ ತೆರಳಿದ್ದ ಪ್ರವಾಸಿಗ ಹೃದಯಾಘಾತಕ್ಕೆ ಬಲಿ

• ಉದಯವಾಹಿನಿ, ಆನೇಕಲ್

ಸಫಾರಿಗೆ ಹೋಗಿದ್ದ ಪ್ರವಾಸಿಗ ಹೃದಯಾಘಾತಕ್ಕೆ ಬಲಿಯಾಗಿರುವ ಘಟನೆ ಬೆಂಗಳೂರು ಹೊರವಲಯ ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ನಡೆದಿದೆ.

ಬೆಂಗಳೂರಿನ ನಾಗರಬಾವಿಯ ನಿವಾಸಿ ನಂಜಪ್ಪ (45) ಮೃತ ವ್ಯಕ್ತಿ. ಸಫಾರಿಗೆ ಬಂದಿದ್ದ ವೇಳೆ ಘಟನೆ ನಡೆದಿದೆ. ಪತ್ನಿ ಇಬ್ಬರು ಮಕ್ಕಳೊಂದಿಗೆ ಸಫಾರಿ ವೀಕ್ಷಣೆ ಬಂದಿದ್ದ ವೇಳೆ ನಂಜಪ್ಪ ಸಫಾರಿ ಬಸ್ಸಿನಲ್ಲಿಯೇ ಪ್ರಜ್ಞೆ ತಪ್ಪಿ ಬಿದ್ದಿದ್ದಾರೆ. ಝೂ ಅಂಬುಲೆನ್ಸ್ ಮೂಲಕ ನಂಜಪ್ಪರನ್ನು ಆಸ್ಪತ್ರೆಗೆ ರವಾನೆ ಮಾಡಲಾಗಿದೆ. ಆದರೆ ಚಿಕಿತ್ಸೆ ಫಲಕಾರಿಯಾಗದೆ ನಂಜಪ್ಪ ಮೃತಪಟ್ಟಿದ್ದಾರೆ. ಬನ್ನೇರುಘಟ್ಟ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

## ತಿಂಗಳಿಗೆ 10,000 ರೂ. ಹೂಡಿಕೆ; 5 ವರ್ಷದಲ್ಲಿ 7.13 ಲಕ್ಷ ಗ್ಯಾರಂಟಿ ಆದಾಯ!

• ಉದಯವಾಹಿನಿ, ಬೆಂಗಳೂರು

ನೀವು ಪೋಸ್ಟ್ ಆಫೀಸಿನ ಈ ಆರ್‌ಡಿ ಯೋಜನೆಯಲ್ಲಿ ಪ್ರತಿ ತಿಂಗಳೂ 10,000/-ಗಳನ್ನು ಹೂಡಿಕೆ ಮಾಡಿದರೆ, 5 ವರ್ಷಗಳಲ್ಲಿ 7,13,658 ರುಪಾಯಿಗಳನ್ನು ಗಳಿಸಬಹುದು. ಈ ಕುರಿತ ವಿವರಗಳನ್ನು ತಿಳಿಯುವುದಕ್ಕೆ ಮುನ್ನ ಕೆಲವೊಂದು ವಿಚಾರಗಳನ್ನು ಯೋಚಿಸೋಣ. ಸ್ಟಾಕ್ ಮಾರ್ಕೆಟ್, ಮ್ಯೂಚುವಲ್ ಫಂಡ್, ಫ್ಯೂಚರ್ ಆಂಡ್ ಆಪ್ಷನ್ಸ್, ಇಟಿಎಫ್ ಮೊದಲಾದ ಹೂಡಿಕೆಯ ಆಯ್ಕೆಗಳು ಇದ್ದರೂ, ಇವುಗಳಲ್ಲಿ ಮಾರುಕಟ್ಟೆಯ ಏರಿಳಿತಗಳ ರಿಸ್ಕ್ ಇರುತ್ತದೆ. ಆದ್ದರಿಂದ ಹಲವಾರು ಮಂದಿ ಹೂಡಿಕೆದಾರರು ಈಗಲೂ ಅಂಚೆ ಇಲಾಖೆಯ ರಿಕರಿಂಗ್ ಡೆಪಾಸಿಟ್ ಯೋಜನೆಗಳಲ್ಲಿ ಹೂಡಿಕೆ ಮಾಡಲು ಬಯಸ್ತಾರೆ. ಏಕೆಂದರೆ ಇದರಲ್ಲಿ ಹೂಡಿಕೆಗೆ ಕೇಂದ್ರ ಸರಕಾರವೇ ಗ್ಯಾರಂಟಿ ನೀಡುತ್ತದೆ. ಜತೆಗೆ ಖಾತರಿಯ ಆದಾಯ ಸಿಗುತ್ತದೆ. ನಾವು ಇಲ್ಲಿ ಯಾವುದು ಶ್ರೇಷ್ಠ ಎಂದು ಹೋಲಿಕೆ ಮಾಡಲು ಹೋಗುವುದಿಲ್ಲ. ಏಕೆಂದರೆ ಮಾರುಕಟ್ಟೆ ಲಿಂಕ್ಡ್ ಹೂಡಿಕೆಗೂ ಲೋರಿಸ್ಕ್ ಇನ್‌ಸ್ಟ್ರುಮೆಂಟ್‌ಗಳಿಗೂ ಅದರದ್ದೇ ಆದ ಉದ್ದೇಶಗಳು ಇರುತ್ತವೆ. ಆದ್ದರಿಂದ ಯಾವುದು ಬೇಕು ಎಂಬ ಆಯ್ಕೆಯು ಹೂಡಿಕೆದಾರರ ವೈಯಕ್ತಿಕ ಇಷ್ಟಗಳನ್ನು, ಅಗತ್ಯಗಳನ್ನು ಅಧರಿಸಿರುತ್ತದೆ. ಅಂಚೆ ಕಚೇರಿಯಲ್ಲಿ ನ್ಯಾಶನಲ್ ಸೇವಿಂಗ್ಸ್ ರಿಕರಿಂಗ್ ಡೆಪಾಸಿಟ್ ಸ್ಕೀಮ್ ಎಂಬ ಉಳಿತಾಯ ಯೋಜನೆ ಇದೆ. ಸರಳವಾಗಿ ಪೋಸ್ಟ್ ಆಫೀಸ್ ಆರ್‌ಡಿ ಸ್ಕೀಮ್ ಅಂ ಜನ ಕರೆಯುತ್ತಾರೆ. ಈ ಆರ್‌ಡಿ ಯೋಜನೆಯಲ್ಲಿ ಪ್ರತಿ ತಿಂಗಳು 10,000/- ಹೂಡುತ್ತಾ ಬಂದರೆ, 5 ವರ್ಷಗಳಲ್ಲಿ ನಿಮ್ಮ ಒಟ್ಟು ಠೇವಣಿ ಸಂಗ್ರಹ 6,00,000/- ಆಗುತ್ತದೆ. ಈಗ ವಾರ್ಷಿಕ 6.7% ಬಡ್ಡಿ ದರ ಇದಕ್ಕಿದೆ. ಹೀಗಾಗಿ ಬಡ್ಡಿಯ ಮೊತ್ತವಾಗಿ 1,13,658/- ಸೇರಿದಂತೆ ಒಟ್ಟು 7,13,658/- ಖಾತರಿಯ ಆದಾಯ ಸಿಗುತ್ತದೆ.

## ಮದುವೆಯಾದ ಮೂರೇ ದಿನಕ್ಕೆ ವರದಕ್ಷಿಣೆ ಕೇಸ್ ಹಾಕಿದ್ದಾಕೆಗೆ ಹಿನ್ನಡೆಯಾಗಿದ್ದೇಕೆ?

• ಉದಯವಾಹಿನಿ, ಬೆಂಗಳೂರು

ಮದುವೆಯಾದ ಮೂರೇ ದಿನದಲ್ಲಿ ವರದಕ್ಷಿಣೆ ಕಿರುಕುಳ ನೀಡಿದ ಆರೋಪ ಪ್ರಕರಣದಲ್ಲಿ ಹೈಕೋರ್ಟ್, ವಿಚ್ಛೇದನದ ತೀರ್ಪು ಎತ್ತಿಹಿಡಿದಿದೆ. ಇದರಿಂದಾಗಿ ವೈವಾಹಿಕ ಸಂಬಂಧ ಪುನರಾರಂಭ ಕೋರಿ ಅರ್ಜಿ ಸಲ್ಲಿಸಿದ್ದ ಪತ್ನಿಗೆ ಹಿನ್ನಡೆಯಾಗಿದ್ದು, ಆಕೆ ಇನ್ನು ಶಾಶ್ವತವಾಗಿ ಪತಿಯಿಂದ ದೂರ ಉಳಿಯಬೇಕಾಗಿದೆ. ವಿಚ್ಛೇದನ ಮಂಜೂರು ಮಾಡಿದ್ದ ಕೌಟುಂಬಿಕ ನ್ಯಾಯಾಲಯದ ಆದೇಶ ಪ್ರಶ್ನಿಸಿ ಮತ್ತು ಪತಿಯೊಂದಿಗೆ ಮತ್ತೆ ವೈವಾಹಿಕ ಜೀವನ ಪುನರಾರಂಭಿಸಲು ಕೋರಿ ಮಹಿಳೆಯೊಬ್ಬರು ಸಲ್ಲಿಸಿದ್ದ ಎರಡು ಪ್ರತ್ಯೇಕ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಜಯಂತ್ ಬ್ಯಾನರ್ಜಿ ಮತ್ತು ಉಮೇಶ್ ಎಂ.ಅಡಿಗ ಅವರಿದ್ದ ವಿಭಾಗೀಯ ಪೀಠ ಈ ಆದೇಶ ನೀಡಿದೆ. ಪ್ರಕರಣದಲ್ಲಿ ಪತ್ನಿ ವಿವಾಹದ ಬಳಿಕ ಪತಿಯ ಮನೆಯಲ್ಲಿ ಮೂರು ದಿನ ಮಾತ್ರ ನೆಲೆಸಿದ್ದು, ಹೆಚ್ಚುವರಿ ವರದಕ್ಷಿಣೆ ತರುವಂತೆ ತನಗೆ ಕಿರುಕುಳ ನೀಡಿ ಕ್ರೂರವಾಗಿ ನಡೆದುಕೊಂಡಿದ್ದಾರೆಂದು ಆರೋಪಿಸಿದ್ದಾರೆ. ಆದರೆ, ಅದಕ್ಕೆ ಯಾವುದೇ ಸಾಕ್ಷ್ಯಾಧಾರ ಒದಗಿಸಿಲ್ಲ. ಆದ್ದರಿಂದ ಅದನ್ನು ಸಾಬೀತುಪಡಿಸಲು ಸಾಧ್ಯವಾಗಿಲ್ಲ, ಎಂದು ನ್ಯಾಯಪೀಠ ತಿಳಿಸಿದೆ. ಅಲ್ಲದೆ, ಅರ್ಜಿದಾರರಿಗೆ ಮಾನಸಿಕ ಅಸ್ವಸ್ಥತೆ ಇರುವ ಸಂಬಂಧ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಆದರೆ, ಅವರು ಚಿಕಿತ್ಸೆ ಮುಂದುವರಿಸಲು ನಿರಾಕರಿಸಿದ್ದಾರೆಂಬ ಅಂಶ ದಾಖಲೆಗಳಿಂದ ಗೊತ್ತಾಗಿದೆ. ಅರ್ಜಿದಾರರು ಕೌಟುಂಬಿಕ ನ್ಯಾಯಾಲಯದ ವಿಚಾರಣೆ ವೇಳೆ ಈ ಅಂಶವನ್ನು ಒಪ್ಪಿಕೊಂಡಿದ್ದರು. ಅಲ್ಲದೆ, ಮಾನಸಿಕವಾಗಿ ಯಾವುದೇ ಸಮಸ್ಯೆ ಇಲ್ಲದಿದ್ದರೂ ಪೊಲೀಸರು ಮತ್ತು ಸಂಬಂಧಿಕರ ಒತ್ತಡದ ಮೇಲೆ ಚಿಕಿತ್ಸೆ ಪಡೆದುಕೊಂಡಿದ್ದೆಂದು ತಿಳಿಸಿದ್ದಾರೆ.

# ಕರ್ನಾಟಕದಲ್ಲಿ ಅನಿಲ ಕೊಳವೆ ಅಳವಡಿಕೆ ಶುಲ್ಕ ಕಡಿತ

### ಬಿಬಿಎಂಪಿಗೂ ಕೋಟ್ಯಂತರ ರೂ ಖೋತಾ; ಲೋಕಾಯುಕ್ತರಿಂದ ಅಧಿಕಾರಿಗಳಿಗೆ ನೋಟಿಸ್

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಅನಿಲ ಪೂರೈಕೆ ಕೊಳವೆಗಳ ಅಳವಡಿಕೆಗೆ ಕಡಿಮೆ ಶುಲ್ಕ ನಿಗದಿಪಡಿಸಿ ಖಾಸಗಿ ಕಂಪನಿಗಳಿಗೆ ಅನುಕೂಲ ಮಾಡಿ ಕೊಟ್ಟು ಅಕ್ರಮವೆಸಗಿರುವ ಆರೋಪಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತರು, ನಗರಾಭಿವೃದ್ಧಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸಿದ್ದ ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಿದ್ದಾರೆ.

ರಾಜ್ಯದಲ್ಲಿ ನಗರ ಅನಿಲ ವಿತರಣೆ ನೀತಿ ಜಾರಿಗೊಳಿಸಿದ್ದರಿಂದ ಬಿಬಿಎಂಪಿ ಈಗ ಜಿಬಿಎ ಸೇರಿದಂತೆ ಸ್ಥಳೀಯ ಸಂಸ್ಥೆಗಳಿಗೆ 5006 ಕೋಟಿ ರೂ. ಆರ್ಥಿಕ ನಷ್ಟವಾಗಿರುವ ದೂರಿನ ಹಿನ್ನೆಲೆಯಲ್ಲಿ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ ರಾಕೇಶ್ ಸಿಂಗ್ ಹಾಲಿ ರೇರಾ ಅಧ್ಯಕ್ಷ, ಉಪ ಕಾರ್ಯದರ್ಶಿಯಾಗಿದ್ದ ತುಕಾರಾಂ ಕಲ್ಯಾಣ್‌ಕರ್ ಹಾಲಿ ಪ್ರತಿಪಕ್ಷ ನಾಯಕರ ಆಪ್ತ ಸಹಾಯಕ, ಅಧೀನ ಕಾರ್ಯದರ್ಶಿ ಎನ್.ಕೆ.ಲಕ್ಷ್ಮೀಸಾಗರ್, ಶಾಖಾಧಿಕಾರಿ ಚೆನ್ನಕೇಶವ, ಸಹಾಯಕ ಜಿ.ಆರ್.ಹೇಮಂತ್ ಅವರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ.

ಕೆಆರ್‌ಎಸ್ ಪಕ್ಷವು ನೀಡಿರುವ ದೂರಿನ ವಿಚಾರಣೆ ಕೈಗೆತ್ತಿಕೊಂಡಿರುವ ಲೋಕಾಯುಕ್ತರು, ಅ.6ರೊಳಗೆ ಸೂಕ್ತ ದಾಖಲಾತಿಗಳೊಂದಿಗೆ ಉತ್ತರ, ಆಕ್ಷೇಪಣೆ ಸಲ್ಲಿಸಬೇಕು. ಇಲ್ಲವಾದಲ್ಲಿ ಆಕ್ಷೇಪಣೆಯಿಲ್ಲವೆಂದು ಪರಿಗಣಿಸಿ ಕಾನೂನುರೀತ್ಯ ಕ್ರಮ ಜರುಗಿಸಲಾಗುವುದು ಎಂದು ಸೂಚಿಸಿದ್ದಾರೆ. ರಾಜ್ಯದಲ್ಲಿ 18 ಸಿಎನ್‌ಜಿ ಅನಿಲ ಸರಬರಾಜು ಯೋಜನೆಗಳಿಗೆ ಕೇಂದ್ರ ಪೆಟ್ರೋಲಿಯಂ ಸಚಿವಾಲಯವು ಟೆಂಡರ್ ಆಹ್ವಾನಿಸಿ ಅನುಮೋದನೆ ನೀಡಿದೆ. 2015ರಿಂದಲೇ ಯೋಜನೆಗಳು ಅನುಷ್ಠಾನಗೊಳ್ಳುತ್ತಿವೆ. ರಾಜ್ಯ ನಗರ ಅನಿಲ ವಿತರಣೆ (ಸಿಜಿಡಿ) ನೀತಿ ಜಾರಿ ಸಂಬಂಧ ಬಿಜೆಪಿ ಸರಕಾರದ ಅವಧಿಯಲ್ಲಿ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳದೆ ಮುಂದೂಡಲಾಗಿತ್ತು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ತಕ್ಷಣವೇ ಈ ನೀತಿಗೆ ಅನುಮೋದನೆ ನೀಡಿದೆ. ಪರಿಣಾಮ, ಅನಿಲ ಕೊಳವೆಗಳ ಅಳವಡಿಕೆಗೆ ಪ್ರತಿ ಮೀಟರ್‌ಗೆ ನಿಗದಿಪಡಿಸಿದ್ದ 1857 ರೂ. ಪರವಾನಗಿ ಶುಲ್ಕ ಹಾಗೂ 100 ರೂ. ಮೇಲ್ವಿಚಾರಣಾ ಶುಲ್ಕವನ್ನು ಕೇವಲ 1 ರೂ.ಗೆ ಇಳಿಕೆ ಮಾಡಲಾಯಿತು. ಆ ಮೂಲಕ ಅನಿಲ ಪೂರೈಕೆ ಸಂಸ್ಥೆಗಳಿಗೆ ಅನುಕೂಲ ಮಾಡಿ ಕೊಟ್ಟಿರುವ ಆರೋಪವಿದೆ.

> ಲೋಕೋಪಯೋಗಿ ಇಲಾಖೆಗೆ ಸಾವಿರಾರು ಕೋಟಿ ರೂ. ನಷ್ಟ

**5006 ಕೋಟಿ ರೂ. ಖೋತಾ:** ಈ ಮೊದಲು ರಾಜ್ಯಾದ್ಯಂತ ಮೂಲಸೌಕರ್ಯ ಕೊಳವೆ, ಕೇಬಲ್‌ಗಳ ಅಳವಡಿಕೆಗೆ ಪ್ರತಿ ಮೀಟರ್‌ಗೆ 1857 ರೂ. ಪರವಾನಗಿ ಶುಲ್ಕ, 100 ರೂ. ಮೇಲ್ವಿಚಾರಣಾ ಶುಲ್ಕ ವಿಧಿಸಲಾಗುತ್ತಿತ್ತು. ಅದರಂತೆ ಪರವಾನಗಿ ಪಡೆದ ಅನಿಲ ಸರಬರಾಜು ಸಂಸ್ಥೆಗಳಿಂದ ಸ್ಥಳೀಯ ಸಂಸ್ಥೆಗಳು, ಲೋಕೋಪಯೋಗಿ ಇಲಾಖೆಗೆ 5006 ಕೋಟಿ ರೂ. ಆದಾಯ ಸಂಗ್ರಹವಾಗಬೇಕಿತ್ತು.

ಶುಲ್ಕ ಕಡಿತದಿಂದ ಸ್ಥಳೀಯ ಸಂಸ್ಥೆಗಳು, ಲೋಕೋಪಯೋಗಿ ಇಲಾಖೆಗೆ ಸಾವಿರಾರು ಕೋಟಿ ರೂ. ನಷ್ಟವಾಗಿದೆ. ಶುಲ್ಕ ಕಡಿತಗೊಳಿಸಿ ಅನಿಲ ಆಧಾರಿತ ಉದ್ಯಮ ಕಂಪನಿಗಳಿಗೆ ಲಾಭ ಮಾಡಿಕೊಡಲಾಗಿದೆ ಎಂದು ಲೋಕಾಯುಕ್ತರಿಗೆ ದೂರು ಸಲ್ಲಿಕೆಯಾಗಿತ್ತು. ರಾಜ್ಯದಲ್ಲಿ 2023ರ ನ.7ರಿಂದ ಅನ್ವಯವಾಗುವಂತೆ ನಗರ ಅನಿಲ ವಿತರಣೆ ನೀತಿ ಜಾರಿಗೆ ಬಂದಿದೆ. ಈ ನೀತಿ ಜಾರಿಗೆ ಬರುವ ಹಿಂದಿನ 8 ವರ್ಷಗಳಲ್ಲಿ ಅನಿಲ ಕಂಪನಿಗಳು 4690 ಕಿ.ಮೀ. ಉದ್ದದ ಕೊಳವೆಗಳ ಅಳವಡಿಕೆಗೆ ಸ್ಥಳೀಯ ಸಂಸ್ಥೆಗಳಿಂದ ಅನುಮತಿ ಪಡೆದು, 281.68 ಕೋಟಿ ರೂ. ಶುಲ್ಕ ಪಾವತಿಸಿವೆ. ಅನಿಲ ವಿತರಣೆ ನೀತಿ ಜಾರಿ ಬಳಿಕ 2023ರ ನ.7ರಿಂದ 2024ರ ಜ.31ರವರೆಗೆ 1136.94 ಕಿ.ಮೀ. ಉದ್ದದ ಅನಿಲ ಕೊಳವೆಗಳ ಅಳವಡಿಕೆಗೆ ಕೇವಲ 20.56 ಲಕ್ಷ ರೂ. ಪಾವತಿಯಾಗಿದೆ.

**ಪಾಲಿಕೆಗೆ ಕೋಟ್ಯಂತರ ರೂ. ನಷ್ಟ**

**ನಗರ ಅನಿಲ ವಿತರಣೆ ನೀತಿ ಜಾರಿಗೆ ಮುನ್ನ ಗೇಲ್ ಗ್ಯಾಸ್ ಸಂಸ್ಥೆಯು ಬಿಬಿಎಂಪಿಗೆ 190.73 ಕೋಟಿ ರೂ. ಶುಲ್ಕ ಪಾವತಿಸಿ 2189 ಕಿ.ಮೀ. ಉದ್ದದ ರಸ್ತೆಗಳಲ್ಲಿ ಕೊಳವೆಗಳನ್ನು ಅಳವಡಿಸಿದೆ. ನೀತಿ ಜಾರಿಗೆ ಬಂದ 2023ರ ನ.7ರಿಂದ 2024ರ ಜ.31ರವರೆಗೆ 80.64 ಕಿ.ಮೀ. ಉದ್ದದ ಅನಿಲ ಕೊಳವೆಗಳ ಅಳವಡಿಕೆಗೆ 87,282 ರೂ. ಶುಲ್ಕ ಪಾವತಿಸಿದೆ. ಈ ಹಿಂದಿನ ದರಕ್ಕೆ ಹೋಲಿಸಿದರೆ ಪಾಲಿಕೆಗೆ 7.01 ಕೋಟಿ ರೂ. ಆದಾಯ ಖೋತಾ ಆಗಿದೆ.**

## ಸರ್ಕಾರದ ಮೇಲೆ ನಂಬಿಕೆಯಿಲ್ಲ, ನಿಮ್ಮ ಮಾಹಿತಿ ಸುರಕ್ಷಿತವಾಗಿರಲ್ಲ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

> ಜಾತಿ ಸಮೀಕ್ಷೆ ಬಹಿಷ್ಕರಿಸಿ ತೇಜಸ್ವಿ ಸೂರ್ಯ

ಸರ್ಕಾರದ ಮೇಲೆ ನನಗೆ ನಂಬಿಕೆಯಿಲ್ಲ, ನಿಮ್ಮ ಮಾಹಿತಿ ಸುರಕ್ಷಿತವಾಗಿರಲ್ಲ. ಹಾಗಾಗಿ, ಜಾತಿಗಣತಿ ಬಹಿಷ್ಕರಿಸಿ ಎಂದು ಜನತೆಗೆ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಕರೆ ಕೊಟ್ಟಿದ್ದಾರೆ. ಜಾತಿಗಣತಿ ಬಗ್ಗೆ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಾನು ಜಾತಿಗಣತಿಯಲ್ಲಿ ಪಾಲ್ಗೊಳ್ಳಲ್ಲ. ನನ್ನ ಮಾಹಿತಿ ಸುರಕ್ಷಿತವಾಗಿರುತ್ತೆ ಅನ್ನೋ ನಂಬಿಕೆ ಇಲ್ಲ. ಹೀಗಾಗಿ, ಸರ್ಕಾರದ ಮೇಲೆ ನಂಬಿಕೆ ಇರದೇ ಇರೋದ್ರಿಂದ ಇದರಲ್ಲಿ ಪಾಲ್ಗೊಳ್ಳಲ್ಲ. ನಿಮ್ಮ ಮಾಹಿತಿ ಸುರಕ್ಷಿತವಾಗಿರಲ್ಲ. ಜಾತಿ ಜಾತಿ ಮಧ್ಯೆ ಗಲಾಟೆ ತರಲು ಮಾತ್ರ ಇದನ್ನು ಮಾಡುತ್ತಿದ್ದಾರೆ. ದಯವಿಟ್ಟು ನೀವು ಇದರಲ್ಲಿ ಪಾಲ್ಗೊಳ್ಳಬೇಡಿ ಎಂದು ತಿಳಿಸಿದ್ದಾರೆ.

ಜಾತಿ ಗಣತಿಯು ರಾಜಕೀಯ ಪ್ರೇರಿತವಾಗಿದ್ದು, ಲಾಲು ಪ್ರಸಾದ್ ಯಾದವ್ ಮತ್ತು ಮುಲಾಯಂ ಸಿಂಗ್ ಯಾದವ್ ಅವರಂತಹ ನಾಯಕರು ಮಾಡಿದ ತಂತ್ರಗಳಂತೆಯೇ ಇಲ್ಲಿಯೂ ಬಳಕೆ ಮಾಡಲಾಗುತ್ತಿದೆ.

ಇದು ಸಮುದಾಯಗಳನ್ನು ವಿಭಜಿಸುವ ಪ್ರಯತ್ನವಾಗಿದೆ.

ಭಾಗವಹಿಸುವಿಕೆ ಸ್ವಯಂಪ್ರೇರಿತವಾಗಿದೆ, ಕಡ್ಡಾಯವಲ್ಲ ಎಂದು ಕರ್ನಾಟಕ ಹೈಕೋರ್ಟ್ ಸ್ಪಷ್ಟಪಡಿಸಿದೆ ಎಂದಿದ್ದಾರೆ.

> **ತೇಜಸ್ವಿ ಸೂರ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ, ಸಿದ್ದರಾಮಯ್ಯ, ಜನರು ನ್ಯಾಯಾಲಯದ ಮೊರೆ ಹೋಗಿದ್ದಾರೆ ಮತ್ತು ನ್ಯಾಯಾಲಯದ ನಿರ್ದೇಶನದಂತೆ ನಾವು ಸಮೀಕ್ಷೆಯನ್ನು ಮುಂದುವರಿಸುತ್ತೇವೆ ಎಂದು ಹೇಳಿದರು. ಈಗಾಗಲೇ 10 ಲಕ್ಷ ಜನರನ್ನು ಸಮೀಕ್ಷೆ ಮಾಡಲಾಗಿದೆ. ಕರ್ನಾಟಕ ಹೈಕೋರ್ಟ್ ಸಮೀಕ್ಷೆಯನ್ನು ನಿಲ್ಲಿಸಲು ನಿರಾಕರಿಸಿದೆ ಆದರೆ ಸಂಗ್ರಹಿಸಿದ ದತ್ತಾಂಶದ ಗೌಪ್ಯತೆಯನ್ನು ಕಾಪಾಡಿಕೊಳ್ಳಲು ಮತ್ತು ನಾಗರಿಕರ ಸ್ವಯಂಪ್ರೇರಿತ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ನಿರ್ದೇಶನ ನೀಡಿದೆ ಎಂದು ಸಿಎಂ ಹೇಳಿದರು.**

## ಸುಧಾಮೂರ್ತಿಗೆ ಕರೆ ಮಾಡಿ ವಂಚನೆಗೆ ಯತ್ನಿಸಿದ್ದ ಸೈಬರ್ ಕಳ್ಳರು!

• ಉದಯವಾಹಿನಿ, ಬೆಂಗಳೂರು



ಇನ್ಫೋಸಿಸ್ ಫೌಂಡೇಶನ್‌ನ ಮುಖ್ಯಸ್ಥೆ, ರಾಜ್ಯಸಭಾ ಸದಸ್ಯೆ ಡಾ. ಸುಧಾಮೂರ್ತಿ ಅವರಿಗೆ ಸೈಬರ್ ಕಳ್ಳರು ವಂಚನೆಗೆ ಯತ್ನಿಸಿದ ವಿಚಾರ ಈಗ ಬೆಳಕಿಗೆ ಬಂದಿದೆ.

ಸ್ವತ: ಸುಧಾಮೂರ್ತಿ ಅವರೇ ಈ ವಿಚಾರವನ್ನು ವಿಡಿಯೋ ಮೂಲಕ ಬಹಿರಂಗಪಡಿಸಿದ್ದು ಸೈಬರ್ ಕಳ್ಳರ ವಿರುದ್ಧ ದೂರು ನೀಡುವಂತೆ ಮನವಿ ಮಾಡಿದ್ದಾರೆ.

**ಸುಧಾಮೂರ್ತಿ ಹೇಳಿದ್ದೇನು:** ಕಳೆದ ಸೆ.5ರಂದು ಓಣಂ ಹಬ್ಬದ ದಿನ ನನಗೆ ಫೋನ್ ಕರೆಬಂತು. ನಾನು ದೂರಸಂಪರ್ಕ ಸಚಿವಾಲಯದ ಅಧಿಕಾರಿ ಎಂದು ಪರಿಚಯಿಸಿಕೊಂಡಿದ್ದ. ಈ ಹಿಂದೆ ಇಲಾಖೆಯವರು ಅನ್ಯ ಕಾರಣಕ್ಕಾಗಿ ನನ್ನನ್ನು ಸಂಪರ್ಕಿಸಿದ್ದರು. ಹೀಗಾಗಿ ಮತ್ತೆ ಅವರೇ ಕರೆ ಮಾಡಿರಬಹುದು ಎಂದು ನಾನು ಭಾವಿಸಿದ್ದೆ.

ನಿಮ್ಮ ನಂಬರ್ ಇದೇನಾ ಮೇಡಂ ಎಂದು ಹುಡುಗ ಕೇಳಿದ. ನಂತರ ಈ ಸಂಖ್ಯೆಯಿಂದ ಅಶ್ಲೀಲ ವಿಡಿಯೋಗಳು ಬರುತ್ತಿವೆ. 2 ಗಂಟೆಗಳಲ್ಲಿ ಮೊಬೈಲ್ ನಂಬರ್ ನಿಷ್ಕ್ರಿಯ ಮಾಡುತ್ತೇನೆ ಎಂದಿದ್ದ. ನನಗೆ ಆಶ್ಚರ್ಯವಾಗಿ ಮೊದಲಿಗೆ ನನ್ನ ಬಳಿ ಅಶ್ಲೀಲ ವಿಡಿಯೋಗಳಿಲ್ಲ. ಹೀಗಿದ್ದರೂ ನನ್ನ ನಂಬರ್ ಯಾಕೆ ಬ್ಲಾಕ್ ಮಾಡುತ್ತಾರೆ ಎಂದುಕೊಂಡೆ.

> **ಈ ವೇಳೆ ಜನವರಿಯಲ್ಲಿ ಆಧಾರ್‌ಗೆ ಮೊಬೈಲ್ ನಂಬರ್ ಲಿಂಕ್ ಆಗಿದ್ಯಾ ಅಂತ ಪ್ರಶ್ನಿಸಿದ ಅಷ್ಟೊತ್ತಿಗಾಗಲೇ ನನ್ನ ಸಹಾಯಕಿ ಬಂದು ಕರೆ ಕಟ್ ಮಾಡಿ ಎಂದರು. ಈ ವೇಳೆ ಕರೆ ಮಾಡಿದ ವ್ಯಕ್ತಿಯು ದೂರಸಂಪರ್ಕ ಇಲಾಖೆಯು ಪಿಆರ್‌ಒ ಎಂದು ಹೇಳಿದ. ಪರಿಶೀಲಿಸಿದಾಗ ಇದು ಸೈಬರ್ ವಂಚಕರ ವಂಚನೆ ಜಾಲ ಎನ್ನುವುದು ನನಗೆ ತಿಳಿಯಿತು.**

## ದಸರಾ ಪ್ರಯುಕ್ತ ಮೈಸೂರು ಕೆಎಸ್‌ಆರ್‌ಟಿಸಿ ಬಸ್ ಟಿಕೆಟ್ ದರ ಏರಿಕೆ

• ಉದಯವಾಹಿನಿ, ಬೆಂಗಳೂರು

ಗ್ಯಾರಂಟಿ ಸರ್ಕಾರ ರಾಜ್ಯದ ಜನರಿಗೆ ಮತ್ತೆ ದರ ಏರಿಕೆ ಬರೆ ಎಳೆದಿದೆ. ದಸರಾ ಪ್ರಯುಕ್ತ ಕೆಎಸ್‌ಆರ್‌ಟಿಸಿ ಬಸ್ ಟಿಕೆಟ್ ದರ ಏರಿಕೆ ಮಾಡಿದೆ. ಬರೋಬ್ಬರಿ 20 ರೂ. ಏರಿಕೆ ಮಾಡಿದ್ದು ಪ್ರಯಾಣಿಕರು ಆಕ್ರೋಶ ಹೊರ ಹಾಕಿದ್ದಾರೆ. ದಸರಾ ಹಬ್ಬದ ಪ್ರಯುಕ್ತ ಟಿಕೆಟ್ ದರ ಇಳಿಕೆ ಮಾಡಿ ದಸರಾ ವೀಕ್ಷಣೆಗೆ ಅವಕಾಶ ಮಾಡಿಕೊಡಬೇಕಾಗಿತ್ತು ಸರ್ಕಾರ. ಆದರೆ ಸಾರಿಗೆ ಇಲಾಖೆ ಮೈಸೂರು ಮಾರ್ಗದ ಕೆಎಸ್‌ಆರ್‌ಟಿಸಿ ಬಸ್ ದರವನ್ನ ಏರಿಕೆ ಮಾಡಿದೆ. ಎಲ್ಲಾ ಕೆಎಸ್‌ಆರ್‌ಟಿಸಿ ಬಸ್ ದರ ಬರೋಬ್ಬರಿ 20 ರೂಪಾಯಿ ಏರಿಕೆ ಮಾಡಿದೆ. ಪ್ರಯಾಣಿಕರು ಟಿಕೆಟ್ ದರ ಏರಿಕೆ ಮಾಡಿರೋದಕ್ಕೆ ಆಕ್ರೋಶ ಹೊರ ಹಾಕ್ತಾ ಇದ್ದಾರೆ.

ಇನ್ನೂ ಕೆಎಸ್‌ಆರ್‌ಟಿಸಿ ವೇಗದೂತ, ತಡೆರಹಿತ, ರಾಜಹಂಸ, ಐರಾವತ ಸೇರಿದಂತೆ ಎಲ್ಲಾ ಬಸ್‌ಗಳ ದರ ಏರಿಕೆ ಆಗಿದೆ. ದಸರಾ ಮುಗಿಯುವವರೆಗೂ ದರ ಏರಿಕೆ ಇರಲಿದೆ.



ಉದಯವಾಹಿನಿ ಚಿತ್ರ

**ಯಾವ್ಯಾವ ಬಸ್ ಟಿಕೆಟ್ ದರ ಎಷ್ಟಿದೆ**

- ಕರ್ನಾಟಕ ಸಾರಿಗೆ ವೇಗದೂತ 170 ರೂ. ನಿಂದ 190 ರೂ.ಗೆ
- ತಡೆ ರಹಿತ ಸಾರಿಗೆ 210 ರಿಂದ 240 ರೂ.
- ರಾಜಾಹಂಸ 270 ರಿಂದ 290 ರೂ.
- ಐರಾವತ 430 ರಿಂದ 450 ರೂ.
- ಐರಾವತ ಕ್ಲಬ್ ಕ್ಲಾಸ್ 440 ರಿಂದ 460 ರೂ.

## ವಾಲಿದ ಐದು ಅಂತಸ್ತಿನ ಕಟ್ಟಡ; ತೆರವು ಆರಂಭ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಕೋರಮಂಗಲದಲ್ಲಿ 1ನೇ ಬ್ಲಾಕ್‌ನ ವೆಂಕಟಾಪುರದಲ್ಲಿ ನಿರ್ಮಾಣ ಹಂತದಲ್ಲಿರುವ ಐದು ಅಂತಸ್ತಿನ ಕಟ್ಟಡ ಕುಸಿದು ಒಂದು ಕಡೆ ವಾಲಿರುವುದು ಸ್ಥಳೀಯರಲ್ಲಿ ಆತಂಕ ಮೂಡಿಸಿದ ಬೆನ್ನಲ್ಲೇ ಕಟ್ಟಡ ತೆರವು ಕಾರ್ಯಾಚರಣೆ ಆರಂಭಗೊಂಡಿದೆ.

ಬಿಟಿಎಂ ಲೇಔಟ್‌ನಲ್ಲಿ ಅಂದಾಜು 15ಅಡಿX15 ಅಡಿ ವಿಸ್ತೀರ್ಣದ ಜಾಗದಲ್ಲಿ ನಿರ್ಮಾಣವಾಗಿರುವ ಕಟ್ಟಡದ ಅಡಿಪಾಯ ಪಿಲ್ಲರ್‌ಗಳಲ್ಲಿ ಬಿರುಕು ಕಾಣಿಸಿಕೊಂಡಿತ್ತು.

ಕಟ್ಟಡದ ಒಂದು ಕಡೆಯ ಬುನಾದಿ ಕುಸಿದಿತ್ತು. ಅಕ್ಕಪಕ್ಕದ ಕಟ್ಟಡಗಳ ಮೇಲೆ ಬೀಳದಂತೆ ಮುಂಜಾಗ್ರತಾ ಕ್ರಮವಾಗಿ ಕಟ್ಟಡಕ್ಕೆ ಕಬ್ಬಿಣದ ರಾಡ್‌ಗಳನ್ನು ಅಡ್ಡಲಾಗಿ ನಿಲ್ಲಿಸಲಾಗಿತ್ತು. ಆಸ್ತಿ ಸಂಖ್ಯೆ 17/ಬಿ ನಲ್ಲಿ ನಿರ್ಮಿಸುತ್ತಿರುವ ಕಟ್ಟಡ ಶಾಂತಮ್ಮ ಎಂಬುವರಿಗೆ ಸೇರಿದ್ದು, ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಅಧಿಕಾರಿಗಳು ನೋಟಿಸ್ ನೀಡಿದ್ದರು.

ಕಟ್ಟಡ ವಾಲಿದ್ದರಿಂದ ಮಾಲೀಕರು ತಾವೇ ನೆಲಸಮಗೊಳಿಸಲು ಮುಂದಾಗಿದ್ದಾರೆ.

ಅಕ್ಕಪಕ್ಕದ ನಿವಾಸಿಗಳಿಗೆ, ಸಾರ್ವಜನಿಕರಿಗೆ ಕಟ್ಟಡ ತೆರವು ಕಾರ್ಯಾಚರಣೆಯಿಂದ ಯಾವುದೇ ರೀತಿಯ ತೊಂದರೆ ಆಗದಂತೆ ನೋಡಿಕೊಳ್ಳುವಂತೆ ಮಾಲೀಕರಿಗೆ ಸೂಚನೆ ನೀಡಲಾಗಿದೆ. ಈ ಕಟ್ಟಡವನ್ನು ನೆಲಸಮಗೊಳಿಸುವವರೆಗೂ ನಿಗಾ ವಹಿಸಲಾಗುವುದು.

ತೆರವು ಕಾರ್ಯಾಚರಣೆ ವಿಳಂಬ ಮಾಡಿದರೆ ಪಾಲಿಕೆ ವತಿಯಿಂದ ಕಟ್ಟಡ ನೆಲಸಮಗೊಳಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ಸಹಾಯಕ ಕಾರ್ಯಪಾಲಕ ಎಂಜಿನಿಯರ್ ತಿಳಿಸಿದ್ದಾರೆ.

## ರಸ್ತೆಗುಂಡಿ ಸಮಸ್ಯೆ ಬಗ್ಗೆ ಸರ್ಕಾರಕ್ಕೆ ಮುಜುಗರ ತರಲು

### ಬಿಜೆಪಿ ಅಭಿಯಾನ: ಕೋರ್ ಕಮಿಟಿ ಸಭೆಯಲ್ಲಿ ನಿರ್ಧಾರ




ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಎರಡೂವರೆ ತಿಂಗಳ ಬಳಿಕ ನಡೆದ ಬಿಜೆಪಿ ರಾಜ್ಯ ಕೋರ್ ಕಮಿಟಿ ಸಭೆಯಲ್ಲಿ ಕರ್ನಾಟಕ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟದ ಕುರಿತು ಚರ್ಚೆ ನಡೆಸಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಮಳೆ ಹಾನಿ ಉಂಟಾಗಿರುವ ಕಾರಣ ಬಿಜೆಪಿ ತಂಡ ಸ್ಥಳಕ್ಕೆ ಭೇಟಿ ನೀಡಲಿದ್ದು, ರಸ್ತೆ ಗುಂಡಿ ಮುಚ್ಚುವ ಹೋರಾಟವನ್ನು ಅಭಿಯಾನದ ರೀತಿ ಮುಂದುವರಿಸಲು ಬಿಜೆಪಿ ರಾಜ್ಯ ಕೋರ್ ಕಮಿಟಿ ನಿರ್ಧರಿಸಿದೆ.

ಸಭೆಯ ನಂತರ ಮಾಧ್ಯಮಗಳಿಗೆ ಮಾಹಿತಿ ನೀಡಿದ ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್, ಪಕ್ಷದ ನಾಯಕರು ಭಾರೀ ಮಳೆ ಮತ್ತು ಪ್ರವಾಹದಿಂದ ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡುವ ಬಗ್ಗೆ ಸಮಿತಿ ಚರ್ಚಿಸಿದೆ ಎಂದು ಹೇಳಿದರು.

ರಾಜ್ಯ ಸರ್ಕಾರದ ವೈಫಲ್ಯ. ರೈತರು, ದಲಿತರು ಮತ್ತು ಶೋಷಿತ ವರ್ಗವನ್ನು ಸರ್ಕಾರ ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ನಮ್ಮ ಭವಿಷ್ಯದ ಹೋರಾಟದ ನೀಲನಕ್ಷೆಯನ್ನು ಚರ್ಚಿಸಲಾಯಿತು ಎಂದು ರಾಜೀವ್ ಹೇಳಿದರು.

ಈ ಮಳೆಗಾಲದಲ್ಲಿ 16 ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಭಾರಿ ಮಳೆಯಾಗಿದೆ ಮತ್ತು ಸರ್ಕಾರವು ರೈತರನ್ನು ಸಂಕಷ್ಟಕ್ಕೆ ಸಿಲುಕಿಸಿದೆ ಎಂದು ರಾಜೀವ್ ಹೇಳಿದರು. ಬಿಜೆಪಿ ಆಡಳಿತದ ಅವಧಿಯಲ್ಲಿ, ನಾವು ಎನ್‌ಡಿಆರ್‌ಎಫ್ ಮಾನದಂಡಗಳನ್ನು ವಿನಾಯಿತಿ ನೀಡಿ ರಾಜ್ಯ ಬಜೆಟ್‌ನಿಂದ ಹಣವನ್ನು ಮೀಸಲಿಡುವ ಮೂಲಕ ರೈತರಿಗೆ ಸಹಾಯ ಮಾಡಲು ಧಾವಿಸಿದೆವು.

ಪ್ರಸ್ತುತ ಸರ್ಕಾರವು ರೈತರಿಗೆ ಸಹಾಯ ಮಾಡಲು ತನ್ನ ಬಜೆಟ್‌ನಿಂದ ಒಂದು ಪೈಸೆಯನ್ನೂ ಬಿಡುಗಡೆ ಮಾಡಿಲ್ಲ ಎಂದು ಅವರು ಹೇಳಿದರು. ಮಾಜಿ ಉಪಮುಖ್ಯಮಂತ್ರಿ ಡಾ. ಸಿ. ಎನ್. ಅಶ್ವಥ ನಾರಾಯಣ್ ಅವರು ಸ್ಮಾರ್ಟ್ ಎಲೆಕ್ಟ್ರಿಕ್ ಮೀಟರ್ ಯೋಜನೆಯಲ್ಲಿ ಇಂಧನ ಇಲಾಖೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ವಿವರಗಳನ್ನು ಸಮಿತಿಗೆ ತಿಳಿಸಿದರು. ಪಕ್ಷವು ಅದರ ವಿರುದ್ಧ ಪ್ರತಿಭಟನೆ ನಡೆಸುವಂತೆ ಸೂಚಿಸಿದರು. ಈ ಹಗರಣವು 1,000 ಕೋಟಿ ರೂ.ಗಳಿಗಿಂತ ಹೆಚ್ಚು ಮೌಲ್ಯದ್ದಾಗಿದೆ ಇದರ ವಿರುದ್ಧ ಬಲವಾದ ಹೋರಾಟ ನಡೆಸಬೇಕಾಗಿದೆ ಎಂದು ಅವರು ಹೇಳಿದರು.

ಧಾರವಾಡದಲ್ಲಿ ಇತ್ತೀಚೆಗೆ ಸರ್ಕಾರವು ವಿವಿಧ ಇಲಾಖೆಗಳಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಒತ್ತಾಯಿಸಿ ಯುವಕರು ನಡೆಸಿದ ಪ್ರತಿಭಟನೆಯ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಗಿದ್ದು ಯುವಕರನ್ನು ಬೆಂಬಲಿಸಲು ನಿರ್ಧರಿಸಲಾಗಿದೆ ಎಂದು ರಾಜೀವ್ ಹೇಳಿದರು.

> **ಭಾರೀ ಮಳೆ ಮತ್ತು ಪ್ರವಾಹದಿಂದ ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡಲು ಸಮಿತಿ ಸದಸ್ಯರ ನೇತೃತ್ವದಲ್ಲಿ ತಂಡಗಳನ್ನು ರಚಿಸುವ ಬಗ್ಗೆ ಚರ್ಚಿಸಲಾಗಿದೆ. ಜಿಎಸ್ಟಿ ಸ್ಲ್ಯಾಬ್‌ನಲ್ಲಿ ಗಮನಾರ್ಹ ಇಳಿಕೆ ಕಂಡುಬಂದಿದ್ದು, ಇದು ಪ್ರತಿಯೊಬ್ಬ ಗ್ರಾಹಕರನ್ನು ತಲುಪಬೇಕು. ಹಳೆಯ ಎಂಆರ್‌ಪಿಯಲ್ಲಿ ಗ್ರಾಹಕರು ಮೋಸ ಹೋಗುತ್ತಿದ್ದರೂ ಸರ್ಕಾರ ಅದನ್ನು ನಿರ್ಲಕ್ಷಿಸಿದೆ ಹೀಗಾಗಿ ಜಿಎಸ್ ಟಿ ಇಳಿಕೆ ಪ್ರಯೋಜನಗಳು ಗ್ರಾಹಕರನ್ನು ತಲುಪುವಂತೆ ಬಿಜೆಪಿ ತನ್ನ ಎಲ್ಲಾ ಪ್ರತಿನಿಧಿಗಳನ್ನು ಅದರಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ನಿರ್ಧರಿಸಿದೆ ಎಂದು ರಾಜೀವ್ ಹೇಳಿದರು.**

# ಹೆಬ್ಬಾಳ-ಕೆ.ಆರ್.ಪುರ ಮಾರ್ಗದಲ್ಲಿ ವಾಹನ ಸಂಚಾರ ಸಮಸ್ಯೆ

### ಮೆಟ್ರೋ ಕಾಮಗಾರಿ ಮುಗಿದ ಕಡೆ ಸರ್ವೀಸ್ ರಸ್ತೆ ದುರಸ್ತಿಗೆ ಸೂಚನೆ

• ಉದಯವಾಹಿನಿ, ಬೆಂಗಳೂರು



ಹೆಬ್ಬಾಳ-ಕೆ.ಆರ್.ಪುರ ಮಾರ್ಗದಲ್ಲಿ ಮೆಟ್ರೋ ಕಾಮಗಾರಿ ಪೂರ್ಣಗೊಂಡಿರುವ ಕಡೆ ಸರ್ವೀಸ್ ರಸ್ತೆಯನ್ನು ದುರಸ್ತಿ ಪಡಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದು ಬೆಂಗಳೂರು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನಿಲ್ ಕುಮಾರ್ ಅಧಿಕಾರಿಗಳಿಗೆ ಸೂಚಿಸಿದರು.

ಹೊರವರ್ತುಲ ರಸ್ತೆಯ ಹೆಬ್ಬಾಳ ಮೇಲ್ಸೇತುವೆಯಿಂದ ರಾಮಮೂರ್ತಿನಗರ ಜಂಕ್ಷನ್‌ವರೆಗೆ ಮಧ್ಯರಾತ್ರಿ 1 ಗಂಟೆಯಿಂದ ಮುಂಜಾನೆ 4.30ರವರೆಗೆ ಪರಿಶೀಲನೆ ನಡೆಸಿದ ಅವರು, ಇಲಾಖೆಗಳ ನಡುವೆ ಸಮನ್ವಯ ಸಾಧಿಸಿ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು, ಎಂದು ನಿರ್ದೇಶನ ನೀಡಿದರು. ಹೆಬ್ಬಾಳ ಮೇಲ್ಸೇತುವೆಯಿಂದ ವೆಂಕಟಂ ಕೆಫೆ ರಸ್ತೆವರೆಗಿನ ಸರ್ವೀಸ್ ರಸ್ತೆಯಲ್ಲಿ ಮೆಟ್ರೋ ನಿರ್ಮಾಣದ ಪ್ರಮುಖ ಕಾಮಗಾರಿಗಳು ಪೂರ್ಣಗೊಂಡ ಬಳಿಕ ಬಿಎಂಆರ್ ಸಿಎಲ್ ವತಿಯಿಂದಲೇ ರಸ್ತೆ ದುರಸ್ತಿಪಡಿಸಿ, ವಾಹನಗಳ ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಡಬೇಕು, ಎಂದು ಹೇಳಿದರು.

ಮೆಟ್ರೊ ವತಿಯಿಂದ ರಸ್ತೆ ಭಾಗದಲ್ಲಿ ನಡೆಯುತ್ತಿರುವ ಎಲ್ಲಾ ಪೈಲ್ ಕ್ಯಾಪ್‌ಗಳನ್ನು ಸಮರ್ಪಕವಾಗಿ ಪುನಃಸ್ಥಾಪಿಸಬೇಕು. ದುರಸ್ತಿ ಕಾರ್ಯವನ್ನೂ ಸಮರ್ಪಕವಾಗಿ ನಿರ್ವಹಿಸಬೇಕು,'' ಎಂದು ಸೂಚನೆ ನೀಡಿದರು.

ವೀರಣ್ಣಪಾಳ್ಯ ಮೇಲ್ಸೇತುವೆ ಬಳಿ ಕೆಪಿಟಿಸಿಎಲ್ ವತಿಯಿಂದ ಕೈಗೊಂಡಿರುವ ಭೂಗತ ಕೇಬಲ್ ಅಳವಡಿಕೆ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಹಾನಿಗೊಳಗಾಗಿರುವ ರಾಜಕಾಲುವೆಯನ್ನು ಪುನರ್ ನಿರ್ಮಿಸಬೇಕು. ಬಳಿಕ ಹೈಡೆನ್ಸಿಟಿ ಕಾರಿಡಾರ್ ಯೋಜನೆಯಡಿ ಸರ್ವೀಸ್ ರಸ್ತೆಗೆ ಡಾಂಬರು ಹಾಕಬೇಕು. ಮಳೆ ನೀರು ನಿಲ್ಲುವುದನ್ನು ತಪ್ಪಿಸಬೇಕು.

ಮಾನ್ಯತಾ ಟೆಕ್‌ಪಾರ್ಕಿನಿಂದ ನಾಗವಾರ ಮೇಲ್ಸೇತುವೆವರೆಗೆ ಮೆಟ್ರೊ ವತಿಯಿಂದಲೇ ಗುಂಡಿಗಳನ್ನು ಮುಚ್ಚಬೇಕು,'' ಎಂದು ಹೇಳಿದರು.

**ನಮ್ಮ ಮೆಟ್ರೊ ಕಿತ್ತಳೆ ಮಾರ್ಗದ 22 ನಿಲ್ದಾಣಗಳು**

**ಹಂತ- 1:** ಕೆಂಪಾಪುರ, ಹೆಬ್ಬಾಳ (ರೈಲು ನಿಲ್ದಾಣ), ನಾಗಶೆಟ್ಟಿಹಳ್ಳಿ, ಬಿಇಎಲ್ ಸರ್ಕಲ್, ಮುತ್ಯಾಲನಗರ, ಪೀಣ್ಯ, ಕಂಠೀರವ ಸ್ಟುಡಿಯೋ, ಸ್ವಾತಂತ್ರ್ಯ ಯೋಧರ ಕಾಲೊನಿ, ಚೌಡೇಶ್ವರಿ ನಗರ, ಸುಮನಹಳ್ಳಿ ಕ್ರಾಸ್, ನಾಗರಬಾವಿ- ಬಿಡಿಎ, ಪಾಪರೆಡ್ಡಿ ಪಾಳ್ಯ, ವಿನಾಯಕ ಲೇಔಟ್, ನಾಗರಬಾವಿ ವೃತ್ತ, ಮೈಸೂರು ರಸ್ತೆ, ದ್ವಾರಕಾನಗರ, ಹೊಸಕೆರೆಹಳ್ಳಿ, ಕಾಮಾಕ್ಯ ಜಂಕ್ಷನ್, ಕದಿರೇನಹಳ್ಳಿ, ಜೆಪಿ ನಗರ 5ನೇ ಹಂತ, ಜೆಪಿ ನಗರ 4ನೇ ಹಂತ.

**ಹಂತ 2:** ಹೊಸಹಳ್ಳಿ, ಕೆಎಚ್‌ಬಿ ಕಾಲೊನಿ, ಸುಂಕದಕಟ್ಟೆ, ಹೇರೋಹಳ್ಳಿ, ಬ್ಯಾಡರಹಳ್ಳಿ, ಕಾಮತ್ ಲೇಔಟ್, ಕಡಬಗೆರೆ.

**ಇಂಟರ್‌ಚೇಂಜ್ ನಿಲ್ದಾಣಗಳು? ನಿಲ್ದಾಣ ಮೆಟ್ರೊ ಮಾರ್ಗ ಎಲ್ಲಿಂದ ಎಲ್ಲಿಗೆ?**


- ಕೆಂಪಾಪುರ ನೀಲಿ ಮಾರ್ಗ ಕೆ.ಆರ್.ಪುರ - ಬೆಂಗಳೂರು ವಿಮಾನ ನಿಲ್ದಾಣ
- ಹೆಬ್ಬಾಳ ಕೆಂಪು ಮಾರ್ಗ / ನೀಲಿ ಮಾರ್ಗ ಕೆ.ಆರ್. ಪುರ- ಬೆಂಗಳೂರು ವಿಮಾನ ನಿಲ್ದಾಣ
- ಪೀಣ್ಯ ಹಸಿರು ಮಾರ್ಗ ಮಾದಾವರ - ರೇಷ್ಮೆ ಸಂಸ್ಥೆ
- ಸುಮನಹಳ್ಳಿ ಬೂದು ಮಾರ್ಗ ಹೊಸಕೆರೆಹಳ್ಳಿ - ಕಡಬಗೆರೆ
- ಮೈಸೂರು ರಸ್ತೆ ನೇರಳೆ ಮಾರ್ಗ ಚಲ್ಲಘಟ್ಟ ವೈಟ್‌ಫೀಲ್ಡ್
- ಜೆ.ಪಿ. ನಗರ ಹಸಿರು ಮಾರ್ಗ ಮಾದಾವರ - ರೇಷ್ಮೆ ಮಂಡಳಿ
- ಜೆ.ಪಿ. ನಗರ 4 ನೇ ಹಂತ ಗುಲಾಬಿ ಮಾರ್ಗ ಕಾಳೇನ ಅಗ್ರಹಾರ - ನಾಗವಾರ

### ಮೈಸೂರು ಯುವ ದಸರಾ ಲೈವ್‌ಗೆ ಬ್ರೇಕ್; ಲಕ್ಷಾಂತರ ಪ್ರೇಕ್ಷಕರಿಗೆ ನಿರಾಸೆ

# ಮೈಸೂರು ಜಿಲ್ಲಾಡಳಿತದ ಕ್ರಮಕ್ಕೆ ಆಕ್ರೋಶ

• ಉದಯವಾಹಿನಿ, ಮೈಸೂರು

ಪ್ರತಿ ವರ್ಷ ದಸರಾ ಮಹೋತ್ಸವ ಕಾರ್ಯಕ್ರಮಗಳಲ್ಲಿ ಅತಿ ಹೆಚ್ಚು ಆಕರ್ಷಣೀಯವಾಗಿರುವ, ಯುವ ಜನತೆಯನ್ನು ಸೆಳೆಯುವ ಕಾರ್ಯಕ್ರಮಗಳಲ್ಲಿ ಯುವ ದಸರಾ ಸಹ ಒಂದಾಗಿದೆ. ನೇರವಾಗಿ ಯುವ ದಸರಾ ನೋಡಲು ಸಾಧ್ಯವಾಗದ ಲಕ್ಷಾಂತರ ಮಂದಿ ದಸರಾ ವೆಬ್‌ಸೈಟ್ ಮೂಲಕ ವೀಕ್ಷಣೆ ಮಾಡಿ ಸಂಭ್ರಮ ಪಡುತ್ತಿದ್ದರು. ಆದರೆ ಈ ಬಾರಿ ನಿರಾಸೆಯಾಗಿದೆ. ಜಿಲ್ಲಾಡಳಿತ ಯುವ ದಸರಾ ಲೈವ್‌ಗೆ ಬ್ರೇಕ್ ಹಾಕಿದೆ. ಯುವ ದಸರಾದ ಪ್ರಾರಂಭದ ಎರಡು ದಿನಗಳು ಲೈವ್‌ಗೆ ಅವಕಾಶ ನೀಡಿದ್ದ ಜಿಲ್ಲಾಡಳಿತ ಬಳಿಕ ಲೈವ್‌ಗೆ ನಿರ್ಬಂಧ ವಿಧಿಸಿದೆ. ಇದರಿಂದ ಲಕ್ಷಾಂತರ ಮಂದಿ ಪ್ರೇಕ್ಷಕರು ಯುವ ದಸರಾವನ್ನು ವೀಕ್ಷಣೆ ಮಾಡಲು ಸಾಧ್ಯವಾಗದೇ ನಿರಾಶರಾಗಿದ್ದು, ಜಿಲ್ಲಾಡಳಿತದ ಕ್ರಮಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಹಲವು ವರ್ಷಗಳಿಂದ ನಗರದ ಹೃದಯ ಭಾಗದಲ್ಲಿರುವ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯುತ್ತಿದ್ದ ಯುವ ದಸರಾ ಕಾರ್ಯಕ್ರಮವನ್ನು ದಸರಾ ವೆಬ್ ಸೈಟ್ ಮೂಲಕ ನೇರ ಪ್ರಸಾರ ಮಾಡಲಾಗುತ್ತಿತ್ತು. ದಸರಾ ವೆಬ್‌ಸೈಟ್‌ನಿಂದ ಸಿಎಂ ಅವರ ವೆಬ್‌ಸೈಟ್ ಸೇರಿ ಸರಕಾರದ ಅಕೃತ ಸಾಮಾಜಿಕ ಜಾಲತಾಣಗಳ ಮೂಲಕ ಲಕ್ಷಾಂತರ ಮಂದಿ ವೀಕ್ಷಣೆ ಮಾಡುತ್ತಿದ್ದರು. ಕಳೆದ ವರ್ಷದಿಂದ ಸಂಚಾರ ದಟ್ಟಣೆ ನೆಪದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರೇಕ್ಷಕರು ವೀಕ್ಷಣೆಗೆ ಅವಕಾಶ ಮಾಡಿಕೊಡಬೇಕೆಂಬ ಉದ್ದೇಶದಿಂದ ನಗರದ ಹೊರ ವಲಯಲ್ಲಿದ್ದ ಉತ್ತನಹಳ್ಳಿ ಮೈದಾನಕ್ಕೆ ಯುವ ದಸರಾ ಕಾರ್ಯಕ್ರಮವನ್ನು ಸ್ಥಳಾಂತರಿಸಲಾಯಿತು.


ಉದಯವಾಹಿನಿ ಚಿತ್ರ

**ಯುವ ದಸರಾ ಸಹ ಒಂದು**

ಕಳೆದ ವರ್ಷದಿಂದ ಯಾವುದೇ ತೊಡಕಿಲ್ಲದೆ ಯುವ ದಸರಾ ಕಾರ್ಯಕ್ರಮ ನಡೆದಿದ್ದರಿಂದ ಈ ಬಾರಿಯು ಸಹ ಯುವ ದಸರಾವನ್ನು ಉತ್ತನಹಳ್ಳಿಯ ಮೈದಾನಕ್ಕೆ ಸ್ಥಳಾಂತರಿಸಲಾಯಿತು. ಬಯಲು ವೇದಿಕೆಯ ಯುವ ದಸರಾ ಕಾರ್ಯಕ್ರಮ ವೀಕ್ಷಣೆಗೆ 40 ಸಾವಿರ ಮಂದಿಗೆ ಆಸನ ವ್ಯವಸ್ಥೆ ಮಾಡಲಾಗಿದೆ. ಆದರೆ ಪ್ರಾರಂಭದ ಎರಡು ದಿನಗಳ ಕಾಲ ನೇರ ಪ್ರಸಾರಕ್ಕೆ ಅವಕಾಶ ನೀಡಿದ್ದ ಜಿಲ್ಲಾಡಳಿತ ಬಳಿಕ ನೇರ ಪ್ರಸಾರ ಸ್ಥಗಿತಗೊಳಿಸಿದೆ. ಇದರಿಂದ ದಸರಾ ವೆಬ್ ಸೈಟ್ ಸೇರಿದಂತೆ ಸಿಎಂ ಅವರ ಅಕೃತ ಫೇಸ್‌ಬುಕ್ ಪೇಜ್ ಸೇರಿದಂತೆ ಸರಕಾರದ ಸಾಮಾಜಿಕ ಜಾಣತಾಣದ ಪೇಜ್‌ಗಳ ಮೂಲಕ ನೇರ ಪ್ರಸಾರವಾಗುವುದು ತಪ್ಪಿದೆ.

**2 ದಿನದಲ್ಲಿ 25 ಲಕ್ಷ ವೀಕ್ಷಣೆ:** ಮೈಸೂರಿನ ಫ್ಯೂಜನ್ ಮೈಂಡ್ಸ್ ಟೆಕ್ನಾಲಜಿ ಪ್ರೈ.ಲಿ. ಸಂಸ್ಥೆಯಿಂದ ದಸರಾ ವೆಬ್‌ಸೈಟ್ ನಿರ್ವಹಣೆ ಆಗುತ್ತಿದ್ದು, ಯುವ ದಸರಾದ ಎರಡು ದಿನಗಳ ಕಾರ್ಯಕ್ರಮ ನೇರ ಪ್ರಸಾರಕ್ಕೆ ಅವಕಾಶ ಕಲ್ಪಿಸಿದ್ದರಿಂದ 25 ಲಕ್ಷ ಮಂದಿ ವೀಕ್ಷಣೆ ಮಾಡಿದ್ದಾರೆ. ಮೊದಲನೇ ದಿನ 12 ಲಕ್ಷ ಮಂದಿ ಯುವ ದಸರಾ ಕಾರ್ಯಕ್ರಮ ವೀಕ್ಷಣೆ ಮಾಡಿದ್ದರೆ, ಎರಡನೇ ದಿನ 13 ಲಕ್ಷ ಮಂದಿ ವೀಕ್ಷಣೆ ಮಾಡಿದ್ದಾರೆ. ಕಳೆದ ವರ್ಷ ಇಡೀ ಯುವ ದಸರಾ ಕಾರ್ಯಕ್ರಮಗಳನ್ನು 40 ಲಕ್ಷ ಮಂದಿ ವೀಕ್ಷಣೆ ಮಾಡಿದ್ದು, ವಿಶೇಷವಾಗಿತ್ತು.

**ನೇರ ಪ್ರಸಾರ ಸ್ಥಗಿತಕ್ಕೆ ಕಾರಣ**

ಮೈಸೂರು ಯುವ ದಸರಾ ನೇರ ಪ್ರಸಾರಕ್ಕೆ ಜಿಲ್ಲಾಡಳಿತ ನಿರ್ಬಂಧ ವಿಧಿಸಿದೆ. ಪ್ರಾರಂಭದ ಎರಡು ದಿನಗಳ ನಂತರ ಈ ಕ್ರಮ ಕೈಗೊಳ್ಳಲಾಗಿದೆ. ಇದರಿಂದ ಲಕ್ಷಾಂತರ ಮಂದಿ ವೀಕ್ಷಕರು ನಿರಾಶರಾಗಿದ್ದಾರೆ. ಕಲಾವಿದರ ಹಕ್ಕುಸ್ವಾಮ್ಯ ಸಮಸ್ಯೆಯೇ ನೇರ ಪ್ರಸಾರ ಸ್ಥಗಿತಕ್ಕೆ ಕಾರಣ ಎಂದು ಯುವ ದಸರಾ ಸಮಿತಿ ಕಾರ್ಯಾಧ್ಯಕ್ಷರು ತಿಳಿಸಿದ್ದಾರೆ. ಕಳೆದ ವರ್ಷ 40 ಲಕ್ಷ ಮಂದಿ ವೀಕ್ಷಿಸಿದ್ದರು. ಈ ವರ್ಷ ಎರಡು ದಿನಗಳಲ್ಲಿ 25 ಲಕ್ಷ ವೀಕ್ಷಣೆ ದಾಖಲಾಗಿದೆ.

**ಸಾರ್ವಜನಿಕರ ಆಕ್ಷೇಪ**

ದಸರಾ ಪ್ರಯುಕ್ತ ಸರಕಾರವೇ ಯುವ ದಸರಾ ಕಾರ್ಯಕ್ರಮ ನಡೆಸುತ್ತಿದ್ದು, ಕೋಟಿಗಟ್ಟಲೇ ಹಣವನ್ನು ಇದಕ್ಕೆ ವ್ಯಯ ಮಾಡುತ್ತಿದೆ. ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿರುವ ಕಲಾವಿದರನ್ನು ಲಕ್ಷಾಂತರ ರೂ. ಗೌರವ ಧನ ನೀಡಿ ಆಹ್ವಾನಿಸಲಾಗುತ್ತಿದೆ. ಇಂತಹ ಕಾರ್ಯಕ್ರಮಗಳನ್ನು ಸಾಮಾಜಿಕ ಜಾಲತಾಣದ ಮೂಲಕ ಲಕ್ಷಾಂತರ ಮಂದಿ ವೀಕ್ಷಣೆ ಮಾಡಬಹುದು. ಆದರೆ ಅದಕ್ಕೆ ಅವಕಾಶ ನೀಡದೇ ಇರುವುದರಿಂದ ನಿರಾಸೆಯಾಗಿದೆ.

– ಚಿರಂಜೀವಿ, ಕಾಲೇಜು ವಿದ್ಯಾರ್ಥಿ

## ಮಿನಿ ನ್ಯೂಸ್

### ಶ್ರೀರಂಗಪಟ್ಟಣ ದಸರಾದಲ್ಲಿ ಗೌರವ ಕೃಷ್ಣಕುಮಾರ್ ಸಂತಸ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಶ್ರೀರಂಗಪಟ್ಟಣ

ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್,ಮಂಡ್ಯ, ಕರ್ನಾಟಕ ಸರ್ಕಾರ ಶ್ರೀರಂಗಪಟ್ಟಣ ತಾಲೂಕು ವತಿಯಿಂದ ಏರ್ಪಡಿಸಿದ್ದ ದಸರಾ -2025ರ ಕಾರ್ಯಕ್ರಮದಲ್ಲಿ ತಾಲ್ಲೂಕಿನ ಹಲವು ಹಿರಿಯ ಸೇವಾಕರ್ತರೊಂದಿಗೆ ಕಲಿಯುಗದ ಶ್ರವಣಕುಮಾರ ಕೃಷ್ಣಕುಮಾರ್ ರನ್ನು ಗೌರವಿಸಲಾಯಿತು. ಐತಿಹಾಸಿಕ ಹಿನ್ನೆಲೆಯ ಶ್ರೀರಂಗಪಟ್ಟಣ ದಸರಾ ಕಾರ್ಯಕ್ರಮದ ಬೃಹತ್ ವೇದಿಕೆಯಲ್ಲಿ, ಮಾತೃಶ್ರೀ, ಹಲವು ಗಣ್ಯರು, ಸ್ನೇಹಿತರ ಸಮ್ಮುಖದಲ್ಲಿ ಗೌರವಕ್ಕೆ ಪಾತ್ರನಾಗಿರುವುದು ನನ್ನ ಪಾಲಿನ ಪುಣ್ಯ ವಿಶೇಷ, ಆಡಿ ಬೆಳೆದ, ಸಾಂಸ್ಕೃತಿಕ ಶ್ರೀಮಂತಿಕೆಯ,ಊರಿನ ಜನರ ಪ್ರೀತಿ, ಅಭಿಮಾನಗಳಿಗೆ ಕಾರಣನಾಗಿರುವುದು ಜೀವನದ ಪರಮ ಸೌಭಾಗ್ಯದ ಕ್ಷಣ, ಬಾಲ್ಯ ತಾರುಣ್ಯ ಕಾಲದ ಇಲ್ಲಿನ ಪ್ರೀತಿ ವಿಶ್ವಾಸ ಹಾಗೂ ಸ್ನೇಹಗಳು ಇಂದಿಗೂ ರಕ್ತದ ಕಣಕಣದಲ್ಲಿ ಬೆರೆತು, ಕೈಹಿಡಿದು ನಡೆಸುತ್ತಿರುವುದಾಗಿ ಹರ್ಷ ಚಿತ್ತರಾದರು. ಶ್ರೀರಂಗಪಟ್ಟಣ ಪುರಸಭಾ ಅಧ್ಯಕ್ಷರಾದ ಶ್ರೀ ದಿನೇಶ್, ಜಿಲ್ಲಾಡಳಿತ,ಸ್ಥಳೀಯ ಕಾರ್ಯಕರ್ತರಾದ ಶ್ರೀ ಮದನ್,ಅರವಿಂದ್, ಯಶ್ವಂತ್ ಹಾಗೂ ಶ್ರೀರಂಗಪಟ್ಟಣದ ಜನತೆಗೆ ಹೃದಯಾಂತರಾಳದ ಧನ್ಯವಾದಗಳನ್ನು ತಿಳಿಸಿದರು.

## ಪಂಚಾಯಿತಿ ಮಟ್ಟದಲ್ಲಿ ಗ್ಯಾರಂಟಿ ಸಮಾವೇಶ: ಡಿ.ಕೆ. ಶಿವಕುಮಾರ್

• ಉದಯವಾಹಿನಿ, ರಾಮನಗರ



ಉದಯವಾಹಿನಿ ಚಿತ್ರ

ಜನರ ಬದುಕಿಗೆ ಆಧಾರವಾಗಿರುವ ಗ್ಯಾರಂಟಿ ಯೋಜನೆಗಳ ಕುರಿತು, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಫಲಾನುಭವಿಗಳ ಸಮಾವೇಶ ಮಾಡಿ ಪ್ರಚುರಪಡಿಸಬೇಕು. ಯೋಜನೆಯ ಪ್ರಯೋಜನ ಪಡೆದು ಸಾಧನೆ ಮಾಡಿದವರನ್ನು ಗುರುತಿಸಿ ಸನ್ಮಾನಿಸಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚಿಸಿದರು. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರವು ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಯೋಜನೆಗಳ ಕುರಿತು ಹಮ್ಮಿಕೊಂಡಿದ್ದ ಜಿಲ್ಲಾ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಪಂಚಾಯಿತಿ ಮಟ್ಟದಲ್ಲಿ ಫಲಾನುಭವಿಗಳ ವಾಟ್ಸ್‌ಆ್ಯಪ್ ಗ್ರೂಪ್ ರಚಿಸಿ, ಯೋಜನೆಗಳ ಕುರಿತು ಜಾಗೃತಿ ಮೂಡಿಸಬೇಕು. ಅವರಿಂದ ಅಭಿಪ್ರಾಯ ಸಂಗ್ರಹಿಸಬೇಕು ಎಂದರು.

ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಿಗೆ ಶಾಸಕರಿಗಿಂತಲೂ ಹೆಚ್ಚು ಶಕ್ತಿ ಇದೆ. ಎರಡೂ ಹಂತದ ಅಧಿಕಾರಿಗಳ ಜೊತೆ ಅವರು ಸಭೆ ನಡೆಸಿ ಪ್ರಗತಿ ಪರಿಶೀಲನೆ ನಡೆಸಬಹುದು. ತಮ್ಮ ಹುದ್ದೆಯ ಮಹತ್ವ ಅರಿತು ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ನಾನು ಡಿಸಿಎಂ ಆದ ಬಳಿಕ, ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಅವರ ಆಶೀರ್ವಾದ ಪಡೆಯಲು ಹೋಗಿದ್ದೆ. ಆಗ ಅವರು, ಗ್ಯಾರಂಟಿ ಯೋಜನೆಗಳನ್ನು ವರ್ಷಕ್ಕೆ ಒಂದರಂತೆ ಅನುಷ್ಠಾನ ಮಾಡ್ತಿರಾ? ಎಂದು ಕೇಳಿದ್ದರು. ನಾನು ನಕ್ಕು ಸುಮ್ಮನಾಗಿದ್ದೆ. ಆದರೆ, ಅಧಿಕಾರಕ್ಕೆ ಬಂದ ಐದೇ ತಿಂಗಳಿಗೆ ಐದೂ ಯೋಜನೆಗಳನ್ನು ಜಾರಿಗೆ ತಂದೆವು ಎಂದರು. ರಾಮನಗರ ಶಾಸಕ ಎಚ್.ಎ. ಇಕ್ಬಾಲ್ ಹುಸೇನ್, ರಾಜ್ಯ ಸರ್ಕಾರ ಜಾರಿಗೆ ತಂದಿರುವ ಪಂಚ ಗ್ಯಾರಂಟಿ ಯೋಜನೆಗಳು, ದೇಶದ ರಾಜಕೀಯ ಇತಿಹಾಸದಲ್ಲಿ ಹೊಸ ಮೈಲಿಗಲ್ಲು ಸೃಷ್ಟಿಸಿವೆ.

ಮುಂದೆ ಯಾರೂ ಇಂತಹ ಯೋಜನೆಗಳನ್ನು ಜಾರಿಗೆ ತರಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟರು. ಗಣ್ಯರನ್ನು ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದ ಗ್ಯಾರಂಟಿ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಕೆ. ರಾಜು, ಕೋವಿಡ್‌ನಿಂದ ಸಂಕಷ್ಟದಲ್ಲಿದ್ದ ಜನರಿಗೆ ಗ್ಯಾರಂಟಿ ಯೋಜನೆಗಳು ಆಶಾಕಿರಣವಾಗಿವೆ. ಬಡ ಕುಟುಂಬಗಳಿಗೆ ಆರ್ಥಿಕವಾಗಿ ಆಸರೆಯಾಗಿವೆ ಎಂದು ಬಣ್ಣಿಸಿದರು.

## ಲಿಂಗಾಯತ ಜಾತ್ಯತೀತ ಧರ್ಮ

• ಉದಯವಾಹಿನಿ, ತುಮಕೂರು

ಶರಣರು ವೈದಿಕ ಧರ್ಮದ ಆಚರಣೆಗಳಿಂದ ಹಿಂದೆ ಸರಿಯದಿದ್ದರೆ ಲಿಂಗಾಯತರಿಗೆ ಉಳಿಗಾಲವಿಲ್ಲ ಎಂದು ಮುಂಡರಗಿಯ ತೋಂಟದಾರ್ಯ ಮಠ, ಬೈಲೂರು ನಿಷ್ಕಲ ಮಂಟಪದ ನಿಜಗುಣ ಪ್ರಭು ಸ್ವಾಮೀಜಿ ಹೇಳಿದರು. ನಗರದಲ್ಲಿ ರಾಜ್ಯ ಲಿಂಗಾಯತ ಮಠಾಧೀಶರ ಒಕ್ಕೂಟದಿಂದ ಬಸವ ಸಂಸ್ಕೃತಿ ಅಭಿಯಾನದ ಅಂಗವಾಗಿ ಆಯೋಜಿಸಿದ್ದ ಸಾರ್ವಜನಿಕ ಸಮಾರಂಭದಲ್ಲಿ ಮಾತನಾಡಿದರು. ಲಿಂಗಾಯತ ಧರ್ಮವೂ ತನ್ನ ಆಚರಣೆಯ ಮೇಲೆ ನಿಲ್ಲಬೇಕಾಗಿದೆ. ಇದೊಂದು ಜಾತ್ಯತೀತ ಧರ್ಮ. ಎಲ್ಲಾ ಕಾಯಕ ಸಮುದಾಯಗಳಿಗೆ ಸಮಾನತೆ ನೀಡಿದ, ಪ್ರಜಾಪ್ರಭುತ್ವದ ತಳಹದಿಯ ಮೇಲೆ ಲಿಂಗಾಯತ ಧರ್ಮ ನಿಂತಿದೆ. ಲಿಂಗಾಯತರು ಬದಲಾಗದಿದ್ದರೆ, ನಮ್ಮ ವಿಭೂತಿ, ರುದ್ರಾಕ್ಷಿಯನ್ನು ವಸ್ತು ಪ್ರದರ್ಶನದಲ್ಲಿ ನೋಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸಾಣೆಹಳ್ಳಿ ತರಳಬಾಳು ಶಾಖಾಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಸರ್ಕಾರ ನಡೆಸುತ್ತಿರುವ ಆರ್ಥಿಕ, ಸಾಮಾಜಿಕ ಸಮೀಕ್ಷೆಯಲ್ಲಿ ಲಿಂಗಾಯತರು ಧರ್ಮದ ಕಾಲಂನಲ್ಲಿ ಲಿಂಗಾಯತ, ಜಾತಿಯಲ್ಲಿ ನಿಮ್ಮ ಜಾತಿ ಬರೆಸಬೇಕು. ಕೆಲವರು ಆರೋಪಿಸುವಂತೆ ನಾವು ಧರ್ಮವನ್ನು ಒಡೆಯುತ್ತಿಲ್ಲ. ಒಂದುಗೂಡಿಸುವ ಕೆಲಸ ಮಾಡುತಿದ್ದೇವೆ ಎಂದು ತಿಳಿಸಿದರು.

ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ, ಇಂದಿಗೂ, ಎಂದೆಂದಿಗೂ ಬಸವಣ್ಣನವರ ವಿಚಾರಗಳು ಜನತೆಗೆ ಬೇಕಾಗಿದೆ. ಆಧುನಿಕ ಭಾರತದ ಸಮಸ್ಯೆಗಳ ಪರಿಹಾರ ಬಸವ ತತ್ವದಲ್ಲಿದೆ ಎಂದರು.



ಉದಯವಾಹಿನಿ ಚಿತ್ರ

### ವೈಮಾನಿಕ ಪ್ರದರ್ಶನದಲ್ಲಿ ಸಾರಂಗ್ ಚಮತ್ಕಾರ

• ಉದಯವಾಹಿನಿ, ಮೈಸೂರು

ಕೆಂಪು ಮತ್ತು ಬಿಳಿ ಬಣ್ಣದ ಚಿತ್ತಾರದ ಜೊತೆಗೆ ಬೆಂಕಿಯ ಉಂಡೆಗಳನ್ನು ಉಗುಳುತ್ತಾ ನಾ ಮುಂದೆ, ನೀ ನನ್ನ ಹಿಂದೆ ಎಂಬಂತೆ ಬಾನಂಗಳದಲ್ಲಿ ಲೋಹದ ಹಕ್ಕಿಗಳ ಹಾರಾಟ ಕಂಡ ಜನ ದಿಗ್ಮೂಢರಾದರು. ವೈಮಾನಿಕ ಹಾರಾಟದ ಮೂಲಕ ಸಾರಂಗ್ ತನ್ನ ಯಶಸ್ಸು ಮತ್ತು ಧೈರ್ಯವನ್ನು ಪ್ರದರ್ಶಿಸುತ್ತಿದ್ದರೆ, ಇತ್ತ ಮೈಸೂರಿನ ಜನತೆ ಶಿಳ್ಳೆ, ಚಪ್ಪಾಳೆ ಚೀತ್ಕಾರದೊಂದಿಗೆ ಬೆರಗಿನಿಂದ ವೀಕ್ಷಿಸಿದರು. ವಿಶ್ವ ವಿಖ್ಯಾತ ದಸರಾ ಮಹೋತ್ಸವದ ಅಂಗವಾಗಿ ಜಿಲ್ಲಾಡಳಿತ ಮತ್ತು ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ನಗರದ ಬನ್ನಿಮಂಟಪ ಪಂಜಿನ ಕವಾಯತು ಮೈದಾನದಲ್ಲಿ ಭಾರತೀಯ ವಾಯುಪಡೆ ಸಾರಂಗ ತಂಡದಿಂದ ನಡೆದ ವೈಮಾನಿಕ ಪ್ರದರ್ಶನದಲ್ಲಿ ನವಿಲಿನ ಚಿತ್ತಾರವಿರುವ ಲೋಹದ ಹಕ್ಕಿಗಳ ಚಮತ್ಕಾರಿ ಪ್ರದರ್ಶನಕ್ಕೆ ಮಾರುಹೋದರು. ಸುಮಾರು 22 ರಿಂದ 25 ನಿಮಿಷಗಳ ಕಾಲ ಶರವೇಗದಲ್ಲಿ ನಡೆದ ವೈಮಾನಿಕ ಹಾರಾಟದಲ್ಲಿ ಡಾಲ್ಫಿನ್ ಸ್ಲೀಪ್, ಸಾರಂಗ್ ಸ್ಪ್ಲಿಟ್, ಹಾರ್ಟ್ ಫಾರ್ಮೇಷನ್, ಡಿವೈನ್ ಗ್ಲಾಸ್, ಡಬಲ್ ಏರೋ ಕ್ರಾಸ್ ಸೇರಿದಂತೆ ಒಟ್ಟು 16 ರೀತಿಯ ಮಾದರಿಗಳನ್ನು ವೈಮಾನಿಕ ಪ್ರದರ್ಶನದಲ್ಲಿ ಪ್ರದರ್ಶಿಸಲಾಯಿತು. ಇದಕ್ಕಾಗಿ ಒಟ್ಟು 70 ಸಿಬ್ಬಂದಿಗಳು ಶ್ರಮಿಸಿದ್ದು, ಐದು ಸಾರಂಗಗಳು ಅತ್ಯದ್ಭುತವಾದ ಪ್ರದರ್ಶನ ನೀಡುವ ಮೂಲಕ ರಾಜ್ಯದ ವಿವಿಧೆಡೆಯಿಂದ ಆಗಮಿಸಿದ್ದ ಸಾವಿರಾರು ಮಂದಿಯ ಮನಸ್ಸನ್ನು ಸೂರೆಗೊಂಡರು.

## ಪಾರಂಪರಿಕ ಸ್ಮಾರಕಗಳ ಸಂರಕ್ಷಣೆ ಎಲ್ಲರ ಹೊಣೆ

• ಉದಯವಾಹಿನಿ, ಮದ್ದೂರು

ಪಾರಂಪರಿಕ ಸ್ಮಾರಕಗಳ ಸಂರಕ್ಷಣೆ ನಮ್ಮೆಲ್ಲರ ಹೊಣೆ. ಇದರೊಂದಿಗೆ ಸ್ವಚ್ಛತೆಯ ಅರಿವಿಗಾಗಿ ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಮಂಡ್ಯ ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ನಂದಿನಿ ತಿಳಿಸಿದರು. ತಾಲ್ಲೂಕಿನ ಅರುವನಹಳ್ಳಿ ಗ್ರಾಮದಲ್ಲಿ ಮಂಡ್ಯ ಜಿ.ಪಂ ಹಾಗೂ ಮದ್ದೂರು ತಾಲ್ಲೂಕು ಪಂಚಾಯಿತಿ ವತಿಯಿಂದ ಹಮ್ಮಿಕೊಂಡಿದ್ದ ಪಾರಂಪರಿಕ ಸ್ಮಾರಕಗಳ ಸಂರಕ್ಷಣೆ ಜಾಗೃತಿ ಜಾಥಾವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮಲ್ಲಿರುವ ಅಪರೂಪದ ವೀರಗಲ್ಲು, ಮಾಸ್ತಿ ಗಲ್ಲುಗಳನ್ನು ರಕ್ಷಿಸುವ ಜಾಗೃತಿ ಮೂಡಿಸುವುದೂ ಈ ಪಾರಂಪರಿಕ ನಡಿಗೆಯ ಉದ್ದೇಶ. ಇದರಿಂದ ಪಾರಂಪರಿಕ ಸ್ಮಾರಕಗಳ ಮೌಲ್ಯವೂ ನಮಗೆ ತಿಳಿಯುತ್ತದೆ. ಇವು ಬೆಲೆಯನ್ನೇ ಕಟ್ಟಲಾಗದ ಸ್ವತ್ತು. ಇವುಗಳನ್ನು ಮುಂದಿನ ಪೀಳಿಗೆಗೆ ಉಳಿಸುವ, ಸಂರಕ್ಷಣೆ ಮಾಡುವ ಜವಾಬ್ದಾರಿ ನಮ್ಮ ಮೇಲಿದೆ. ಇಂತಹವುಗಳನ್ನು ಸಂರಕ್ಷಿಸಿಡಲು ಸರಿಯಾದ ಜಾಗವಿಲ್ಲದಿದ್ದರೆ ಗ್ರಾ.ಪಂ ಆವರಣದಲ್ಲಿ ಸಂರಕ್ಷಣೆ ಮಾಡಬಹುದು. ಅದಕ್ಕೆ ಅಗತ್ಯ ಅನುದಾನ ಬಳಸಬಹುದು ಎಂದರು.

ಇತಿಹಾಸ ತಜ್ಞ ಕಲೀಮುಲ್ಲಾ ಮಾತನಾಡಿ, ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಕೀರ್ತಿ ರಾಜರು ಇಲ್ಲಿಗೆ ಬಂದು 90 ವರ್ಷಗಳ ಕಾಲ ನೆಲಸಿದ್ದರು, ಇಲ್ಲಿ ಇರುವ ವೀರಗಲ್ಲುಗಳು ಎಲ್ಲೂ ಇಲ್ಲ, ಅಷ್ಟು ವಿಶೇಷತೆಗಳಿಂದ ಕೂಡಿವೆ. ಹುಲಿಯ ಜೊತೆ ಹೋರಾಡಿದ ವೀರರು ಇಲ್ಲಿ ಇದ್ದರು ಎಂಬುದಕ್ಕೆ ಇಲ್ಲಿ ಸಾಕ್ಷಿಯಿದೆ. ಮಹಾಸತಿ ಕಲ್ಲು ಇದೆ. ಅದನ್ನು ಮಾಸ್ತಿಗಲ್ಲು ಎನ್ನುತ್ತಾರೆ ಎಂದರು. ಸಾಹಿತಿ ತೈಲೂರು ವೆಂಕಟಕೃಷ್ಣ ಮಾತನಾಡಿ, ಈ ಗ್ರಾಮದಲ್ಲಿರುವ ವೀರಗಲ್ಲುಗಳಿಗೆ 600 ವರ್ಷಗಳಾಗಿವೆ. ಈ ಭಾಗದಲ್ಲಿ ಹಿಂದೆ ಬುಕ್ಕರಾಜ ಹಾಗೂ ಕೀರ್ತಿ ರಾಜರು ಸುಮಾರು ಕೆರೆಗಳನ್ನು ಕಟ್ಟಿಸಿದ್ದರು ಎಂಬುದಕ್ಕೆ ನಿದರ್ಶನವಿದೆ ಎಂದರು.

## ನೀರಾವರಿ ಸಾಧನೆಗಾಗಿ ತೆಲಂಗಾಣ ಮಾದರಿ ಹೋರಾಟಕ್ಕೆ ಸಜ್ಜು

• ಉದಯವಾಹಿನಿ, ಚಿಕ್ಕಬಳ್ಳಾಪುರ


ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನೀರಾವರಿ ವಿಚಾರವಾಗಿ ಶಾಶ್ವತ ನೀರಾವರಿ ಹೋರಾಟ ಸಮಿತಿಯು ಮೂರು ದಶಕಗಳಿಂದ ಹೋರಾಟ ನಡೆಸುತ್ತಿದೆ. ಈ ಹೋರಾಟದ ಫಲವಾಗಿ ಸರ್ಕಾರಗಳು ಸಹ ವಿವಿಧ ಯೋಜನೆಗಳ ಹೆಸರಿನಲ್ಲಿ ಸಾವಿರಾರು ಕೋಟಿ ವ್ಯಯಿಸಿವೆ. ಆದರೆ ಬಯಲು ಸೀಮೆಯ ಜಿಲ್ಲೆಗಳಿಗೆ ಇಂದಿಗೂ ಸುರಕ್ಷಿತ ಕುಡಿಯುವ ನೀರು ಕೊಡಲು ಸಾಧ್ಯವಾಗಿಲ್ಲ. ಈಗ ನೀರಾವರಿ ಸಾಧನೆಗಾಗಿ ತೆಲಂಗಾಣ ಮಾದರಿ ಹೋರಾಟಕ್ಕೆ ಈ ಮೂರು ಜಿಲ್ಲೆಗಳ ಹೋರಾಟಗಾರರು ಸಜ್ಜಾಗುತ್ತಿದ್ದಾರೆ. ಈ ಪ್ರಯುಕ್ತ ಅ.2ರಂದು ಬೆಳಿಗ್ಗೆ 10ಕ್ಕೆ ಚಿಕ್ಕಬಳ್ಳಾಪುರ ಕೆಇಬಿ ಸಮುದಾಯ ಭವನದಲ್ಲಿ ಜಲಾಗ್ರಹ ಜಂಟಿ ಕ್ರಿಯಾ ಸಮಿತಿಗೆ ಚಾಲನೆ ದೊರೆಯಲಿದೆ. ತೆಲಂಗಾಣ ಮಾದರಿ ಹೋರಾಟಕ್ಕೆ ಸಜ್ಜುಗೊಳ್ಳುವುದೇ ಸಮಿತಿಯ ಮುಖ್ಯ ಉದ್ದೇಶವಾಗಿದೆ.

ನಿವೃತ್ತ ನ್ಯಾಯಮೂರ್ತಿಗಳು, ಬುದ್ದಿಜೀವಿಗಳು, ನಿವೃತ್ತ ಅಧಿಕಾರಿಗಳು ಸೇರಿದಂತೆ ಎಲ್ಲಾ ವಲಯಗಳ ಜನರನ್ನು ಈ ಸಮಿತಿ ಒಳಗೊಳ್ಳಲಿದೆ. ಈ ಮೂಲಕ ಹೋರಾಟಕ್ಕೆ ಹೊಸ ಆಯಾಮ ನೀಡುವುದು ಶಾಶ್ವತ ನೀರಾವರಿ ಹೋರಾಟ ಸಮಿತಿ ಮತ್ತು ಯುವ ಶಕ್ತಿಯ ಗುರಿ. ಟ್ರ್ಯಾಕ್ಟರ್ ರ್‍ಯಾಲಿ, ರಸ್ತೆ ತಡೆ ಸೇರಿದಂತೆ ನಾನಾ ರೀತಿಯಲ್ಲಿ ಸರ್ಕಾರದ ಗಮನ ಸೆಳೆಯಲು 30 ವರ್ಷದಿಂದ ಹೋರಾಟ ನಡೆಸಿದ್ದೇವೆ. ಮೂರು ಜಿಲ್ಲೆಗಳ ಜನರಿಗೆ ಸುರಕ್ಷಿತ ಕುಡಿಯುವ ನೀರು ಮತ್ತು ಶಾಶ್ವತ ನೀರಾವರಿ ಯೋಜನೆ ಜಾರಿಗೊಳಿಸಬೇಕು ಎನ್ನುವುದೇ ನಮ್ಮ ಮುಖ್ಯ ಬೇಡಿಕೆ. 30 ವರ್ಷಗಳಿಂದಲೂ ಇದೇ ಬೇಡಿಕೆ ಇದೆ. ಇಂದಿಗೂ ಬೇಡಿಕೆ ಈಡೇರಿಲ್ಲ ಎಂದು ಶಾಶ್ವತ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಆರ್.ಆಂಜನೇಯ ರೆಡ್ಡಿ ತಿಳಿಸಿದರು. ನಮ್ಮ ಜಿಲ್ಲೆಗಳಲ್ಲಿ ಅಂತರ್ಜಲ ಪಾತಾಳ ಕಂಡಿದೆ. ಬಹಳಷ್ಟು ಗ್ರಾಮೀಣ ಪ್ರದೇಶಗಳಲ್ಲಿ ನೀರು ಕುಡಿಯಲು ಯೋಗ್ಯವಲ್ಲ ಎಂದು ವೈಜ್ಞಾನಿಕ ಅಧ್ಯಯನ ವರದಿಗಳು ವಿವರಿಸಿವೆ. ನಮ್ಮ ಹೋರಾಟ ಆರಂಭವಾದ ಮೇಲೆ ಸರ್ಕಾರಗಳು ಈ ಜಿಲ್ಲೆಗಳಿಗೆ ನೀರು ನೀಡಲು 30 ಸಾವಿರ ಕೋಟಿ ಖರ್ಚು ಮಾಡಿದೆ. ಆದರೂ ನೀರಿನ ಸುರಕ್ಷೆ ಸಿಗುತ್ತಿಲ್ಲ. ನೀರಾವರಿ ಹೆಸರಿನಲ್ಲಿ ಮೋಸ ವಂಚನೆಗಳು ಆಗುತ್ತಿವೆ ಎಂದು ಆರೋಪಿಸಿದರು.

ಈ ಸರ್ಕಾರದ ಜೊತೆ ಸಮಾಲೋಚಿಸಲು ಕಳೆದ ಎರಡೂವರೆ ವರ್ಷದಿಂದ ಪ್ರಯತ್ನಿಸುತ್ತಿದ್ದೇವೆ. ಆದರೆ ಸಾಧ್ಯವಾಗುತ್ತಿಲ್ಲ. ನೀರಾವರಿ ವಿಚಾರವಾಗಿ ಜನಾಂದೋಲನ ರೂಪಿಸಬೇಕು. ಅದಕ್ಕಾಗಿ ಹೊಸ ಪ್ರಯೋಗ ಆಗಬೇಕು. ಈ ದೃಷ್ಟಿಯಿಂದ ಜಲಾಗ್ರಹ ಜಂಟಿ ಕ್ರಿಯಾ ಸಮಿತಿಗೆ ಚಾಲನೆ ನೀಡಲಾಗುತ್ತದೆ ಎಂದರು.

## ಕುಣಿಗಲ್ ತಾಲ್ಲೂಕು ಬೆಂಗಳೂರು ದಕ್ಷಿಣ ಜಿಲ್ಲೆಗೆ?

• ಉದಯವಾಹಿನಿ, ಕುಣಿಗಲ್




ತಾಲ್ಲೂಕನ್ನು ಬೆಂಗಳೂರು ದಕ್ಷಿಣ ಜಿಲ್ಲೆಗೆ ಸೇರಿಸುವ ಪ್ರಯತ್ನಗಳು ನಡೆದಿದ್ದು, ತಾಲ್ಲೂಕಿನಲ್ಲಿ ಚರ್ಚೆಗೆ ಗ್ರಾಸವಾಗಿದೆ. ಬೆಂಗಳೂರಿನ ಕೆಲ ಸಂಘಟನೆಗಳು ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಗೆ ಕುಣಿಗಲ್ ಸೇರ್ಪಡೆ ಒತ್ತಾಯ ಸಮಿತಿ ಮುಖ್ಯಮಂತ್ರಿಗೆ ಮನವಿ ಸಲ್ಲಿದ್ದಾರೆ. ಮುಖ್ಯಮಂತ್ರಿ ವಿಶೇಷ ಕರ್ತವ್ಯಾಧಿಕಾರಿ, ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಮಾಹಿತಿ ನೀಡಲು ಸೂಚಿಸಿದ್ದಾರೆ.

ಬೆಂಗಳೂರಿನಲ್ಲಿರುವ ಕುಣಗಲ್ ತಾಲ್ಲೂಕಿನ ಸಮಾನ ಮನಸ್ಕರ ಸಮಾಲೋಚನಾ ಸಭೆ ಇತ್ತೀಚೆಗೆ ನಡೆಯಿತು. ಸಂಚಾಲಕ ಕೆ.ಜಿ.ಕುಮಾರ್, ಆಡಿಟರ್ ನಾಗರಾಜು, ಸದ್ಭಾವನಾ ಪ್ರತಿಷ್ಠಾನದ ಅಧ್ಯಕ್ಷ ಪ್ರಕಾಶ್ ಮೂರ್ತಿ, ಅಪ್ಪಾಜಿ ಗೌಡ, ಜನಪದ ಗಾಯಕ ಕುಣಿಗಲ್ ರಾಮಚಂದ್ರ ಮೊದಲಾದವರು ತಾಲ್ಲೂಕಿನ ವ್ಯಾವಹಾರಿಕ, ಔದ್ಯೋಗಿಕ, ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಸಂಬಂಧಗಳು ಬೆಂಗಳೂರಿನೊಂದಿಗೆ ಬೆಸೆದುಕೊಂಡಿರುವ ಕಾರಣ ಕುಣಿಗಲ್ ತಾಲ್ಲೂಕನ್ನು ಬೆಂಗಳೂರು ದಕ್ಷಿಣ ಜಿಲ್ಲೆಗೆ ಸೇರಿಸಲು ನಿರ್ಣಯ ಕೈಗೊಂಡು, ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ್ದಾರೆ.

ಕುಣಿಗಲ್ ತಾಲ್ಲೂಕು ಮೊದಲು ತುಮಕೂರು ಲೋಕಸಭಾ ಕ್ಷೇತ್ರಕ್ಕೆ ಸೇರಿತ್ತು. ಜಿಲ್ಲೆಯ ಲಿಂಗಾಯತ, ಒಕ್ಕಲಿಗರ ಜಾತಿ ರಾಜಕಾರಣದ ಲಾಭ ಪಡೆಯುವ ಉದ್ದೇಶದಿಂದ ಆನಂತರ ಕುಣಿಗಲ್ ತಾಲ್ಲೂಕನ್ನು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರಕ್ಕೆ ಸೇರಿಸಲಾಗಿದೆ. ಡಿ.ಕೆ.ಸುರೇಶ್ ಸಂಸದರಾದ ನಂತರ ತಾಲ್ಲೂಕಿನ ರಾಜಕಾರಣದಲ್ಲಿ ಮಹತ್ತರ ಬದಲಾವಣೆಯಾಯಿತು. ಡಾ. ರಂಗನಾಥ್ ವೈದ್ಯಕೀಯ ಕ್ಷೇತ್ರ ಬಿಟ್ಟು ರಾಜಕೀಯ ಕ್ಷೇತ್ರಕ್ಕೆ ಬಂದ ನಂತರ ಎರಡನೇ ಬಾರಿಗೆ ಶಾಸಕರಾಗಿ ಆಯ್ಕೆಯಾಗಿ ತಮ್ಮ ಪ್ರಾಬಲ್ಯ ಮುಂದುವರೆಸಿದ್ದರೂ ಜಿಲ್ಲಾಮಟ್ಟದ ರಾಜಕಾರಣದಲ್ಲಿ ಪ್ರಾಬಲ್ಯ ಸಾಧಿಸಲಿ ಸಾಧ್ಯವಾಗಿಲ್ಲ. ಬೆಂಗಳೂರು ದಕ್ಷಿಣ ಜಿಲ್ಲೆಗೆ ಸೇರ್ಪಡೆಯಾದರೆ ರಾಜಕೀಯ ಪ್ರಾಬಲ್ಯ, ತಾಲ್ಲೂಕಿನ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎನ್ನುವುದು ಶಾಸಕರ ಬೆಂಬಲಿಗರ ಲೆಕ್ಕಾಚಾರ ಎನ್ನಲಾಗುತ್ತಿದೆ. ಶಾಸಕ, ಮಾಜಿ ಸಂಸದ ಮತ್ತು ಉಪಮುಖ್ಯಮಂತ್ರಿಯ ಕನಸಾದ ಲಿಂಕ್ ಕೆನಾಲ್ ಕಾಮಗಾರಿಗೆ ಜಿಲ್ಲೆಯ ಇತರ ತಾಲ್ಲೂಕುಗಳ ಶಾಸಕರ ವಿರೋಧ, ಪಕ್ಷದಲ್ಲಿನ ಬಿನ್ನಾಭಿಪ್ರಾಯಗಳಿಂದಾಗಿ ವಿಳಂಬವಾಗುತ್ತಿದೆ.

ತಾಲ್ಲೂಕು ಆಡಳಿತ ಬೆಂಗಳೂರು ದಕ್ಷಿಣ ಜಿಲ್ಲೆಯ ನಿಯಂತ್ರಣಕ್ಕೆ ಬಂದರೆ ರಾಜಕೀಯವಾಗಿ ಲಾಭ ಪಡೆಯಲು, ತಾಲ್ಲೂಕಿನ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂಬ ಅಭಿಪ್ರಾಯ ತಾಲ್ಲೂಕಿನಲ್ಲಿ ಕೇಳಿಬರುತ್ತಿದೆ. ಈ ನಿರ್ಧಾರಕ್ಕೆ ತಾಲ್ಲೂಕಿನಲ್ಲಿ ತೀವ್ರ ವಿರೋಧ ವ್ಯಕ್ತವಾಗಿದ್ದು, ಮುಂದಿನ ದಿನಗಳಲ್ಲಿ ಹೋರಾಟ ರೂಪಿಸಲಿದ್ದೇವೆ ಎಂದು ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಬಿ.ಎನ್. ಜಗದೀಶ್ ತಿಳಿಸಿದರು.

## ಕಾರ್ಯಕರ್ತರ ಬಂಧನ ವಿರೋಧಿಸಿ ಪ್ರತಿಭಟನೆ

• ಉದಯವಾಹಿನಿ, ಕೋಲಾರ

ಕೇಂದ್ರ ಸರ್ಕಾರದ ಸಂಸದೀಯ ರಾಜಭಾಷಾ ಸಮಿತಿಯು ಹಿಂದಿ ಭಾಷೆ ಹೇರಿಕೆ ಸಂಬಂಧ ನಡೆಸುತ್ತಿದ್ದ ಕಾರ್ಯಾಗಾರಕ್ಕೆ ಅಡ್ಡಿಪಡಿಸಿದ ಕಾರ್ಯಕರ್ತರನ್ನು ಬಂಧಿಸಿರುವುದನ್ನು ಖಂಡಿಸಿ, ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ನಗರದ ಬಸ್ ನಿಲ್ದಾಣದ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು. ಹಿಂದಿ ಭಾಷೆ ಹೇರಲಾಗುತ್ತಿದೆ ಎಂದು ಕೇಂದ್ರ ಸರ್ಕಾರದ ವಿರುದ್ಧವೂ, ಕಾರ್ಯಕರ್ತರನ್ನು ಬಂಧಿಸಿರುವ ಸಂಬಂಧ ರಾಜ್ಯ ಸರ್ಕಾರದ ವಿರುದ್ಧವೂ ಘೋಷಣೆ ಕೂಗಿದರು.

ವೇದಿಕೆಯ ಜಿಲ್ಲಾಧ್ಯಕ್ಷ ಮೇಡಿಹಾಳ ರಾಘವೇಂದ್ರ ಮಾತನಾಡಿ, ಬೆಂಗಳೂರಿನ ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಸಂಸದೀಯ ರಾಜಭಾಷಾ ಸಮಿತಿಯ ಸದಸ್ಯರು ಹಿಂದಿ ಹೇರಿಕೆ ಕುರಿತು ಕಾರ್ಯಾಗಾರ ನಡೆಸುತ್ತಿದ್ದರು. ಇದನ್ನು ಖಂಡಿಸಿದ್ದಕ್ಕೆ ಪೊಲೀಸರು ಕಾರ್ಯಕರ್ತರನ್ನು ಬಂಧಿಸಿದ್ದು, ಕೂಡಲೇ ಬಿಡುಗಡೆಗೊಳಿಸಬೇಕು ಎಂದು ಒತ್ತಾಯಿಸಿದರು. ರಾಜಭಾಷಾ ಆಯೋಗ ಹಿಂದಿಯೇತರ ರಾಜ್ಯಗಳ ಮೇಲೆ ಹಿಂದಿಯನ್ನು ಬಲವಂತವಾಗಿ ಹೇರುವ ಕುತಂತ್ರವನ್ನು ಸ್ವಾತಂತ್ರ್ಯ ಪೂರ್ವದಿಂದಲೂ ನಡೆಸಿಕೊಂಡು ಬಂದಿದೆ. ಮೊಟ್ಟ ಮೊದಲ ಬಾರಿ ಈ ರಾಜಭಾಷಾ ಸಮಿತಿಗೆ ನೇರವಾಗಿ ಬಿಸಿ ಮುಟ್ಟಿಸುವ ಕೆಲಸಕ್ಕೆ ವೇದಿಕೆ ಮುಂದಾಗಿದ್ದು, ಇದು ಇಲ್ಲಿಗೆ ನಿಲ್ಲುವುದಿಲ್ಲ ಎಂದು ಎಚ್ಚರಿಕೆ ನೀಡಿದರು. ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಿರುವುದು. ಜನರ ಆಳ್ವಿಕೆಯ ಕಾಲದಲ್ಲಿ ನಾವು ಇದ್ದೇವೆ. ರಾಜಪ್ರಭುತ್ವ ಹೋಗಿ ಎಷ್ಟೋ ದಶಕಗಳಾಗಿವೆ.

ರಾಜರೇ ಇಲ್ಲದ ಕಾಲದಲ್ಲಿ ರಾಜಭಾಷೆ ಹೇರಲು ಹೇಗೆ ಸಾಧ್ಯ? ದೇಶದಲ್ಲಿ ಈಗ ಯಾವುದೇ ರಾಜಭಾಷೆಗಳು ಇಲ್ಲ. ಇರುವುದು ನೆಲದ, ಜನರ ಭಾಷೆಗಳು ಮಾತ್ರ ಎಂದು ತಿಳಿಸಿದರು. ಒಕ್ಕೂಟ ಸರ್ಕಾರ ರಾಜಭಾಷಾ ಆಯೋಗವನ್ನು ಈ ಕೂಡಲೇ ರದ್ದುಪಡಿಸಬೇಕು. ಭಾಷೆಯ ಹೆಸರಲ್ಲಿ ಹಿಂದಿ ಹೇರುವುದನ್ನು ಕನ್ನಡಿಗರು ಎಂದಿಗೂ ಸಹಿಸುವುದಿಲ್ಲ. ಹಿಂದಿ ಹೇರಿಕೆ ದೇಶಕ್ಕೆ ಮಾರಕ ಮಾತ್ರವಲ್ಲ, ಭಾರತದ ಐಕ್ಯತೆಗೆ ಧಕ್ಕೆ ತರುತ್ತಿದೆ ಎಂದು ಖಂಡಿಸಿದರು.

ಒಕ್ಕೂಟ ಸರ್ಕಾರ ಸಂವಿಧಾನಕ್ಕೆ ತಿದ್ದುಪಡಿ ತಂದು ಹಿಂದಿ ನುಡಿಗೆ ನೀಡಿರುವ ಹೆಚ್ಚುಗಾರಿಕೆಯನ್ನು ಕೂಡಲೇ ನಿಲ್ಲಿಸಬೇಕು, ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಇರುವ ಎಲ್ಲಾ ಭಾಷೆಗಳನ್ನು ಒಕ್ಕೂಟ ಸರ್ಕಾರದ ಅಧಿಕೃತ ಆಡಳಿತ ಭಾಷೆಗಳನ್ನಾಗಿ ಮಾಡಬೇಕು. ದೇಶದ ಎಲ್ಲ ನುಡಿಗಳೂ ಸಮಾನ ಎಂದು ಘೋಷಿಸಬೇಕು ಎಂದು ಒತ್ತಾಯಿಸಿದರು.

### ಮತಗಳ್ಳತನದ ವಿರುದ್ಧ ಕಾಂಗ್ರೆಸ್ ಸಹಿ ಅಭಿಯಾನ

• ಉದಯವಾಹಿನಿ, ಕನಕಪುರ

ಮತಗಳ್ಳತನ ವಿರೋಧಿಸಿ, ಪ್ರಜಾಪ್ರಭುತ್ವ ಉಳಿಸಿ ಅಭಿಯಾನದ ಸಹಿ ಸಂಗ್ರಹ ಅಭಿಯಾನವನ್ನು ತಾಲ್ಲೂಕಿನ ಕೋಡಿಹಳ್ಳಿ ಗ್ರಾಮದಲ್ಲಿ ಸಾತನೂರು ಬ್ಲಾಕ್ ಕಾಂಗ್ರೆಸ್ ವತಿಯಿಂದ ಹಮ್ಮಿಕೊಳ್ಳಲಾಯಿತು. ಸಾತನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಾತನೂರು ನಾಗರಾಜು ಸಹಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು. ಬಿಜೆಪಿ ಪಕ್ಷವು ರಾಜ್ಯದಲ್ಲೂ ಮತಗಳ್ಳತನ ಮಾಡಿದೆ. ತಾನು ಸೋಲುವ ಭೀತಿ ಇರುವ ಕ್ಷೇತ್ರಗಳಲ್ಲಿ ತಮಗೆ ಬೇಕಾದ ಮತದಾರರನ್ನು ಸೇರಿಸಿ, ತಮ್ಮ ಪಕ್ಷಕ್ಕೆ ಮತ ಬಾರದವರ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕಿಸಿದೆ ಎಂದು ಆರೋಪಿಸಿದರು.

ಮಹದೇವಪುರ ಕ್ಷೇತ್ರ ಒಂದರಲ್ಲಿ ಒಂದೂವರೆ ಲಕ್ಷಕ್ಕೂ ಹೆಚ್ಚಿನ ಮತದಾರರನ್ನು ಸೇರಿಸಿರುವುದು ದೃಢಪಟ್ಟಿದೆ. ಇದರಿಂದ ಚುನಾವಣಾ ಆಯೋಗವು ಮತಗಳ್ಳತನಕ್ಕೆ ಅವಕಾಶ ನೀಡಿರುವುದು ಗೊತ್ತಾಗುತ್ತದೆ ಎಂದರು. ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಎಂ.ಡಿ.ವಿಜಯದೇವ ಮಾತನಾಡಿ, ರಾಜ್ಯ, ರಾಷ್ಟ್ರದಲ್ಲಿ ಬಿಜೆಪಿ ಚುನಾವಣಾ ಆಯೋಗದೊಂದಿಗೆ ಶಾಮೀಲಾಗಿ ಮತಗಳ್ಳತನ ಮಾಡಿ ಅಕ್ರಮವಾಗಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿದೆ. ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ಸೇರಿದಂತೆ ರಾಜ್ಯದ ಹಲವು ಕ್ಷೇತ್ರಗಳಲ್ಲಿ ಮತಗಳ್ಳತನ ಆಗಿರುವ ಅನುಮಾನವಿದೆ. ಈ ಬಗ್ಗೆ ತನಿಖೆ ಆಗಬೇಕು ಎಂದು ಒತ್ತಾಯಿಸಿದರು.

# ಮಂಡ್ಯದಲ್ಲಿ ಸೌರ ವಿದ್ಯುತ್ ಉತ್ಪಾದನೆಗೆ ಉತ್ತೇಜನ

■ ಜಲ, ಅಣು ವಿದ್ಯುತ್ ಕೊರತೆ ನೀಗಿಸುವ ಉದ್ದೇಶ ■ ಕೇಂದ್ರ, ರಾಜ್ಯ ಸರಕಾರಗಳಿಂದ ಯೋಜನೆ

• ಉದಯವಾಹಿನಿ, ಮಂಡ್ಯ

ಭವಿಷ್ಯದಲ್ಲಿ ಜಲ ಮತ್ತು ಅಣು ವಿದ್ಯುತ್ ಕೊರತೆ ನೀಗಿಸುವ ದೃಷ್ಟಿಯಿಂದ ನೈಸರ್ಗಿಕವಾಗಿ ಸಿಗುವ ಸೂರ್ಯನ ಕಿರಣಗಳನ್ನು ಬಳಸಿಕೊಂಡು ಸೌರ ವಿದ್ಯುತ್ ಉತ್ಪಾದನೆಗೆ ಜನರನ್ನು ಉತ್ತೇಜಿಸಲು ಕೇಂದ್ರ ಮತ್ತು ರಾಜ್ಯ ಸರಕಾರಗಳು ಮುಂದಾಗಿವೆ. ಸೌರ ಘಟಕ ಅಳವಡಿಸಿ, ವಿದ್ಯುತ್ ಬಿಲ್ ಉಳಿಸಿ ಘೋಷಣೆಯೊಂದಿಗೆ ಕೇಂದ್ರ ಸರಕಾರವು ಪ್ರಧಾನಮಂತ್ರಿ ಸೌರಗೃಹ ಉಚಿತ ವಿದ್ಯುತ್ ಯೋಜನೆ ಜಾರಿಗೊಳಿಸಿದೆ. ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಲುವಾಗಿ ಸೌರಗೃಹ ಘಟಕಗಳ ಅಳವಡಿಕೆಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳೆರಡೂ ಜನರನ್ನು ಉತ್ತೇಜಿಸುತ್ತಿವೆ.

**ಪಿಎಂ ಸೌರಗೃಹ ಉಚಿತ ವಿದ್ಯುತ್ ಯೋಜನೆಗಾಗಿ ರಾಷ್ಟ್ರೀಯ ಪೋರ್ಟಲ್‌ನಲ್ಲಿ ಮತ್ತು ಸೆಸ್ಕ್ ಪೋರ್ಟಲ್‌ನಲ್ಲಿ ಗ್ರಾಹಕರು ನೋಂದಣಿ ಮಾಡಿಕೊಳ್ಳಬಹುದು. 1 ಕಿಲೋ ವ್ಯಾಟ್ ಸೌರ ಘಟಕ ಸ್ಥಾಪನೆಗೆ ಅಂದಾಜು 10 ಚದರ ಮೀಟರ್ ಜಾಗ ಅವಶ್ಯಕತೆಯಿದೆ. ಪ್ರತಿ ಮನೆಯ ಮೇಲೂ ಸೌರ ವಿದ್ಯುತ್ ಘಟಕಗಳನ್ನು ಅಳವಡಿಸಿಕೊಂಡು ಮನೆಗೆ ಬೇಕಾದ ವಿದ್ಯುತ್ ಬಳಸಿಕೊಂಡು ಹೆಚ್ಚುವರಿ ವಿದ್ಯುತ್ತನ್ನು ಸೆಸ್ಕ್‌ಗೆ ಮಾರಾಟ ಮಾಡಬಹುದು. ಇದರಿಂದ ಜನರಿಗೂ ಲಾಭವಿದೆ.**

**– ಬಿ.ಸೋಮಶೇಖರ್, ಅಧೀಕ್ಷಕ ಎಂಜಿನಿಯರ್, ಸೆಸ್ಕ್, ಮಂಡ್ಯ**

ಒಂದೆಡೆ ಪ್ರಧಾನಮಂತ್ರಿ ಸೂರ್ಯ ಘರ್ ಮುಫ್ತ್ ಬಿಜಿಲಿ ಯೋಜನೆಯಡಿ ಮಾದರಿ ಸೋಲಾರ್ ಗ್ರಾಮ ಸ್ಪರ್ಧೆಗಾಗಿ ಮಂಡ್ಯ ಜಿಲ್ಲೆಯ 10 ಗ್ರಾಮಗಳನ್ನು ಸೆಸ್ಕ್ ಆಯ್ಕೆ ಮಾಡಿದೆ. ಈ ಸ್ಪರ್ಧೆಯ ವಿಜೇತ ಗ್ರಾಮವನ್ನು ಒಳಗೊಂಡಿರುವ ಗ್ರಾಮ ಪಂಚಾಯಿತಿಗೆ ಭಾರತ ಸರಕಾರದ ನವೀಕರಿಸಬಹುದಾದ ಇಂಧನ ಸಚಿವಾಲಯದಿಂದ(ಎಂಎನ್‌ಆರ್‌ಇ) 1 ಕೋಟಿ ರೂ. ಪ್ರೋತ್ಸಾಹಧನ ದೊರೆಯಲಿದೆ. ಸ್ಪರ್ಧೆಗೆ ಆಯ್ಕೆಯಾಗಿರುವ ಗ್ರಾಮ ವ್ಯಾಪ್ತಿಯಲ್ಲಿ ಎಲ್ಲಾ ಮನೆಗಳಿಗೆ ಪ್ರಧಾನಮಂತ್ರಿ ಸೌರಗೃಹ ಉಚಿತ ವಿದ್ಯುತ್ ಯೋಜನೆಯಡಿ ಸೌರ ಘಟಕ ಮತ್ತು ಕೃಷಿ ಪಂಪ್‌ಸೆಟ್‌ಗಳಿಗೂ ಕುಸುಮ್-ಬಿ ಯೋಜನೆಯಡಿ ಸೋಲಾರ್ ಪಂಪ್‌ಸೆಟ್‌ಗಳ ಅಳವಡಿಕೆಗೆ ಪ್ರೋತ್ಸಾಹಿಸಲಾಗುತ್ತಿದೆ. ಈ ಮೂಲಕ ಪೆಟ್ರೋಲ್, ಡೀಸೆಲ್ ಮತ್ತು ಗ್ರಿಡ್ ವಿದ್ಯುತ್ ಮೇಲಿನ ಅವಲಂಬನೆ ಕಡಿಮೆ ಮಾಡಿ ವಿದ್ಯುತ್ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವಂತೆ ಜನರ ಮನವೊಲಿಸುವ ಪ್ರಯತ್ನ ನಡೆಯುತ್ತಿದೆ.




**ಯೋಜನೆ ಪ್ರಯೋಜನಗಳು**

- ಕಟ್ಟಡಗಳ ಚಾವಣಿ ಜಾಗ ಬಳಸಿಕೊಳ್ಳುವ ಮೂಲಕ ಪರಿಸರ ಸ್ನೇಹಿ ಸೌರಶಕ್ತಿ ಉತ್ಪಾದನೆ
- ಮಾಸಿಕ ವಿದ್ಯುತ್ ಬಿಲ್ ಮೊತ್ತದಲ್ಲಿ ಉಳಿತಾಯ
- ಕೇಂದ್ರ ಸರಕಾರದಿಂದ ವಸತಿ ಗ್ರಾಹಕರಿಗೆ ಸಹಾಯಧನ
- 1 ಕಿಲೋ ವ್ಯಾಟ್ ಸೌರ ಘಟಕದಿಂದ ದಿನಕ್ಕೆ ಅಂದಾಜು 4.2 ಯೂನಿಟ್ ಹೆಚ್ಚುವರಿ ವಿದ್ಯುತ್ ಉತ್ಪಾದನೆ
- ಸೆಸ್ಕ್‌ನ ಸೋಲಾರ್ ಸಹಾಯವಾಣಿ ಸಂಖ್ಯೆ : 0821-2544963 ಅಥವಾ 1912

ಬೇಸಿಗೆಯಲ್ಲಿ ನೀರಿನ ಅಭಾವ ಸೃಷ್ಟಿಯಾದಾಗಲೆಲ್ಲಾ ಜಲ ವಿದ್ಯುತ್ ಉತ್ಪಾದನೆ ಕಡಿಮೆಯಾಗಿ, ವಿದ್ಯುತ್ ಸಮಸ್ಯೆ ಸಹಜವಾಗಿ ಕಾಡುತ್ತದೆ. ಇದರ ಪರಿಣಾಮದ ಬಿಸಿ ಜನರಿಗೆ ಮಾತ್ರವಲ್ಲದೆ ಸರಕಾರಗಳಿಗೂ ತಟ್ಟುತ್ತದೆ. ಅಂತಹ ಸಂದರ್ಭದಲ್ಲಿ ಹೊರ ರಾಜ್ಯಗಳಿಂದ ವಿದ್ಯುತ್ ಖರೀದಿ ಮಾಡಲಾಗುತ್ತದೆ.

ಹೀಗಾಗಿ ವಿದ್ಯುತ್‌ಗಾಗಿ ಹೊರ ರಾಜ್ಯಗಳು, ಜಲ, ಅಣು ವಿದ್ಯುತ್ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ದೃಷ್ಟಿಯಿಂದ ಸೌರ ವಿದ್ಯುತ್ ಉತ್ಪಾದನೆಗೆ ಜನರನ್ನು ಪ್ರೋತ್ಸಾಹಿಸಲಾಗುತ್ತಿದೆ.

ಜನರು ತಮ್ಮ ಮನೆಗಳಿಗೆ ಸೋಲಾರ್ ವಿದ್ಯುತ್ ಘಟಕ ಅಳವಡಿಸಿಕೊಂಡರೆ ಒಂದು ಕಿಲೋ ವ್ಯಾಟ್‌ಗೆ 40ರಿಂದ 50 ಸಾವಿರ ರೂ. ಖರ್ಚಾಗಲಿದೆ. ಕನಿಷ್ಠ 2 ಕಿಲೋ ವ್ಯಾಟ್‌ನಿಂದ ಸ್ಥಳ ಲಭ್ಯತೆಗೆ ಪೂರಕವಾಗಿ ಕಿಲೋವ್ಯಾಟ್ ಪ್ರಮಾಣ ಹೆಚ್ಚಿಸಿಕೊಳ್ಳಲು ಅವಕಾಶವಿದೆ. ಆದರೆ, ಸಬ್ಸಿಡಿ ಪ್ರಮಾಣವನ್ನು ಮಾತ್ರ ಗರಿಷ್ಠ 3 ಕಿಲೋವ್ಯಾಟ್‌ಗೆ ಸೀಮಿತಗೊಳಿಸಲಾಗಿದೆ. 1 ಕಿಲೋ ವ್ಯಾಟ್‌ಗೆ 30,000 ರೂ., 2 ಕಿಲೋ ವ್ಯಾಟ್‌ಗೆ 60,000 ರೂ., 3 ಕಿಲೋ ವ್ಯಾಟ್‌ಗೆ 78 ಸಾವಿರ ರೂ. ಸಬ್ಸಿಡಿ ಸಿಗಲಿದೆ. ಕೃಷಿ ಪಂಪ್ ಸೆಟ್‌ಗೆ ರಾಜ್ಯ ಸರಕಾರದಿಂದ ಶೇ.50ರಷ್ಟು, ಕೇಂದ್ರದಿಂದ ಶೇ.30ರಷ್ಟು ಸೇರಿದಂತೆ ಒಟ್ಟು ಶೇ.80ರಷ್ಟು ಸಬ್ಸಿಡಿ ದೊರೆಯಲಿದೆ. ಕೇಂದ್ರ ಸರಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯದಿಂದ ಈ ಸಬ್ಸಿಡಿ ಸಿಗಲಿದೆ.

ಈ ಬಗ್ಗೆ ಮಂಡ್ಯ ಜಿಲ್ಲೆಯಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು(ಸೆಸ್ಕ್) ಕರಪತ್ರ ಮುದ್ರಿಸಿ ಜನರಿಗೆ ವಿತರಿಸುವ ಮೂಲಕ ಪ್ರಧಾನಮಂತ್ರಿ ಸೌರಗೃಹ ಉಚಿತ ವಿದ್ಯುತ್ ಯೋಜನೆಯ ಪರಿಣಾಮಕಾರಿ ಅನುಷ್ಠಾನದತ್ತ ಹೆಜ್ಜೆ ಇಟ್ಟಿದೆ. ಕರಪತ್ರದಲ್ಲಿ ಈ ಯೋಜನೆಯ ವಿವರಗಳನ್ನು ನೀಡುವ ಜತೆಗೆ, ಅದರಿಂದಾಗುವ ಪ್ರಯೋಜನಗಳ ಬಗ್ಗೆಯೂ ವಿವರಣೆ ನೀಡಿದೆ.

**ವಿದ್ಯುತ್ ಕೊರತೆ ನೀಗಿಸಲು ಕೇಂದ್ರ-ರಾಜ್ಯ ಸರ್ಕಾರಗಳು ಪ್ರಧಾನಮಂತ್ರಿ ಸೌರಗೃಹ ಯೋಜನೆಯಡಿ ಸೌರ ವಿದ್ಯುತ್ ಉತ್ಪಾದನೆಗೆ ಉತ್ತೇಜನ ನೀಡುತ್ತಿವೆ. ಮನೆಗಳಿಗೆ ಸೌರ ಘಟಕ ಅಳವಡಿಸಲು ಸಬ್ಸಿಡಿ ಲಭ್ಯ. ಮಂಡ್ಯದಲ್ಲಿ ಮಾದರಿ ಸೋಲಾರ್ ಗ್ರಾಮ ಸ್ಪರ್ಧೆಗೆ 10 ಗ್ರಾಮಗಳನ್ನು ಆಯ್ಕೆ ಮಾಡಲಾಗಿದ್ದು, ವಿಜೇತ ಗ್ರಾಮಕ್ಕೆ 1 ಕೋಟಿ ರೂ. ಪ್ರೋತ್ಸಾಹಧನ ದೊರೆಯಲಿದೆ. ಇದು ವಿದ್ಯುತ್ ಬಿಲ್ ಉಳಿತಾಯಕ್ಕೆ ಸಹಕಾರಿ.**

ಅಂತರಾಳದಿಂದ.. EDITORIAL

# ಲಡಾಖ್ ಬೆನ್ನಿಗೆ ಚೂರಿ!

ಲಡಾಖ್‌ನ ಆತ್ಮಸಾಕ್ಷಿಯನ್ನು ಕೇಂದ್ರ ಸರಕಾರ ಜೈಲಿಗೆ ತಳ್ಳಿದೆ. ಲಡಾಖ್‌ನ ಪರಿಸರ ಮತ್ತು ಜನರ ಭಾವನೆಗಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ವಿರುದ್ಧ ಕಳೆದೆರಡು ವರ್ಷಗಳಿಂದ ಹೋರಾಟ ನಡೆಸುತ್ತಾ ಬಂದಿರುವ ಪರಿಸರವಾದಿ, ಸಾಮಾಜಿಕ ಕಾರ್ಯಕರ್ತ ಸೋನಮ್ ವಾಂಗ್ಚುಕ ಅವರನ್ನು ರಾಷ್ಟ್ರೀಯ ಭದ್ರತಾ ಕಾಯ್ದೆಯಡಿ ಬಂಧಿಸಲಾಗಿದೆ. ಅಷ್ಟೇ ಅಲ್ಲ ಲಡಾಖ್‌ನಲ್ಲಿ ಇಂಟರ್‌ನೆಟ್ ಸೇವೆಗಳನ್ನು ಸಂಪೂರ್ಣ ಸ್ಥಗಿತಗೊಳಿಸಲಾಗಿದ್ದು ಕರ್ಫ್ಯೂವನ್ನು ಹೇರಲಾಗಿದೆ. ಪರೋಕ್ಷವಾಗಿ ಇಡೀ ಲಡಾಖ್‌ನ್ನೇ ಜೈಲಾಗಿ ಪರಿವರ್ತಿಸಲಾಗಿದೆ ಲಡಾಖ್‌ನ ಪರಿಸರದ ಮೇಲೆ, ಅಲ್ಲಿನ ಪ್ರಕೃತಿ ಸಂಪತ್ತಿನ ಮೇಲೆ, ಜನರ



ಮೇಲೆ ಪೂರ್ಣ ಪ್ರಮಾಣದಲ್ಲಿ ಹಕ್ಕು ಸಾಧಿಸಲು ಸರಕಾರ ದಮನಕಾರಿ ನೀತಿಯನ್ನು ಇನಷ್ಟು ಕಠೋರಗೊಳಿಸಿದೆ. ಪರಿಣಾಮವಾಗಿ ಅಲ್ಲಿನ ಯುವ ಜನರು ಆಕ್ರೋಶಗೊಂಡು ಬೀದಿಗಿಳಿದಿದ್ದಾರೆ. ಬಿಜೆಪಿ ಕಚೇರಿಗಳಿಗೆ ಬೆಂಕಿ ಬಿದ್ದಿದೆ. ಸರಕಾರ ಇದನ್ನೇ ತನ್ನ ದಮನಕಾರಿ ನೀತಿಗೆ ಪೂರಕವಾಗಿ ಬಳಸಿಕೊಂಡಿತು. ಪೊಲೀಸರ ಗುಂಡಿಗೆ ನಾಲ್ವರು ಬಲಿಯಾದರು. ಹಲವರು ಗಾಯಗೊಂಡರು.

ಹಿಂಸಾಚಾರಕ್ಕೆ ಸಂಬಂಧಿಸಿ 60ಕ್ಕೂ ಅಧಿಕ ಜನರನ್ನು ಸರಕಾರ ಬಂಧಿಸಿದೆ. ಲಡಾಖ್‌ನ ಜನತೆ ಸೋನಮ್ ವಾಂಗ್ಚುಕ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸುತ್ತಿರುವುದು ಇದೇ ಮೊದಲಲ್ಲ ಇದಾದ ಬಳಿಕ ಲಡಾಖ್‌ನ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಸೆಪ್ಟೆಂಬರ್‌ನಲ್ಲಿ ಲೇಪ್‌ನಿಂದ ದಿಲ್ಲಿಗೆ ಪಾದಯಾತ್ರೆ ಹಮ್ಮಿಕೊಂಡಿದ್ದರು. ಈ ರ್ಯಾಲಿಗೂ ಕೇಂದ್ರ ಸರಕಾರ ಸ್ಪಂದಿಸಿರಲಿಲ್ಲ. ಸೋನಮ್ ವಾಂಗ್ಚುಕ್ ಎಂದಾಗ ನೆನಪಾಗುವುದು 'ತ್ರೀ ಈಡಿಯಟ್ಸ್ ಸೋನಮ್ ವಾಂಗ್ಚುಕ್ ಬದುಕನ್ನು ಆಧರಿಸಿ ಆಮಿರ್ ಖಾನ್ 'ತ್ರೀ ಈಡಿಯಟ್ಸ್ ಸಿನೆಮಾ ಮಾಡಿದ್ದರು. ಮೂಲತಃ ಇಂಜಿನಿಯರ್ ಆಗಿರುವ ಸೋನಮ್ ವಾಂಗ್ಚುಕ್ ಉದ್ಯಮ, ಸಂಶೋಧನೆ, ಲಡಾಖ್ ಪರಿಸರ ಮತ್ತು ಬುಡಕಟ್ಟು ಜನರ ಕುರಿತಂತೆ ವಹಿಸಿರುವ ಕಾಳಜಿಗಾಗಿ ಮ್ಯಾಗ್ಸೆಸೆ ಪ್ರಶಸ್ತಿಯನ್ನು ಪಡೆದವರು. ತಂತ್ರಜ್ಞಾನ, ಉದ್ಯಮ, ಶಿಕ್ಷಣ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ತಮ್ಮ ಪ್ರತಿಭೆಯನ್ನು ವಿಸ್ತರಿಸಿದವರು. ಲಡಾಖ್‌ನ ಅತ್ಮಸಾಕ್ಷಿಯಂತೆ ಬದುಕುತ್ತಿರುವವರು. ಲಡಾಖ್‌ನ ಹೃದಯ ಬಡಿತವನ್ನು ಅರಿತವರು. ಜಮ್ಮು-ಕಾಶ್ಮೀರದ ಮೇಲಿನ 370ನೇ ವಿಧಿಯನ್ನು ರದ್ದುಗೊಳಿಸಿ ಅದರ ವಿಶೇಷ ಸ್ಥಾನಮಾನವನ್ನು ಹಿಂದೆಗೆದಾಗ ಇವರು ಆ ನಿರ್ಧಾರವನ್ನು ಬೆಂಬಲಿಸಿದ್ದರು. ಮೋದಿ ಸರಕಾರ ಚೀನಾದ ವಸ್ತುಗಳಿಗೆ ಬಹಿಷ್ಕಾರದ ಕರೆಯನ್ನು ನೀಡಿದಾಗ ವಾಂಗ್ಚುಕ್ ಆ ಚಳವಳಿಯ ಜೊತೆಗೆ ನಿಂತರು ಮಾತ್ರವಲ್ಲ ಚೀನಾದ ವಸ್ತುವನ್ನು ಬಹಿಷ್ಕರಿಸುವ ಆಂದೋಲನದಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡಿದ್ದರು. ಜಮ್ಮು-ಕಾಶ್ಮೀರದಿಂದ ಲಡಾಖ್‌ನ್ನು ಬೇರ್ಪಡಿಸಿ, ಕೇಂದ್ರಾಡಳಿತ ಪ್ರದೇಶವನ್ನಾಗಿಸಿದಾಗ ಮುಂದೆ ಲಡಾಖ್ ಒಳಿತಿನ ದಿನಗಳು ಬರಲಿವೆ ಎಂದು ನಂಬಿದವರಲ್ಲಿ ಈ ಸೋನಮ್ ವಾಂಗ್ಚುಕ್ ಕೂಡ ಒಬ್ಬರು. ಯಾಕೆಂದರೆ ಜಮ್ಮು-ಕಾಶ್ಮೀರದ ಭಾಗವಾಗಿದ್ದಾಗ ಲಡಾಖ್ ಜನರಿಗೆ ತಮ್ಮನ್ನು ನಿರ್ಲಕ್ಷಿಸಲಾಗುತ್ತಿದೆ ಎನ್ನುವ ಭಾವನೆಯಿತ್ತು. ಕಾಶ್ಮೀರದಿಂದ ಬೇರ್ಪಟ್ಟಾಗ ಸಹಜವಾಗಿಯೇ ಇನ್ನು ನಮ್ಮ ಅಭಿವೃದ್ಧಿಯನ್ನು ನಾವೇ ನಿರ್ಧರಿಸಬಹುದು ಎಂದು ಭಾವಿಸಿದ್ದರು. ಕೇಂದ್ರ ಸರಕಾರ ತನ್ನ ಅಗತ್ಯ ಸಂದರ್ಭದಲ್ಲಿ ಈ ಸೋನಮ್ ವಾಂಗ್ಚುಕ್ ಅವರನ್ನು ಸರ್ವ ರೀತಿಯಲ್ಲಿ ಬಳಸಿಕೊಂಡಿತ್ತು. ಜಮ್ಮು-ಕಾಶ್ಮೀರದಿಂದ ಬೇರ್ಪಡಿಸಿದ್ದು ಲಡಾಖ್‌ನ್ನು ಉಳಿಸುವುದಕ್ಕಾಗಿಯಲ್ಲ ಕಾರ್ಪೊರೇಟ್ ದಣಿಗಳಿಗೆ ಬಲಿಕೊಡುವುದಕ್ಕೆ ಎನ್ನುವುದು ತಿಳಿಯುವಷ್ಟರಲ್ಲಿ ತಡವಾಗಿತ್ತು ಪ್ರಾಕೃತಿಕವಾಗಿ ಅತ್ಯಂತ ಸೂಕ್ಷ್ಮ ಪ್ರದೇಶವಾಗಿರುವ ಲಡಾಖ್‌ನಲ್ಲಿ ಕೈಗಾರಿಕೋದ್ಯಮಿಗಳ ಸಣ್ಣ ಹಸ್ತಕ್ಷೇಪವೂ ಭಾರೀ ದುಷ್ಪರಿಣಾಮಗಳನ್ನು ಬೀರಬಹುದು. ಇದನ್ನು ಲಡಾಖ್ ಜನರು ಈಗಾಗಲೇ ಅನುಭವಿಸುತ್ತಿದ್ದಾರೆ. ತುಸು ಏರುಪೇರಾದರೆ ಹಿಮಾಲಯ ಕರಗತೊಡಗುತ್ತದೆ. ನೆರೆ ಅವರ ಬದುಕನ್ನು ಕೊಚ್ಚಿಕೊಂಡು ಹೋಗುತ್ತದೆ. ಇರುವ ಸೀಮಿತ ಕುಡಿಯುವ ನೀರನ್ನು ಪ್ರವಾಸೋದ್ಯಮ, ಕೈಗಾರಿಕೆ ಎಂದು ಉದ್ಯಮಿಗಳು ಕಸಿದುಕೊಳ್ಳತೊಡಗಿದ್ದಾರೆ.

ಪ್ರವಾಸೋದ್ಯಮದ ಹೆಸರಿನಲ್ಲಿ ಲಡಾಖ್ ಪರಿಸರದ ಮೇಲೆ ಅತ್ಯಾಚಾರಗಳು ನಡೆಯುತ್ತವೆ. ವಿಪರ್ಯಾಸವೆಂದರೆ ಕೇಂದ್ರಾಡಳಿತ ಪ್ರದೇಶವಾದ ದಿನದಿಂದ ಇಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಿದೆ. ಶೇ. 25ಕ್ಕಿಂತಲೂ ಅಧಿಕ ನಿರುದ್ಯೋಗಿಗಳು ಇಲ್ಲಿದ್ದಾರೆ. ಗಣಿ ಕಂಪೆನಿಗಳು ಗಣಿಗಾರಿಕೆಗಳಿಗೆ ಭೂಮಿಯನ್ನು ಖರೀದಿಸುತ್ತಿರುವುದು ಕೂಡ ಇಲ್ಲಿಯ ಜನರನ್ನು ಆತಂಕಕ್ಕೆ ತಳ್ಳಿದೆ. ಈ ಕಾರಣದಿಂದ ಅಸ್ಸಾಂ, ಮೇಘಾಲಯ, ತ್ರಿಪುರಾ, ಮಿಜೋರಾಂನಂತಹ ಈಶಾನ್ಯ ರಾಜ್ಯಗಳಲ್ಲಿ ಜಾರಿಯಲ್ಲಿರುವ ಆರ್ಟಿಕಲ್ 2442ನ್ನು ಲಡಾಖ್‌ಗೂ ಅನ್ವಯಗೊಳಿಸಲು ಜನರು ಒತ್ತಾಯಿಸುತ್ತಿದ್ದಾರೆ. ಈಶಾನ್ಯ ಭಾರತದಲ್ಲಿರುವಂತೆಯೇ ಲಡಾಖ್‌ನಲ್ಲೂ ಬುಡಕಟ್ಟು ಜನರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಇದು ಪರಿಸರ ಸೂಕ್ಷ್ಮ ಪ್ರದೇಶವೆಂದು ಗುರುತಿಸಲ್ಪಟ್ಟಿದೆ. ಆರನೇ ಶೆಡ್ಯೂಲ್‌ನ್ನು ಜಾರಿಗೊಳಿಸಿದರೆ, ಇಲ್ಲಿನ ಭೂಪ್ರದೇಶಗಳನ್ನು ಹೊರಗಿನ ಜನರು ಕೊಂಡುಕೊಳ್ಳುವುದು ಕಷ್ಟವಾಗುವುದರಿಂದ ಗಣಿಗಾರಿಕೆಗಳಂತಹ ಪರಿಸರ ವಿರೋಧಿ ಉದ್ಯಮಗಳು ಕಾಲಿಡುವುದನ್ನು ತಡೆಯಬಹುದು. ಸೋನಮ್ ವಾಂಗ್ಚುಕ್ ಸೇರಿದಂತೆ ಲಡಾಖ್ ಜನರ ಕಳಕಳಿಯಾಗಿದೆ. ಜಮ್ಮು-ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ಕಿತ್ತು ಅದನ್ನು ಪೂರ್ಣ ಪ್ರಮಾಣದಲ್ಲಿ ಭಾರತಕ್ಕೆ ಸೇರಿಸಿದ್ದೇನೆ ಎಂದು ಮೋದಿ ಹೇಳುತ್ತಿರುವುದು ನಿಜವೇ ಆಗಿದ್ದರೆ ಲಡಾಖ್ ಜನರ ಜೊತೆಗೆ ಯಾಕೆ ಅವರು ಅನ್ಯರಂತೆ ವರ್ತಿಸುತ್ತಿದ್ದಾರೆ ಅವರ ಬೇಡಿಕೆಗಳಿಗೆ ಸ್ಪಂದಿಸದೆ, ಅವರನ್ನು ಶತ್ರುಗಳಂತೆ ಯಾಕೆ ನಡೆಸಿಕೊಳ್ಳುತ್ತಿದ್ದಾರೆ

**ಕಳೆದ ವರ್ಷ ಮಾರ್ಚ್‌ನಲ್ಲಿ ಮೈನಸ್ 10 ಡಿಗ್ರಿ ವಾತಾವರಣದ ನೀರು ಹೆಪ್ಪುಗಟ್ಟುವ ಚಳಿಯಲ್ಲಿ ವಾಂಗ್ಚುಕ್ ಅವರು ಸುಮಾರು 300 ಲಡಾಖ್ ನಿವಾಸಿಗಳ ಜೊತೆಗೆ 21 ದಿನಗಳ ಉಪವಾಸ ಸತ್ಯಾಗ್ರಹ ನಡೆಸಿದ್ದರು. ಅವರಿಗೆ ಬೆಂಬಲವಾಗಿ ಸಾವಿರಾರು ಜನರು ಆ ಸಂದರ್ಭದಲ್ಲಿ ನೆರೆದಿದ್ದರು. ಅಲ್ಲಿನ ಜನರ ನೋವು ದುಮ್ಮಾನಗಳಿಗೆ ಸ್ಪಂದಿಸಿ ಒಬ್ಬನೇ ಒಬ್ಬ ಬಿಜೆಪಿ ನಾಯಕ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿರಲಿಲ್ಲ. ಅಂದು ತಾತ್ಕಾಲಿಕವಾಗಿ ಉಪವಾಸ ಅಂತ್ಯಗೊಳಿಸಿದ ವಾಂಗ್ಚುಕ್, ಭರವಸೆ ಈಡೇರದಿದ್ದರೆ ಮತ್ತೆ ಉಪವಾಸ ಕೂರಲಿದ್ದೇನೆ ಎಂದು ಎಚ್ಚರಿಸಿದ್ದರು.**

---

# ನವರಾತ್ರಿ ಮಹೋತ್ಸವ ಎಂಟನೆಯ ದಿನ

## ಮಹಾಗೌರಿ ಆರಾಧನೆ ದುರ್ಗಾಷ್ಟಮಿ ಪೂಜೆ ವಿಧಾನ ಮತ್ತು ಮಹತ್ವ..!



ವಿಶ್ವಾಸ್.ಡಿ.ಗೌಡ

ಶರನ್ನವರಾತ್ರಿ ಅಥವಾ ಶಾರದೀಯ ನವರಾತ್ರಿಯ ಎಂಟನೇ ದಿನದಂದು, ದುರ್ಗಾ ದೇವಿಯ ಎಂಟನೇ ಶಕ್ತಿಯಾದ ಮಹಾಗೌರಿ ದೇವಿಯನ್ನು ಪೂಜಿಸುವ ಸಂಪ್ರದಾಯವಿದೆ. ಮಹಾಗೌರಿ ದೇವಿಯು ಪಾರ್ವತಿ ದೇವಿಯ ರೂಪವಾಗಿದ್ದು, ಈಕೆಯನ್ನು ಗಣೇಶನ ತಾಯಿ ಎಂದೂ ಕರೆಯುತ್ತಾರೆ. ತಾಯಿಯ ಈ ರೂಪವು ಸೌಂದರ್ಯ, ಐಶ್ವರ್ಯ ಮತ್ತು ಬುದ್ಧಿವಂತಿಕೆಯನ್ನು ನೀಡುತ್ತದೆ. ಇದಲ್ಲದೆ, ಮಹಾಗೌರಿಯ ಉಪವಾಸ ಮತ್ತು ಆರಾಧನೆಯು ಮಕ್ಕಳ ದೀರ್ಘಾಯುಷ್ಯ, ಉತ್ತಮ ಆರೋಗ್ಯ ಇತ್ಯಾದಿಗಳಲ್ಲಿ ಉಂಟಾಗುವ ಪ್ರತಿಯೊಂದು ಸಮಸ್ಯೆಗಳಿಗೆ ಪರಿಹಾರವಾಗಿ ಬಹಳ ಪ್ರಯೋಜನಕಾರಿ ಎಂದು ಪರಿಗಣಿಸಲಾಗಿದೆ. ಅಂತಹ ಪರಿಸ್ಥಿತಿಯಲ್ಲಿ, ಮಹಾದೇವನ ಅಪಾರ ಪ್ರೀತಿ, ಗಂಗಾ ಮಾತೆಯ ಪರಿಶುದ್ಧತೆಯ ಸಂಗಮದಿಂದ ಸೃಷ್ಟಿಯಾದ ಮಹಾಗೌರಿ ದೇವಿಯ ಕುರಿತು ಒಂದಿಷ್ಟನ್ನು ಈ ಲೇಖನದಲ್ಲಿ ತಿಳಿದುಕೊಳ್ಳೋಣ.

ಮಹಾಗೌರಿ ರೂಪ

ಮಹಾಗೌರಿ ದೇವಿಯು ದುರ್ಗಾ ದೇವಿಯ ಎಂಟನೆಯ ಶಕ್ತಿ. ಆಕೆಯು ಸ್ವಭಾವತಃ ತುಂಬಾನೇ ಸೌಮ್ಯ. ಆಕೆ ರೂಪದಲ್ಲೂ ಅತ್ಯಂತ ಸರಳವಾಗಿದ್ದಾಳೆ. ಮಹಾಗೌರಿ ದೇವಿಯು ತುಂಬಾ ಸುಂದರವಾದ, ಆಕರ್ಷಣೀಯವಾದ ರೂಪವನ್ನು ಹೊಂದಿದ್ದಾಳೆ. ಅವರ ಬಟ್ಟೆ, ಆಭರಣ ಇತ್ಯಾದಿಗಳೂ ಬಿಳಿ ಬಣ್ಣದಲ್ಲಿರುತ್ತದೆ. ಅವಳಿಗೆ ನಾಲ್ಕು ತೋಳುಗಳಿವೆ. ಮಹಾಗೌರಿಯ ವಾಹನ ಗೂಳಿ. ದೇವಿಯ ಮೇಲಿನ ಬಲಗೈಯಲ್ಲಿ ಅಭಯ ಮುದ್ರೆ ಮತ್ತು ಕೆಳಗಿನ ಕೈಯಲ್ಲಿ ತ್ರಿಶೂಲವಿದೆ. ಮೇಲಿನ ಎಡಗೈ ಡಮರು ಮತ್ತು ಕೆಳಗಿನ ಕೈಯಲ್ಲಿ ವರ ಮುದ್ರೆಯನ್ನು ಹಿಡಿದಿರುತ್ತಾಳೆ. ಅವರ ಸ್ವಭಾವವು ತುಂಬಾ ಶಾಂತವಾಗಿರುತ್ತದೆ. ತಾಯಿಯ ಈ ರೂಪವನ್ನು ಅನ್ನಪೂರ್ಣ, ಐಶ್ವರ್ಯ, ಪ್ರದಾಯಿನಿ ಮತ್ತು ಚೈತನ್ಯಮಯ ಎಂದೂ ಕರೆಯುತ್ತಾರೆ.



**ಮಹಾಗೌರಿ ಪೂಜೆ ವಿಧಾನ:** ಸೂರ್ಯೋದಯಕ್ಕೂ ಮುನ್ನ ಎದ್ದು ಸ್ನಾನ ಮಾಡಿ ಮತ್ತು ಶುಭ್ರವಾದ ಮತ್ತು ಸುಂದರವಾದ ಬಟ್ಟೆಗಳನ್ನು ಧರಿಸಿ. ಮೊದಲನೆಯದಾಗಿ, ಮರದ ಪೀಠದ ಮೇಲೆ ಕೆಂಪು ಬಟ್ಟೆಯನ್ನು ಹಾಕಿ, ಗಂಗಾಜಲವನ್ನು ಚಿಮುಕಿಸಿ ಶುದ್ಧೀಕರಿಸಿ. ನಂತರ ಅದರ ಮೇಲೆ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿ. ಇದಾದ ನಂತರ ಅಮ್ಮನ ಮೂರ್ತಿಯನ್ನೂ ಪ್ರತಿಷ್ಠಾಪಿಸಬೇಕು. ನಂತರ ಕಲಶ ಪೂಜೆ ಮಾಡಬೇಕು. ಪಂಚಾಮೃತದೊಂದಿಗೆ ಭಗವಾನ್ ಗಣೇಶನಿಗೆ, ತಾಯಿ ಸತರಸ್ವತಿಗೆ ಅಭಿಷೇಕವನ್ನು ಮಾಡಿಸಬೇಕು. ಸ್ನಾನ ಮುಗಿಸಿ ಗಣೇಶನಿಗೆ ಹೊಸ ಬಟ್ಟೆ ತೊಡಿಸಿ, ಅಮ್ಮನಿಗೆ ಅಲಂಕಾರ ಮಾಡಿ. ದಾಸವಾಳದ ಹೂವು, ಅಕ್ಷತೆ, ಕುಂಕುಮ, ಸಿಂಧೂರ, ಪಾನ್, ವೀಳ್ಯದೆಲೆ ಇತ್ಯಾದಿಗಳನ್ನು ತಾಯಿಗೆ ಅರ್ಪಿಸಿ. ಗಣೇಶ ಮತ್ತು ಮಹಾಗೌರಿಗೆ ನೈವೇದ್ಯವನ್ನು ಅರ್ಪಿಸಿ. ಇದರ ನಂತರ, ಧೂಪ, ದೀಪ, ಅಗರಬತ್ತಿಗಳೊಂದಿಗೆ ಗಣೇಶ ಸ್ತೋತ್ರವನ್ನು ಪಠಿಸಿ. ಗಣೇಶ ಸ್ತೋತ್ರದ ನಂತರ, ಮಹಾಗೌರಿ ಚಾಲೀಸಾವನ್ನು ಪಠಿಸಿ ಮತ್ತು ತಾಯಿಯ ಮಂತ್ರಗಳನ್ನು ಪಠಿಸಿ, ನಂತರ ಕೊನೆಯಲ್ಲಿ, ಗಣೇಶನಿಗೆ ಮತ್ತು ತಾಯಿಗೆ ಸಹ-ಕುಟುಂಬದ ಆರತಿ ಮಾಡಿ. ತಾಯಿಯ ಮಹಾಗೌರಿ ರೂಪವನ್ನು ಗಣೇಶನ ತಾಯಿ ಎಂದು ಕರೆಯಲಾಗುತ್ತದೆ ಎಂಬುದನ್ನು ನೆನಪಿನಲ್ಲಿಡಿ. ಅಂತಹ ಪರಿಸ್ಥಿತಿಯಲ್ಲಿ, ತಾಯಿಯ ಆರತಿ ಪೂಜೆಯನ್ನು ಮಾಡಬೇಕು ಮತ್ತು ಮಂತ್ರಗಳನ್ನು ಪಠಿಸಬೇಕು.

**ಮಹಾಗೌರಿ ಪೂಜೆ ಮಹತ್ವ:** ನವರಾತ್ರಿಯ ಎಂಟನೇ ದಿನ ಕೈಗೊಳ್ಳುವ ಪೂಜೆಯು ಭಕ್ತರಿಗೆ ಬಹಳಷ್ಟು ಪುಣ್ಯ ಪ್ರಾಪ್ತಿ ಮಾಡುತ್ತದೆ. ತಾಯಿ ಗೌರಿಯ ಆಶೀರ್ವಾದದಿಂದ ಭಕ್ತರಿಗೆ ಬಹಳಷ್ಟು ಲಾಭಗಳಾಗುತ್ತದೆ. ಭಕ್ತರ ಬದುಕಿನಲ್ಲಿ ಇರುವ ಸಂಕಷ್ಟಗಳನ್ನು ತಾಯಿ ಗೌರಿ ಪರಿಹರಿಸಿ ತನ್ನ ಆಶೀರ್ವಾದದಿಂದ ದುಃಖಗಳನ್ನು ದೂರ ಮಾಡುತ್ತಾಳೆ. ಬದುಕಿನಲ್ಲಿ ನಾವು ಕಂಡಿರುವ ಆಸೆಗಳು ಈಡೇರುವ ಮಾರ್ಗಗಳನ್ನು ತಾಯಿ ಗೌರಿ ತೋರುತ್ತಾಳೆ. ನಮ್ಮ ಗುರಿ ಮುಟ್ಟಲು ನೆರವಾಗುತ್ತಾಳೆ. ನಮ್ಮ ಕೆಲಸಗಳನ್ನು ತಪ್ಪಿಲ್ಲದಂತೆ ನಿಖರವಾಗಿ ಮಾಡಲು ತಾಯಿ ಗೌರಿ ನೆರವಾಗುತ್ತಾಳೆ. ಬದುಕಿನಲ್ಲಿ ಎಲ್ಲ ಸುಖಗಳನ್ನೂ ನೀಡಿ ಆಧ್ಯಾತ್ಮದತ್ತ ಒಲವು ಮೂಡುವಂತೆ ಮಾಡಿ ನಮ್ಮಿಂದ ದಾನ ಧರ್ಮಗಳನ್ನು ಮಾಡಿಸುತ್ತಾಳೆ. ಎಂಟನೇ ದಿನ ನಡೆಯುವ ಗೌರಿ ಪೂಜೆ ಹಾಗೂ ಸರಸ್ವತಿ ಪೂಜೆಯನ್ನು ಮಹಾ ಅಷ್ಟಮಿ ಎಂದು ಕರೆಯಲಾಗುತ್ತದೆ.

**ಮಹಾಗೌರಿಯ ಪ್ರಿಯ ಭೋಗ:** ದುರ್ಗೆಯ ಎಂಟನೆಯ ರೂಪವನ್ನು ಮಾತಾ ಮಹಾಗೌರಿ ಎಂದು ಕರೆಯಲಾಗುತ್ತದೆ. ಮಹಾಗೌರಿ ದೇವಿಯನ್ನು ನವರಾತ್ರಿಯ ಎಂಟನೇ ದಿನದಂದು ಅಂದರೆ ಮಹಾ ಅಷ್ಟಮಿ ಅಥವಾ ದುರ್ಗಾಷ್ಟಮಿಯಂದು ಪೂಜಿಸಲಾಗುತ್ತದೆ. ಮಹಾಗೌರಿಯನ್ನು ಪೂಜಿಸುವ ಭಕ್ತರ ಮೇಲೆ ತಾಯಿಯು ಯಾವಾಗಲೂ ತನ್ನ ಆಶೀರ್ವಾದವನ್ನು ನೀಡುತ್ತಾಳೆ. ತೆಂಗಿನಕಾಯಿ ಮತ್ತು ತೆಂಗಿನಕಾಯಿಯಿಂದ ಮಾಡಿದ ವಸ್ತುಗಳನ್ನು ಮಾತೆ ಗೌರಿಗೆ ಅರ್ಪಿಸಲಾಗುತ್ತದೆ. ತೆಂಗಿನಕಾಯಿಯಿಂದ ಮಾಡಿದ ಬರ್ಫಿಯನ್ನು ತಾಯಿಗೆ ಅರ್ಪಿಸಬಹುದು.

### ಮಹಾಗೌರಿ ಪೂಜೆಯ ಉಪಾಯ

ಒಬ್ಬ ವ್ಯಕ್ತಿಯ ವೈವಾಹಿಕ ಜೀವನದಲ್ಲಿ ವಿವಾದಗಳು ಇದ್ದಲ್ಲಿ, ಮಹಾಗೌರಿಯನ್ನು ಪೂಜಿಸುವುದರಿಂದ ವಿಶೇಷ ಲಾಭಗಳು ದೊರೆಯುತ್ತವೆ. ಮಹಾಗೌರಿಯ ಆಚರಣೆಯಿಂದ ಎಲ್ಲಾ ರೀತಿಯ ವಿವಾದಗಳು ಮತ್ತು ಮನೆಯ ತೊಂದರೆಗಳು ದೂರವಾಗುತ್ತವೆ. ಅಂತಹ ಪರಿಸ್ಥಿತಿಯಲ್ಲಿ, ಎಣ್ಣೆ ಅಥವಾ ತುಪ್ಪದ ದೀಪವನ್ನು ಬೆಳಗಿಸಿ. ಮಣ್ಣಿನ ದೀಪವನ್ನು ಬಳಸುವುದು ಹೆಚ್ಚು ಪ್ರಯೋಜನಕಾರಿ. ಅದರ ನಂತರ 5 ಸಾಸಿವೆಯನ್ನು ತೆಗೆದುಕೊಂಡು ಮಾತಾ ಮಹಾಗೌರಿ ಪೂಜಾ ಮಂತ್ರವನ್ನು ಪಠಿಸಿ ಮತ್ತು ಅದನ್ನು ಇಡೀ ಮನೆಯ ಮೂಲೆ ಮೂಲೆಯಲ್ಲೂ ತೋರಿಸಿ. ಅದರ ನಂತರ ಆ ಸಾಸಿವೆ ಕಾಳುಗಳನ್ನು ಉರಿಯುವ ದೀಪದಲ್ಲಿ ಹಾಕಿ. ನಂತರ ದೀಪ ಆರಿದ ಬಳಿಕ ಅದನ್ನು ಮನೆಯಿಂದ ದೂರ ಎಸೆದು ಹಿಂದಿರುಗಿ ನೋಡದೆ ಮನೆಗೆ ಬನ್ನಿ.

---

# ರೆಸ್ಟೋರೆಂಟ್ ರುಚಿಯ ಫ್ರೈಡ್ ರೈಸ್ 5 ನಿಮಿಷದಲ್ಲಿ ಮಾಡಿ!



ನೀವು ಬೆಳಗ್ಗೆ ತಿಂಡಿ ಸಮಯಕ್ಕೆ ರೈಸ್‌ನಿಂದ ಮಾಡುವಂತಹ ಬಗೆ ಬಗೆಯ ತಿಂಡಿಯನ್ನು ಸವಿಯಲು ಇಷ್ಟಪಡುವ ಮಂದಿ ಆಗಿರಬಹುದು. ಅದರಲ್ಲೂ ಅನ್ನವನ್ನು ಬಳಸಿ ಮಾಡುವಂತಹ ಹಲವು ಖಾದ್ಯಗಳನ್ನು ಸವಿಯುತ್ತಿದ್ದರೆ ಬೆಳಗ್ಗೆ ತಿಂಡಿ ಬಹಳ ರುಚಿ ನೀಡಲಿವೆ. ಪಲಾವ್, ಚಿತ್ರಾನ್ನ, ಪುಳಿಯೋಗರೆ, ರೈಸ್ ಬಾತ್ ಸೇರಿದಂತೆ ಹಲವು ರೀತಿಯ ರೈಸ್ ಖಾದ್ಯ ಮಾಡಿ ಸವಿಯೋದು ಕಾಮನ್. ಅದರಲ್ಲು ರೈಸ್‌ನಿಂದ ಬಹಳ ರುಚಿ ರುಚಿಯ ಖಾದ್ಯಗಳ ಮಾಡಿ ಸವಿಯೋದು ಕೂಡ ಇದೆ. ಆದ್ರೆ ನಾವಿಂದು ಹೋಟೆಲ್, ರೆಸ್ಟೋರೆಂಟ್‌ನಲ್ಲಿ ಸವಿಯಬಹುದಾದ ಫ್ರೈಡ್ ರೈಸ್ ಅನ್ನು ಮನೆಯಲ್ಲೇ ಮಾಡಿ ಸವಿಯುವ ಕುರಿತು ತಿಳಿದುಕೊಳ್ಳೋಣ. ಅದ್ರಲ್ಲೂ ಈ ಫ್ರೈಡ್ ರೈಸ್ ಅನ್ನು ಐಟ್ ಅಂತ ಮಾಡಿ ಮುಗಿಸಬಹುದು.

ಹಾಗಾದ್ರೆ ರೈಸ್ ಬಳಸಿ ಮಾಡುವ ಫ್ರೈಡ್ ರೈಸ್ ಅನ್ನು ಸುಲಭವಾಗಿ ಮಾಡುವುದು ಹೇಗೆ ಅನ್ನೋದನ್ನು ತಿಳಿಯೋಣ. ಅದ್ರಲ್ಲೂ ನೀವು ಹೋಟೆಲ್‌ಗೆ ತೆರಳಿದ್ದ ವೇಳೆ ಮಾಡಿ ಸವಿಯುವಂತಹ ರುಚಿ ರುಚಿಯ ಫ್ರೈಡ್ ರೈಸ್ ಅನ್ನು ಮನೆಯಲ್ಲೂ ಮಾಡಬಹುದು. ಹಾಗಾದ್ರೆ ನಾವಿಂದು ಮನೆಯಲ್ಲೇ ಈ ಫ್ರೈಡ್ ರೈಸ್ ಮಾಡುವ ಕುರಿತಾಗಿ ತಿಳಿಯೋಣ. ಫ್ರೈಡ್ ರೈಸ್ ಮಾಡಲು ಯಾವೆಲ್ಲಾ ಪದಾರ್ಥಗಳು ಬೇಕು? ಮಾಡುವ ವಿಧಾನವೇನು? ಎಷ್ಟು ಸಮಯ ಹಿಡಿಯಲಿದೆ ಎಂಬುದನ್ನು ನಾವಿಂದು ತಿಳಿದುಕೊಳ್ಳೋಣ.

**ಫ್ರೈಡ್ ರೈಸ್ ಮಾಡುವ ವಿಧಾನವೇನು?** ಮೊದಲು ಬಾಣಲೆಯಲ್ಲಿ ಎಣ್ಣೆ ಹಾಕಿ ಬಿಸಿಯಾದ ಬಳಿಕ ಹಸಿ ಮೆಣಸು, ಬೆಳ್ಳುಳ್ಳಿ, ಈರುಳ್ಳಿ ಹಾಕಿಕೊಳ್ಳಿ. ನಂತರ ಇದಕ್ಕೆ ಕ್ಯಾರೆಟ್, ಬೀನ್ಸ್, ಕ್ಯಾಪ್ಸಿಕಂ ಹಾಕಿಕೊಂಡು ಚೆನ್ನಾಗಿ ಫ್ರೈ ಮಾಡಿಕೊಳ್ಳಿ. ಉಪ್ಪು ಇದೇ ವೇಳೆ ಹಾಕಿ 2 ನಿಮಿಷ ಫ್ರೈ ಮಾಡಿ. ಈ ಎಲ್ಲಾ ವಸ್ತುಗಳನ್ನು ಚಿಕ್ಕದಾಗಿ ಕತ್ತರಿಸಿಕೊಳ್ಳಿ. ಈಗ ಮೊದಲೇ ಮಾಡಿಟ್ಟಿದ್ದ ಅನ್ನವನ್ನು ಇದಕ್ಕೆ ಹಾಕಿ ಚೆನ್ನಾಗಿ ಮಿಕ್ಸ್ ಮಾಡಿಕೊಳ್ಳಿ. ನಂತರ ಪೆಪ್ಪರ್ ಪುಡಿ, ಚಿಕನ್ ಮಸಾಲ ಪುಡಿ, ಸೋಯಾ ಸಾಸ್ ಕೂಡ ಹಾಕಿಕೊಂಡು ಚೆನ್ನಾಗಿ ಮಿಕ್ಸ್ ಮಾಡಿಕೊಳ್ಳಿ. ಖಾರ ಬೇಕಿದ್ದರೆ ಅರ್ಧ ಸ್ಪೂನ್ ಹಾಕಿಕೊಂಡು ಮಿಕ್ಸ್ ಮಾಡಿ 2 ನಿಮಿಷ ಫ್ರೈ ಮಾಡಿಕೊಳ್ಳಿ. ಕೊನೆಯಲ್ಲಿ ಇದಕ್ಕೆ ಕೊತ್ತಂಬರಿ ಸೊಪ್ಪು ಹಾಕಿಕೊಂಡು ಎಲ್ಲಾ ಮಸಾಲೆಗಳು ಚೆನ್ನಾಗಿ ಅನ್ನಕ್ಕೆ ಹಿಡಿಯುವಂತೆ ಕಲಸಿಕೊಳ್ಳಿ. ಇಷ್ಟಾದರೆ ನಿಮ್ಮ ಮುಂದೆ ರುಚಿ ರುಚಿಯ ಹಾಗೆ ಹೋಟೆಲ್ ರುಚಿಯ ಫ್ರೈಡ್ ರೈಸ್ ರೆಡಿಯಾಗುತ್ತೆ. ಇದನ್ನು ಮಾಡುವುದು ಬಹಳ ಸುಲಭ, ಹಾಗೆ ಕೆಲವೇ ನಿಮಿಷದಲ್ಲಿ ಮಾಡಿ ಮುಗಿಸಬಹುದು. ನೀವು ಸಹ ಬೆಳಗ್ಗೆ ತಿಂಡಿಗೆ ಯಾವುದಾದರು ರೈಸ್‌ನಿಂದ ಮಾಡುವಂತಹ ಖಾದ್ಯ ಸವಿಯಲು ಮುಂದಾಗುವುದಾದರೆ ಈ ಸುಲಭದ ಹಾಗೆ ಅಪರೂಪದ ಫ್ರೈಡ್ ರೈಸ್ ಅನ್ನು ಒಮ್ಮೆ ಟ್ರೈ ಮಾಡಿ ನೋಡಿ. ಎಲ್ಲರಿಗೂ ಇದು ಇಷ್ಟವಾಗುತ್ತೆ. ಹೋಟೆಲ್‌ನಲ್ಲಿ ಸವಿದ ರುಚಿ ಸಿಗಲಿದೆ.

**ಫ್ರೈಡ್ ರೈಸ್ ಮಾಡಲು ಯಾವೆಲ್ಲಾ ವಸ್ತುಗಳು ಬೇಕು?**

- ಅನ್ನ
- ಈರುಳ್ಳಿ
- ಹಸಿ ಮೆಣಸಿನಕಾಯಿ
- ಬೆಳ್ಳುಳ್ಳಿ
- ಕ್ಯಾರೆಟ್
- ಹಸಿರು ಬೀನ್ಸ್
- ಕ್ಯಾಪ್ಸಿಕಂ
- ಸೋಯಾ ಸಾಸ್
- ಕರಿಮೆಣಸಿನ ಪುಡಿ
- ಚಿಕನ್ ಮಸಾಲ ಪುಡಿ
- ಕೊತ್ತಂಬರಿ ಸೊಪ್ಪು
- ಅಡುಗೆ ಎಣ್ಣೆ
- ರುಚಿಗೆ ತಕ್ಕಷ್ಟು ಉಪ್ಪು

---

**ಯಾರು ಜಾಗರೂಕರಾಗಿರಬೇಕು?**

**ಯಾರ ಕುಟುಂಬದಲ್ಲಿ ಹೃದಯದ ಕಾಯಿಲೆಯ ಇತಿಹಾಸವಿದೆಯೋ ಹಾಗೆಯೇ ಬೊಜ್ಜು, ಈಗಾಗಲೇ ಹೆಚ್ಚಿನ ಕೊಲೆಸ್ಟ್ರಾಲ್ ಮಟ್ಟವನ್ನು ಹೊಂದಿರುವ ಜನರು ಪನೀರ್ ಸೇವನೆಯ ಬಗ್ಗೆ ಹೆಚ್ಚು ಜಾಗರೂಕರಾಗಿರಬೇಕು. ಅವರೂ ಕೂಡಾ ಅಪರೂಪಕ್ಕೆ ಇದನ್ನು ಸೇವಿಸಬಹುದು. ಎಣ್ಣೆಯಲ್ಲಿ ಹುರಿಯುವ ಬದಲು ಸಣ್ಣ ಪ್ರಮಾಣದಲ್ಲಿ ಮತ್ತು ಗ್ರಿಲ್ ಅಥವಾ ಸ್ಟೀಮಿಂಗ್‌ನಂತಹ ಆರೋಗ್ಯಕರ ಅಡುಗೆ ವಿಧಾನಗಳನ್ನು ಆರಿಸಿಕೊಳ್ಳಬೇಕು.**



# ಪನೀರ್ ತಿನ್ನೋದ್ರಿಂದ ಕೊಲೆಸ್ಟ್ರಾಲ್ ಹೆಚ್ಚುತ್ತಾ?

ಪನೀರ್ ಪ್ರೋಟೀನ್‌ನಿಂದ ಸಮೃದ್ಧವಾಗಿರುವ ಆಹಾರವಾಗಿದೆ. ಆದರೆ ಇದನ್ನು ಸೇವಿಸೋದು ಅಧಿಕ ಕೊಲೆಸ್ಟ್ರಾಲ್ ಸಮಸ್ಯೆ ಇರುವವರಿಗೆ ಒಳ್ಳೆಯದಲ್ಲ. ಇದ್ರಿಂದ ಯಾವೆಲ್ಲಾ ಸಮಸ್ಯೆ ಕಾಡುತ್ತೆ ಎನ್ನುವುದನ್ನು ತಿಳಿಯೋಣ.

ಪನೀರ್ ಅಥವಾ ಭಾರತೀಯ ಕಾಟೇಜ್ ಚೀಸ್, ಅನೇಕ ಸಸ್ಯಾಹಾರಿ ಆಹಾರಗಳಲ್ಲಿ ಪ್ರೋಟೀನ್, ಕ್ಯಾಲ್ಸಿಯಂನ ಜನಪ್ರಿಯ ಮೂಲವಾಗಿದೆ. ಈ ಮೀನು ಮಾಂಸ ತಿನ್ನದವರು ಹೆಚ್ಚಾಗಿ ಆಯ್ಕೆ ಮಾಡಿಕೊಳ್ಳುವುದು ಪನೀರ್ ಅನ್ನು. ಇದನ್ನು ಕರಿಗಳಿಂದ ತಿಂಡಿಗಳವರೆಗೆ ನಾನಾ ಭಕ್ಷ್ಯಗಳಲ್ಲಿ ಬಳಸಲಾಗುತ್ತದೆ. ಪನೀರ್ ಅನ್ನು ಪೂರ್ಣ-ಕೆನೆ ಹಾಲಿನಿಂದ ತಯಾರಿಸಲಾಗಿರುವುದರಿಂದ, ಇದನ್ನು ನಿಯಮಿತವಾಗಿ ತಿನ್ನುವುದರಿಂದ ಕೊಲೆಸ್ಟ್ರಾಲ್ ಮಟ್ಟಗಳು ಹೆಚ್ಚಾಗಬಹುದು ಎಂದು ಅನೇಕ ಜನರು ಚಿಂತಿಸುತ್ತಾರೆ.

**ಪನೀರ್ ಮತ್ತು ಅದರ ಕೊಬ್ಬಿನ ಅಂಶ:** ಪನೀರ್ ಸ್ಯಾಚುರೇಟೆಡ್ ಕೊಬ್ಬುಗಳು ಮತ್ತು ಕೊಲೆಸ್ಟ್ರಾಲ್ ಎರಡನ್ನೂ ಹೊಂದಿರುತ್ತದೆ ಏಕೆಂದರೆ ಇದು ಡೈರಿ ಉತ್ಪನ್ನವಾಗಿದೆ. ಹೆಚ್ಚಿನ ಪ್ರಮಾಣದಲ್ಲಿ ಸೇವಿಸಿದಾಗ, ಸ್ಯಾಚುರೇಟೆಡ್ ಕೊಬ್ಬುಗಳು ದೇಹದಲ್ಲಿ ಹೆಚ್ಚಿನ ಕೊಲೆಸ್ಟ್ರಾಲ್ ಮಟ್ಟಗಳಿಗೆ ಕಾರಣವಾಗಬಹುದು. ಪನೀರ್ ಅನ್ನು ಪೂರ್ಣ-ಕೊಬ್ಬಿನ ಹಾಲಿನಿಂದ ತಯಾರಿಸಲಾಗಿರುತ್ತದೆ.

**ಒಳ್ಳೆಯದು VS ಕೆಟ್ಟ ಕೊಲೆಸ್ಟ್ರಾಲ್:** ಕೊಲೆಸ್ಟ್ರಾಲ್ ಸಂಪೂರ್ಣವಾಗಿ ಹಾನಿಕಾರಕವಲ್ಲ. ನಮ್ಮ ದೇಹವು ಹಾರ್ಮೋನ್ ಉತ್ಪಾದನೆ ಮತ್ತು ಜೀವಕೋಶದ ಕಾರ್ಯಕ್ಕಾಗಿ ಇದು ಅಗತ್ಯವಿದೆ. ಕೆಟ್ಟ ಕೊಲೆಸ್ಟ್ರಾಲ್ (LDL) ಮಟ್ಟಗಳು ಹೆಚ್ಚಾದಾಗ ಸಮಸ್ಯೆ ಉದ್ಭವಿಸುತ್ತದೆ. ಫೈಬರ್-ಭರಿತ ಆಹಾರಗಳೊಂದಿಗೆ ಸಮತೋಲನಗೊಳಿಸದೆ ಪನೀರ್ ಅನ್ನು ಅತಿಯಾಗಿ ತಿನ್ನುವುದು LDL ಕೊಲೆಸ್ಟ್ರಾಲ್ ಅನ್ನು ಹೆಚ್ಚಿಸಲು ಕಾರಣವಾಗಬಹುದು, ಇದು ಹೃದಯ ಕಾಯಿಲೆಗೆ ಕಾರಣವಾಗುತ್ತದೆ.

**ಪನೀರ್ ಮತ್ತು ತೂಕ ನಿರ್ವಹಣೆ:** ಪನೀರ್ ಪ್ರೋಟೀನ್‌ನಲ್ಲಿ ಸಮೃದ್ಧವಾಗಿದೆ, ಇದು ನಿಮ್ಮನ್ನು ಹೆಚ್ಚು ಸಮಯದವರೆಗೆ ಹೊಟ್ಟೆ ತುಂಬಿರುವಂತೆ ಮಾಡುತ್ತದೆ ಮತ್ತು ಸ್ನಾಯುಗಳ ದುರಸ್ತಿಗೆ ಸಹಾಯ ಮಾಡುತ್ತದೆ. ಇದನ್ನು ಅತಿಯಾಗಿ ಸೇವಿಸಿದರೆ, ಅದರ ಕ್ಯಾಲೋರಿ ಮತ್ತು ಕೊಬ್ಬಿನ ಅಂಶವು ತೂಕ ಹೆಚ್ಚಾಗಲು ಕಾರಣವಾಗಬಹುದು, ಇದು ಪರೋಕ್ಷವಾಗಿ ಕೊಲೆಸ್ಟ್ರಾಲ್ ಮಟ್ಟದ ಮೇಲೆ ಪರಿಣಾಮ ಬೀರುತ್ತದೆ.

**ಮಿತವಾಗಿ ಸೇವಿಸುವುದು ಮುಖ್ಯ**

ಪನೀರ್ ಅನ್ನು ಮಿತವಾಗಿ ತಿನ್ನುವುದರಿಂದ ಕೊಲೆಸ್ಟ್ರಾಲ್ ಮಟ್ಟಗಳು ಹೆಚ್ಚಾಗುವುದಿಲ್ಲ. ಮಿತ ಪ್ರಮಾಣದಲ್ಲಿ ಸೇವಿಸಿದಾಗ, ಇದು ಆರೋಗ್ಯಕರ ಪ್ರೋಟೀನ್ ಮೂಲವಾಗಬಹುದು. ಕಡಿಮೆ ಕೊಬ್ಬಿನ ಹಾಲಿನಿಂದ ತಯಾರಿಸಿದ ಪನೀರ್ ಅನ್ನು ಆಯ್ಕೆ ಮಾಡಿ ಮತ್ತು ಅದನ್ನು ತರಕಾರಿಗಳು ಅಥವಾ ಧಾನ್ಯಗಳೊಂದಿಗೆ ಜೋಡಿಸುವುದರಿಂದ ಅದರ ನಕಾರಾತ್ಮಕ ಪರಿಣಾಮವನ್ನು ಕಡಿಮೆ ಮಾಡಬಹುದು.

---



# ರಾಮಾಯಣ

## ಶ್ರೀರಾಮನಿಗೂ ಖರನಿಗೂ ಯುದ್ಧವಾದದ್ದು

• ಹಿಂದಿನ ಸಂಚಿಕೆಯಿಂದ

120 ನೆಯ ಅಧ್ಯಾಯ

ಆಮೇಲೆ ಖರನು ಶ್ರೀರಾಮನ ಬಾಣಗಳಿಂದ ರಣರಂಗದಲ್ಲಿ ಗಾಯಪಡೆದು ಬಿದ್ದ ದೂಷಣ ತ್ರಿಶಿರರನ್ನೂ ಮಹಾಬಲಪರಾಕ್ರಮವುಳ್ಳ ಸೇನೆಯನ್ನೂ ಕಂಡನು. ಮನುಷ್ಯ ಮಾತ್ರನಾದ ಶ್ರೀರಾಮನೊಬ್ಬನಿಂದ ಸಮಸ್ತ ರಾಕ್ಷಸಬಲವೂ ಹತವಾಯಿತೆಂದು ಮನಸ್ಸಿನಲ್ಲಿ ಕ್ಲೇಶಪಟ್ಟುಕೊಂಡನು. ಅನಂತರ ಬಾಣಗಳಿಂದ ನಾನಾದಿಕ್ಕುಗಳನ್ನೂ ಅಂತರಿಕ್ಷಮಾರ್ಗವನ್ನೂ ತುಂಬಿದನು. ಶ್ರೀರಾಮನು ತನ್ನ ಮಹತ್ತಾದ ಬಿಲ್ಲಿನಲ್ಲಿ ಕಿಡಿಯನ್ನು ಗುಳುತ್ತಿದ್ದ ಅಂಬುಗಳನ್ನು ಹೂಡಿ ವರುಣನು ಮಳೆಧಾರೆಗಳಿಂದ ಭೂಮಿಯನ್ನು ಕೊರೆದು ಹಳ್ಳಮಾಡುವಂತೆ ಖರನ ಶರೀರವನ್ನು ಅಧಿಕವಾಗಿ ಗಾಯಪಡಿಸಿದನು. ಆ ಸಮಯದಲ್ಲಿ ಅವರ ಬಾಣಗಳಿಂದ ಅಂತರಿಕ್ಷಮಾರ್ಗವು ಇಟ್ಟಣಿಸಲ್ಪಟ್ಟು ಎಡೆಬಿಡದೆ ಕತ್ತಲೆಯಾಗಿರಲು ಸೂರ್ಯನು ಕಾಣಿಸದಿದ್ದನು. ಆ ಬಳಿಕ ಶ್ರೀರಾಮನು ಅಂಕುಶದ ಹೊಯ್ದುಗಳಿಂದ ಮದ್ದಾನೆಯನ್ನು ಕಂಗೆಡಿಸುವಂತೆ ತನ್ನ ಬಾಣಗಳಿಂದ ರಥದಮೇಲಿದ್ದ ಖರನನ್ನು ಕಂಗೆಡಿಸುತ್ತಿದ್ದನು. ಅಂತರಿಕ್ಷಮಾರ್ಗದಲ್ಲಿ ನೋಡುತ್ತಿದ್ದ ದೇವತೆಗಳು ಮಹಾಬಲಪರಾಕ್ರಮಿಯಾದ ಖರನನ್ನೂ ಆತನ ಸೇನೆಯನ್ನೂ ಘಾಸಿಪಡಿಸಿದ ಶ್ರೀರಾಮನನ್ನು ನೋಡಿ ಸಂತೋಷಪಡುತ್ತಿದ್ದರು. ಖರನು ಸಿಂಹದ ರೀತಿಯಲ್ಲಿ ಪರಾಕ್ರಮವುಳ್ಳವನಾಗಿ ಸಿಂಹಗಮನದಿಂದ ನೆಗೆದು ಶ್ರೀರಾಮನನ್ನು ನೋಡಿ ಆತನು ಸತ್ತ್ವಗುಂದಿದನೆಂದೆಣಿಸಿದನು. ಆದರೆ ಶ್ರೀರಾಮನು ಹುಲುಮೃಗವನ್ನು ಕಂಡ ಸಿಂಹರಾಜನಂತೆ ಖರನನ್ನು ಗಣನೆ ಮಾಡದಿದ್ದನು. ಆಮೇಲೆ ಸೂರ್ಯಪ್ರಭೆಯ ರೀತಿಯಲ್ಲಿ ಕಾಂತಿ ಯುಕ್ತವಾದ ರಥದ ಮೇಲಿದ್ದ ಖರನ್ನು ಅಗ್ನಿಯ ಮೇಲೆ ಪತಂಗದ ಹುಳುಗಳು ಎರಗುವಂತೆ ತನ್ನ ಬಿಲ್ಲಿನಲ್ಲಿ ಅನೇಕ ಬಾಣಗಳನ್ನು ಹೂಡಿ ಶ್ರೀರಾಮನ ಕೈಯಲ್ಲಿದ್ದ ಜಿಲ್ಲುಬಾಣಗಳನ್ನು ಕತ್ತರಿಸಿ ತನ್ನ ಹಸ್ತವೇಗವನ್ನು ತೋರಿಸಿದನು. ಸಿಡಿಲಿಗೆ ಸಮಾನವಾದ ಒಳು ಬಾಣಗಳಿಂದ ಶ್ರೀರಾಮನನ್ನು ಗಾಯಗೊಳಿಸಿ ಒಂದು ಸಾವಿರ ಬಾಣಗಳಿಂದ ಆತನನ್ನು ಕಂಗೆಡಿಸಿ ರಣಭೂಮಿಯಲ್ಲಿ ದೊಬ್ಬಿಟ್ಟನು, ಕೆಲವು ಬಾಣಗಳಿಂದ ಶ್ರೀರಾಮನ ಕವಚವನ್ನು ಹರಿದು ಕೆಡಹಿದನು. ಸರ್ವಾಂಗಗಳೂ ಖರನ ಬಾಣಗಳಿಂದ ಗಾಯಪಡೆಯಲು ಶ್ರೀರಾಮನು ಹೊಗೆಯಿಲ್ಲದ ಯಜ್ಞಪುರುಷನಂತೆ ಒಪ್ಪತ್ತ ಸಮಸ್ತ ಶತ್ರುಗಳನ್ನೂ ಸಂಹಾರಮಾಡಿದನು. ಅಗಸ್ತ್ಯಮುನೀಶ್ವರನು ಕೊಟ್ಟ ವಿಮ್ಮ ದೇವತಾಕವಾದ ಧನುಸ್ಸನ್ನು ತೆಗೆದುಕೊಂಡು ಗಂಭೀರಧ್ವನಿಯಿಂದ ಅರ್ಭಟಿಸುತ್ತ ಬಿಲ್ಲಿಗೆ ಹೆದೆಯನ್ನೇರಿಸಿ ಬಾಣಗಳಿಂದ ಖರನ ರಥದಲ್ಲಿದ್ದ ಧ್ವಜದಂಡವನ್ನು ಕತ್ತರಿಸಿದನಾ. ಆ ದಂಡವು ಭೂಲೋಕಕ್ಕೆ ಬಂದ ಸೂರ್ಯಮಂಡಲದಂತೆ ಭೂಮಿಯಲ್ಲಿ ಬಿದ್ದಿತು.

ಮುಂದುವರಿಯುವುದು...

---

# ಸುಧಾರೆಡ್ಡಿ ಫೌಂಡೇಶನ್‌ನಿಂದ ಸ್ತನ ಕ್ಯಾನ್ಸರ್ ಜಾಗೃತಿಗಾಗಿ ಓಟ

## ಜಾಗತಿಕ ವಿಶ್ವ ಸುಂದರಿಯರ ನೇತೃತ್ವ; 20 ಸಾವಿರಕ್ಕೂ ಅಧಿಕ ಮಂದಿ ಪಾಲ್ಗೊಂಡಿದ್ದ ಹೃದಯಸ್ಪರ್ಶಿ ಸಮಾರಂಭ

• ಉದಯವಾಹಿನಿ, ಬೆಂಗಳೂರು

ಮಹಿಳೆಯರಲ್ಲಿ ಕಂಡು ಬರುವ ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಸುಧಾರೆಡ್ಡಿ ಫೌಂಡೇಶನ್ ತನ್ನ ಪ್ರಯತ್ನಗಳನ್ನು ಮುಂದುವರೆಸಿದ್ದು, ಈ ನಿಟ್ಟಿನಲ್ಲಿ ಭಾನುವಾರ ಹೈದರಾಬಾದ್‌ನಲ್ಲಿ ಆಯೋಜಿಸಿದ್ದ ಪಿಂಕ್ ಪವರ್ ರನ್ 2.0 ಭರ್ಜರಿ ಯಶಸ್ಸು ಕಂಡಿತು.

ಹೃದಯ ಸ್ಪರ್ಶಿ ಮತ್ತು ಸದ್ಭಾವನೆಯೊಂದಿಗೆ, ಸುಧಾ ರೆಡ್ಡಿ ಫೌಂಡೇಶನ್ ಆಯೋಜಿಸಿದ ಪಿಂಕ್ ಪವರ್ ರನ್ 2.0 ಇಲ್ಲಿನ ನೆಕ್ಲೇಸ್ ರಸ್ತೆಯಲ್ಲಿ ಬೆಳಗಿನ ಜಾವ ಆರಂಭವಾಯಿತು ಮತ್ತು ಈ ಓಟದಲ್ಲಿ ಸುಮಾರು 20,000 ಮಂದಿ ಉತ್ಸಾಹದಿಂದ ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಮಿಸ್ ವರ್ಲ್ಡ್ ಸಂಸ್ಥೆಯ ಅಧ್ಯಕ್ಷೆ ಜೂಲಿಯಾ ಮಾರ್ಲೆ, ಟೆನಿಸ್ ಪಟು ಲಿಯಾಂಡರ್ ಪೇಸ್, ದೇಶದ ಪ್ರಮುಖ ಮೂಲಭೂತ ಸೌಕರ್ಯ ಸಂಸ್ಥೆ ಎಂ.ಇ.ಐ.ಎಲ್‌ನ ಕಾರ್ಯಕಾರಿ ನಿರ್ದೇಶಕ ಕೃಷ್ಣಾರೆಡ್ಡಿ, ಮಿಸ್ ವರ್ಲ್ಡ್ ಸುಚಾತಾ ಚಂಗುಸ್ರಿ ಸೇರಿದಂತೆ ಗಣ್ಯರು ಪಾಲ್ಗೊಂಡಿದ್ದರು. ಮಿಸ್ ವರ್ಲ್ಡ್ ಕರೀಬಿಯನ್, ಮಿಸ್ ನಮೀಬಿಯಾ, ಮಿಸ್ ವರ್ಲ್ಡ್ ಓಶಿಯಾನಿಯಾ, ಮಿಸ್ ವರ್ಲ್ಡ್ ಅಮೆರಿಕಾಸ್, ಮಿಸ್ ವರ್ಲ್ಡ್ ಯೂರೋಪ್, ಮಿಸ್ ವರ್ಲ್ಡ್ ಏಷ್ಯಾ, ದೇಶೀಯವಾಗಿ ಮಿಸ್ ಇಂಡಿಯಾ ವರ್ಲ್ಡ್ ನಂದಿನಿ ಗುಪ್ತಾ ಮತ್ತು ನಿಖಿತಾ ಪೋರ್ವಾಲ್ ಜಾಗೃತಿ ರನ್‌ನಲ್ಲಿ ಪಾಲ್ಗೊಂಡಿದ್ದರು. ನಮ್ಮೆಲ್ಲರ ಒಗ್ಗೂಡಿದ





ಪ್ರಯತ್ನಗಳು ಸ್ತನ ಕ್ಯಾನ್ಸರ್ ಜಾಗೃತಿಗೆ ಶಕ್ತಿಶಾಲಿ ವ್ಯವಸ್ಥೆ ಹುಟ್ಟುಹಾಕಬಹುದು ಮತ್ತು ಪ್ರತಿ ವ್ಯಕ್ತಿಗೆ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ಇಂತಹ ಅಭಿಯಾನಗಳು ಅಗತ್ಯ. ಸ್ತನ ಕ್ಯಾನ್ಸರ್ ಭಾರತೀಯ ಮಹಿಳೆಯರಲ್ಲಿ ಅತ್ಯಂತ ಸಾಮಾನ್ಯವಾಗಿದೆ, ಮುಂಚಿತ ಪತ್ತೆ ಅನೇಕ ಪ್ರಾಣಗಳನ್ನು ಉಳಿಸಬಹುದು. ಪಿಂಕ್ ಪವರ್ ರನ್ ಆರೋಗ್ಯ ತಪಾಸಣೆ, ಸ್ವಪರಿಶೀಲನೆ ಹಾಗೂ ಜಾಗೃತಿ ಮೂಡಿಸುತ್ತಿರುವುದು ಸಂತಸ ತಂದಿದೆ'' ಎಂದು ಮಿಸ್ ವರ್ಲ್ಡ್ ಸಂಸ್ಥೆ ಅಧ್ಯಕ್ಷೆ ಜೂಲಿಯಾ ಮಾರ್ಲೆ ನುಡಿದರು. ಆರೋಗ್ಯದ ಕಾಳಜಿ, ಜಾಗೃತಿಯ ಹಿನ್ನೆಲೆಯಲ್ಲಿ ನಾನು ಪಿಂಕ್ ಪವರ್ ರನ್‌ಗೆ ಬೆಂಬಲ ನೀಡುವುದು ಗೌರವ. ಇದು ಕೇವಲ ದೈಹಿಕ ಫಿಟ್ನೆಸ್ ಆಗಿದ್ದರೆ ಸಾಲದು; ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಿ, ರೋಗದ ಮುಂಚಿತ ಪತ್ತೆಗೆ ಪ್ರೋತ್ಸಾಹ ನೀಡುವುದು ಮಹತ್ವದ ಹೆಜ್ಜೆಯಾಗಿದೆ'' ಎಂದು ಲಿಯಾಂಡರ್ ಪೇಸ್ ನುಡಿದರು.

ಈ ಯೋಜನೆ ಸ್ತನ ಕ್ಯಾನ್ಸರ್ ವಿರುದ್ಧ ಹೋರಾಟದಲ್ಲಿ ಹೊಸ ಆಶಯವಾಗಿದೆ ಎಂದ ಸುಧಾ ರೆಡ್ಡಿ ಫೌಂಡೇಶನ್ ಅಧ್ಯಕ್ಷೆ ಸುಧಾ ರೆಡ್ಡಿ, ಪಿಂಕ್ ಪವರ್ ರನ್ - ಯಾವುದೇ ಮಿತಿ / ಗಡಿ ಇಲ್ಲದ' ಜಾಗತಿಕವಾಗಿ ವಿಸ್ತಾರಗೊಳ್ಳುತ್ತಿದೆ. ಪಿಂಕ್ ಪವರ್ ರನ್ ಜಾಗೃತಿ ಹೆಚ್ಚಿಸಲು, ಸಮುದಾಯ ಚಟುವಟಿಕೆ ಹೆಚ್ಚಿಸಲು ಹಾಗೂ ಮುಂಚಿತ ಪತ್ತೆಯ ಪ್ರಾಮುಖ್ಯತೆಯನ್ನು ಒತ್ತಿ ಹೇಳಲು ವೇದಿಕೆಯಾಗಿದೆ ಎಂದರು. ತಮಗೆ ಪಿಂಕ್ ಪವರ್ ರನ್ 2.0 ಅತ್ಯಂತ ವೈಯಕ್ತಿಕ. ಸ್ಥನ ಕ್ಯಾನ್ಸರ್ ಮುಕ್ತ, ಮುಂಚಿತ ಪತ್ತೆಯನ್ನು ಜೋರಾಗಿ ಒತ್ತಿ ಹೇಳುವುದೇ ನಮ್ಮ ಪ್ರಬಲ ಉದ್ದೇಶವಾಗಿದೆ ಮತ್ತು ಸಮುದಾಯವನ್ನು ಏಕಗೂಡಿಸಿ ಸ್ತನ ಕ್ಯಾನ್ಸರ್ ವಿರುದ್ಧ ಹೋರಾಟಕ್ಕೆ ಶಕ್ತಿ ತುಂಬುವುದೇ ಆಗಿದೆ ಎಂದು ಸುಧಾರೆಡ್ಡಿ ಅವರು ಒತ್ತಿ ಹೇಳಿದರು.

### ವಿಜೇತರಿಗೆ ಬಹುಮಾನ ವಿತರಣೆ

**10 ಕಿ.ಮೀ, 5 ಕಿ.ಮೀ ಮತ್ತು 3 ಕಿ.ಮೀ ಓಟ ವಿಜೇತರಿಗೆ ಭರ್ಜರಿ ಬಹು ಮಾನಗಳೊಂದಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. 10 ಕಿ.ಮೀ ಓಟಕ್ಕೆ ರೂ.3.5 ಲಕ್ಷ, ರೂ.2.5 ಲಕ್ಷ ಮತ್ತು ರೂ.1.5 ಲಕ್ಷ ನೀಡಲಾಯಿತು. 5 ಇಟ ಓಟಕ್ಕೆ ರೂ.2 ಲಕ್ಷ, ರೂ.1.5 ಲಕ್ಷ ಮತ್ತು ರೂ.1 ಲಕ್ಷ ನೀಡಲಾಯಿತು. ಜೂಲಿಯಾ ಮಾರ್ಲೆ ಅವರಿಗೆ ''ಎಕ್ಸಲೆನ್ಸ್ ಇನ್ ಮೆಂಟರ್‌ಷಿಪ್-2025'' ಪ್ರಶಸ್ತಿ ನೀಡಿ ಗೌರವಿಸಲಾಯಿತು. 10ಕೆ ವಿಭಾಗದಲ್ಲಿ, ಪುರುಷ ಹಾಗೂ ಮಹಿಳಾ ಭಾಗದಲ್ಲಿ ಸಾಧಾರಣ ಪ್ರದರ್ಶನಗಳು ಕಂಡುಬಂದವು. ಪುರುಷರ ವಿಭಾಗದಲ್ಲಿ ಅಂಕಿತ್ ಗುಪ್ತಾ (30:52), ಕಮಲಾಕರ್ ದೇಶಮುಖ್ (31:01), ಶುಭಂ ಸಿಂಧು (31:31) ಅಗಿರಿಸಿದರೆ, ಮಹಿಳಾ ವಿಭಾಗದಲ್ಲಿ ಸೀಮಾ ಸೀಮಾ (34:44), ಭಾರತೀ ನೈನ್ (35:46), ಸೋನಿಕಾ ಸೋನಿಕಾ (36:40) ಮೊದಲ ಮೂರು ಸ್ಥಾನ ಪಡೆದುಕೊಂಡರು. 5ಕೆ ವಿಭಾಗದಲ್ಲಿ, ಪುರುಷರ ವಿಭಾಗದಲ್ಲಿ ಹರ್ಮಂಜೋತ್ ಸಿಂಗ್ (14:25), ಸುನಿಲ್ ಕುಮಾರ್ (14:31), ಸಚಿನ್ ಯಾದವ್ (14:35) ಮೊದಲ ಮೂರು ಸ್ಥಾನ ಪಡೆದರು. ಮಹಿಳಾ ವಿಭಾಗದಲ್ಲಿ ಅಂಕಿತಾ ಅಂಕಿತಾ (16:52), ನೀತಾ ರಾಣಿ (17:18), ಅಂಕಿತಾ ಗವಿತ್ (17:31) ಯವರು ಕ್ರಮವಾಗಿ ಮೊತ್ತ ಮೊದಲ ಮೂರು ಸ್ಥಾನ ಪಡೆದರು.**

# ಕರೂರು ಕಾಲ್ತುಳಿತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ತಲಾ 20 ಲಕ್ಷ ರೂ. ಪರಿಹಾರ ಘೋಷಿಸಿದ ವಿಜಯ್

**ಕರೂರು:** ತಮಿಳುನಾಡಿನ ಕರೂರಿನಲ್ಲಿ ಸೆ. 27ರಂದು ಆಯೋಜಿಸಲಾಗಿದ್ದ ಸಿನಿಮಾ ನಟ ವಿಜಯ್ ಅವರ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಬಹಿರಂಗ ಪ್ರಚಾರದ ವೇಳೆ ಸಂಭವಿಸಿದ ಕಾಲ್ತುಳಿತದಲ್ಲಿ ಸಾವಿಗೀಡಾದ 39 ಮಂದಿಗೆ ನಗದು ಪರಿಹಾರವನ್ನು ಟಿವಿಕೆ ಪಕ್ಷ ಘೋಷಿಸಿದೆ. ಈ ಕುರಿತಂತೆ ವಿಜಯ್ ಅವರೇ ಅಧಿಕೃತ ಘೋಷಣೆಯನ್ನು ಮಾಡಿದ್ದು ದುರ್ಘಟನೆಯಲ್ಲಿ ಮೃತಪಟ್ಟಿರುವ 39 ಮಂದಿಯ ಕುಟುಂಬಕ್ಕೆ ತಲಾ 20 ಲಕ್ಷ ರೂ. ಹಾಗೂ ಗಾಯಗೊಂಡಿರುವವರಿಗೆ ತಲಾ 2 ಲಕ್ಷ ರೂ. ನೀಡುವುದಾಗಿ ಪ್ರಕಟಿಸಿದ್ದಾರೆ. ಘಟನೆ ನಡೆದ ಬೆನ್ನಿಗೇ ಟ್ವೀಟ್ ಮಾಡಿದ್ದ ಅವರು, ಕಾಲ್ತುಳಿತ ಘಟನೆಯಿಂದ ನಾನು ದುಃಖಿತನಾಗಿದ್ದೇನೆ. ನನ್ನನ್ನು ನೋಡಲು ಬಂದಿದ್ದ ನನ್ನ ಅಪ್ಪಟ ಅಭಿಮಾನಿಗಳು ಕಾಲ್ತುಳಿತಕ್ಕೆ ಒಳಗಾಗಿದ್ದು ನಿಜಕ್ಕೂ ದುರ್ದೈವದ ಸಂಗತಿ. ಅವರ ಅಗಲಿಕೆಯ ದುಃಖ ಅವರ ಕುಟುಂಬಕ್ಕೆ ಭರಿಸಲಾಗದ್ದು. ಅವರ ನೋವು ನನಗೆ ಅರ್ಥವಾಗುತ್ತೆ. ಇಂಥ



ಸಂದರ್ಭದಲ್ಲಿ ನಾನು ನನ್ನ ಅಭಿಮಾನಿಗಳ ಕುಟುಂಬದೊಂದಿಗೆ ಇರುವುದು ನನ್ನ ಆದ್ಯ ಕರ್ತವ್ಯ ಎಂದು ಹೇಳಿದ್ದಾರೆ. ಅಲ್ಲದೆ, ಕಾಲ್ತುಳಿತದಲ್ಲಿ ಗಾಯಗೊಂಡಿರುವ 50ಕ್ಕೂ ಹೆಚ್ಚು ಮಂದಿಯು ಬೇಗನೇ ಗುಣಮುಖರಾಗಲಿ ಎಂದು ಹಾರೈಸುತ್ತೇನೆ. ಸದ್ಯಕ್ಕೆ ಅವರಿಗೆ 2 ಲಕ್ಷ ರೂ.ಗಳ ನಗದು ಪರಿಹಾರವನ್ನು ಘೋಷಿಸಲಾಗಿದ್ದು, ಅವರ ಎಲ್ಲಾ ವೈದ್ಯ ಚಿಕಿತ್ಸಾ ವೆಚ್ಚವನ್ನು ನಮ್ಮ ಪಕ್ಷವೇ ಭರಿಸಲಿದೆ ಎಂದು ಹೇಳಿದ್ದಾರೆ.

**ಗೂಗಲ್ ಟ್ರೆಂಡ್ಸ್ ಹೇಗಿತ್ತು?**

**ಕರೂರು ದುರ್ಘಟನೆ ಸುದ್ದಿ ಹರಡುತ್ತಿದ್ದಂತೆ ಗೂಗಲ್ ಬಳಕೆದಾರರು ಅದರ ಬಗ್ಗೆ ತಿಳಿಯಲು ತೀವ್ರ ಕುತೂಹಲ ತೋರಿದರು. ಗೂಗಲ್ ಸರ್ಚ್ ಪೇಜ್ ನಲ್ಲಿ ಈ ದುರ್ಘಟನೆಯ ಬಗ್ಗೆ ಹೆಚ್ಚೆಚ್ಚು ಹುಡುಕಾಟ ನಡೆಸಿದರು. ಪುದುಚ್ಚೇರಿಯ ಶೇ. 100ಕ್ಕಿಂತಲೂ ಹೆಚ್ಚು ಗೂಗಲ್ ಬಳಕೆದಾರರು ಈ ಘಟನೆಯ ಕುರಿತಾದ ಮಾಹಿತಿಗಳಿಗಾಗಿ ಹುಡುಕಾಟ ನಡೆಸಿದ್ದಾರೆ. ಅದು ಬಿಟ್ಟರೆ, ತಮಿಳುನಾಡಿನ ಶೇ. 99, ಕರ್ನಾಟಕದಕ ಶೇ. 32, ಕೇರಳದ ಶೇ. 18 ಮಣಿಪುರದ ಶೇ. 12ರಷ್ಟು ಮಂದಿ ಈ ಘಟನೆ ಬಗ್ಗೆ ಹೆಚ್ಚಿನ ಮಾಹಿತಿ ತಿಳಿಯಲು ಗೂಗಲ್ ಮೊರೆ ಹೋಗಿದ್ದಾರೆ.**

**ಹೈಕೋರ್ಟ್ ಮೆಟ್ಟಿಲೇರಿದ ಟಿವಿಕೆ ಪಕ್ಷ:** ಸೆ. 27ರಂದು ಕರೂರಿನಲ್ಲಿ ಸಂಭವಿಸಿರುವ ಕಾಲ್ತುಳಿತದ ವಿಡಿಯೋ ದೃಶ್ಯಾವಳಿಗಳಲ್ಲಿ ವಿಜಯ್ ಅವರು ಸಮಾರಂಭಕ್ಕೆ ಆಗಮಿಸುತ್ತಲೇ ಕಾಲ್ತುಳಿತ ಸಂಭವಿಸಿರುವುದು ಕಂಡುಬಂದಿದೆ. ವಿಜಯ್ ಅವರು ಬಹಿರಂಗ ಸಭೆಗೆ ಬರುತ್ತಲೇ ಜನಗಳ ಮಧ್ಯದಲ್ಲಿದ್ದ ಕೆಲವರು ಪೊಲೀಸರ ಕಡೆಗೆ ಕಲ್ಲು ತೂರಾಟ ನಡೆಸಿರುವುದು ಕಂಡುಬಂದಿದ್ದು ಇಡೀ ಕಾಲ್ತುಳಿತ ಪ್ರಕರಣ ಷಡ್ಯಂತ್ರವೇ ಎಂಬ ಅನುಮಾನ ಬರುತ್ತಿದೆ ಎಂದು ವಿಜಯ್ ಅವರ ಟಿವಿಕೆ ಪಕ್ಷ ಆರೋಪಿಸಿದೆ. ಕೂಡಲೇ ಮದ್ರಾಸ್ ಹೈಕೋರ್ಟ್ ಮೊರೆ ಹೋಗಿರುವ ಟಿವಿಕೆ, ಸಂಭಾವ್ಯ ಷಡ್ಯಂತ್ರದ ಬಗ್ಗೆ ಹೈಕೋರ್ಟ್ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡು ತನಿಖೆಗೆ ಆದೇಶಿಸಬೇಕು ಎಂದು ಅವರು ಹೇಳಿದ್ದಾರೆ.

## ಹೊಸ ವಾಣಿಜ್ಯ ವ್ಯವಸ್ಥೆ ಜಾಗತಿಕ ಕಾರ್ಯಪಡೆಯ ಅಗತ್ಯವಿದೆ: ಜೈಶಂಕರ್

**ನ್ಯೂಯಾರ್ಕ್:** ಜಗತ್ತಿಗೆ ಜಾಗತಿಕ ಕಾರ್ಯಪಡೆಯ ಅಗತ್ಯವಿದೆ ಮತ್ತು ಅನಿಶ್ಚಿತತೆಯ ನಡುವೆಯೂ ಹೊಸ ವಾಣಿಜ್ಯ ವ್ಯವಸ್ಥೆಯು ಜಾರಿಗೆ ಬರಲಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಹೇಳಿದರು. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧಿವೇಶನದ ನಡುವೆ 'ಅಬ್ಸರ್‌ವರ್ ರಿಸರ್ಚ್ ಫೌಂಡೇಶನ್ (ಒಆರ್ ಎಫ್) ಸಭೆಯಲ್ಲಿ ಮಾತನಾಡಿದ ಅವರು, 'ಅನಿಶ್ಚಿತತೆ ಮಧ್ಯೆಯೂ ವಾಣಿಜ್ಯ ವ್ಯಾಪಾರವು ತನ್ನ ಮಾರ್ಗವನ್ನು ತಾನೇ ಹುಡುಕಿಕೊಂಡು ಸಾಗುತ್ತದೆ' ಎಂದು ಆಶಾವಾದ ವ್ಯಕ್ತಪಡಿಸಿದರು. ಭಾರತವು ವ್ಯಾಪಾರ ಮತ್ತು ಪಾಲುದಾರಿಕೆಯನ್ನು ವಿಸ್ತರಿಸುವ ಉದ್ದೇಶದೊಂದಿಗೆ ಲ್ಯಾಟಿನ್ ಅಮೆರಿಕ ಮತ್ತು ಕೆರೀಬಿಯಾದೊಂದಿಗೆ ವ್ಯಾಪಾರದಲ್ಲಿ ತೊಡಗಿದೆ ಎಂದು ತಿಳಿಸಿದರು. ದೊಡ್ಡ ರಾಷ್ಟ್ರಗಳು 'ಕೋಭೆಯ ವಾತಾವರಣ'ವನ್ನು ಎದುರಿಸುತ್ತಿದ್ದು, ಈ ಸಂದರ್ಭದಲ್ಲಿ ಸ್ವಾವಲಂಬಿಯಾಗಲು ಸಾಮರ್ಥ್ಯ ವೃದ್ಧಿ ಅವಶ್ಯಕ ಎಂದು ಹೇಳಿದರು.

**ಹಲವು ನಾಯಕರೊಂದಿಗೆ ದ್ವಿಪಕ್ಷೀಯ ಚರ್ಚೆ:** ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧಿವೇಶನದ ಮಧ್ಯೆಯೇ ಎಸ್.ಜೈಶಂಕರ್ ಅವರು ಸರಣಿ ಉನ್ನತ ಮಟ್ಟದ ದ್ವಿಪಕ್ಷೀಯ ಸಭೆ ನಡೆಸಿದರು. ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಅವರನ್ನು ಭೇಟಿಯಾಗಿ ಭೌಗೋಳಿಕ ರಾಜಕೀಯ ಬೆಳವಣಿಗೆ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಚರ್ಚೆ ನಡೆಸಿದರು. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧ್ಯಕ್ಷೆ ಅನ್ನಾಲೆನಾ ಬೇರ್ಬಾಕ್ ಅವರೊಂದಿಗೂ ಮಾತುಕತೆ ನಡೆಸಿದರು. ಸೌದಿ ಅರೇಬಿಯಾ ಮತ್ತು ಅಲ್ಜೇರಿಯಾದ ವಿದೇಶಾಂಗ ಸಚಿವರಾದ ಫೈಸಲ್ ಬಿನ್ ಫರ್ಹಾನ್ ಮತ್ತು ಅಹ್ಮದ್ ಅಲ್ತಾಫ್ ಅವರೊಂದಿಗೂ ಪ್ರತ್ಯೇಕವಾಗಿ ಸಂವಾದ ನಡೆಸಿದರು.

**ಭಯೋತ್ಪಾದನೆಗೆ ಕುಮ್ಮಕ್ಕು: ಒಪ್ಪಿಕೊಂಡ ಪಾಕ್:** ಸಾಮಾನ್ಯಸಭೆಯ ಅಧಿವೇಶನದಲ್ಲಿ ಭಯೋತ್ಪಾದನೆ ವಿರುದ್ಧ ಮಾತನಾಡಿದ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಪಾಕಿಸ್ತಾನಕ್ಕೆ ಭಾರತ ತಿರುಗೇಟು ನೀಡಿದೆ. ಜೈಶಂಕರ್ ಅವರು ಪಾಕಿಸ್ತಾನದ ಹೆಸರನ್ನು ಪ್ರಸ್ತಾಪಿಸಿರಲಿಲ್ಲ. ಆದರೂ ಅವರ ಹೇಳಿಕೆಗೆ ಪ್ರತಿಕ್ರಿಯಿಸುವ ಮೂಲಕ ಪಾಕಿಸ್ತಾನವು ಗಡಿ ಭಯೋತ್ಪಾದನೆಗೆ ಕುಮ್ಮಕ್ಕು ನೀಡುತ್ತಿರುವುದನ್ನು ಒಪ್ಪಿಕೊಂಡಿದೆ' ಎಂದು ಹೇಳಿದೆ. 'ಪ್ರಮುಖ ಅಂತರರಾಷ್ಟ್ರೀಯ ಭಯೋತ್ಪಾದಕ ಕೃತ್ಯಗಳ ಹಿಂದೆ ಇರುವುದು ಒಂದೇ ದೇಶ. ಅದು ಭಯೋತ್ಪಾದನೆಯ ಕೇಂದ್ರ ಬಿಂದು' ಎಂದು ಜೈಶಂಕರ್ ಅವರು ಶನಿವಾರ ಹೇಳಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ಪಾಕಿಸ್ತಾನದ ಪ್ರತಿನಿಧಿಯೊಬ್ಬರು 'ಭಾರತವು ದೇಶದ ವಿರುದ್ಧ ಅಪಪ್ರಚಾರ ಮಾಡುತ್ತಿದೆ' ಎಂದು ಆರೋಪಿಸಿದ್ದರು.

# ಭೈರಪ್ಪ ಅವರ ಜೊತೆ ನನಗೆ ಅಪಾರ ಒಡನಾಟ

## ಸಾಹಿತಿ ಎಸ್.ಎಲ್. ಭೈರಪ್ಪ ಅವರ ಸಾಹಿತ್ಯ ಕೊಡುಗೆ ಸ್ಮರಿಸಿದ ಪ್ರಧಾನಿ ಮೋದಿ

**ನವದೆಹಲಿ:** ಇತ್ತೀಚೆಗೆ ನಿಧನರಾದ ಕರ್ನಾಟಕದ ಖ್ಯಾತ ಸಾಹಿತಿ ಎಲ್.ಎಲ್ ಭೈರಪ್ಪ ಅವರ ಕೊಡುಗೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಮಾಸಿಕ ಮನ್ ಕೀ ಬಾತ್ ಕಾರ್ಯಕ್ರಮದಲ್ಲಿ ಸ್ಮರಿಸಿದ್ದಾರೆ. ಸಾಹಿತ್ಯ ಕ್ಷೇತ್ರಕ್ಕೆ ಡಾ. ಎಸ್. ಎಲ್. ಭೈರಪ್ಪ ಅವರ ಕೊಡುಗೆ ಅಪಾರ. ನಾವಿಂದು ಅವರನ್ನು ಕಳೆದುಕೊಂಡಿದ್ದೇವೆ. ಅವರ ಜೊತೆ ನನಗೆ ಅಪಾರ ಒಡನಾಟವಿತ್ತು. ಕೆಲವು ವಿಷಯಗಳ ಕುರಿತು ನಾನು ಅವರೊಂದಿಗೆ ಚರ್ಚೆ ನಡೆಸಿದ್ದೆ. ಈ ಕಾರ್ಯಕ್ರಮದ ಮೂಲಕ ಅವರ ಆತ್ಮಕ್ಕೆ ಶಾಂತಿ ಕೋರುತ್ತೇನೆ ಎಂದು ತಮ್ಮ ಮನ್ ಕೀ ಬಾತ್ ಕಾರ್ಯಕ್ರಮದಲ್ಲಿ ಪದ್ಮಭೂಷಣ ಪುರಸ್ಕೃತ ಡಾ. ಎಸ್. ಎಲ್. ಭೈರಪ್ಪ ಅವರ ಕೊಡುಗೆ, ಸಾಧನೆಗಳನ್ನು ಸ್ಮರಿಸಿದ್ದಾರೆ.

**ಎಸ್.ಎಲ್ ಭೈರಪ್ಪ ಅವರ ಬಗ್ಗೆ ಮೋದಿ ಹೇಳಿದ್ದೇನು?** 'ಮನ್ ಕಿ ಬಾತ್' ಮಾಸಿಕ ರೇಡಿಯೋ ಕಾರ್ಯಕ್ರಮದ 126ನೇ ಆವೃತ್ತಿಯಲ್ಲಿ ಮಾತನಾಡಿದ ಮೋದಿ, ಮಿತ್ರರೇ, ಕೆಲ ದಿನಗಳ ಹಿಂದೆ ನಮ್ಮ ದೇಶವು ಮಹಾನ್ ವಿಚಾರವಾದಿ, ಚಿಂತಕ ಶ್ರೀ ಎಸ್.ಎಲ್. ಭೈರಪ್ಪ ಅವರನ್ನು ಕಳೆದುಕೊಂಡಿದೆ. ಭೈರಪ್ಪ ಅವರೊಂದಿಗೆ ನನಗೆ ವೈಯಕ್ತಿಕ ಸಂಪರ್ಕವೂ ಇದೆ. ನಮ್ಮಿಬ್ಬರ ಮಧ್ಯೆ ಹಲವು ವಿಷಯಗಳ ಬಗ್ಗೆ, ವಿಚಾರಗಳ ಬಗ್ಗೆ ಮಾತುಕತೆ ನಡೆದಿದೆ. ಅವರ ಕೃತಿಗಳು ಯುವ ಪೀಳಿಗೆಯ ವಿಚಾರಗಳಿಗೆ ಮಾರ್ಗದರ್ಶನ ನೀಡುತ್ತಿವೆ. ಕನ್ನಡದಲ್ಲಿ ಅವರು ರಚಿಸಿದ ಹಲವು ಕೃತಿಗಳ ಅನುವಾದಗಳು ಕೂಡ ಲಭ್ಯವಿವೆ. ನಮ್ಮ ಮೂಲ ಹಾಗೂ ಸಂಸ್ಕೃತಿಯ ಬಗ್ಗೆ ಅಭಿಮಾನವನ್ನು ಹೊಂದಿರುವುದು ಎಷ್ಟೊಂದು ಮಹತ್ವಪೂರ್ಣವಾಗಿದೆ ಎಂಬುದನ್ನು ಅವರು ತಿಳಿಸಿದ್ದಾರೆ. ಎಸ್.ಎಲ್. ಭೈರಪ್ಪ ಅವರಿಗೆ ನಾನು ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತೇನೆ. ಯುವಕರಿಗೆ ಎಸ್. ಎಲ್. ಭೈರಪ್ಪ ಅವರ ಕೃತಿಗಳನ್ನು ಓದುವಂತೆ ನಾನು ಈ ಮೂಲಕ ಒತ್ತಾಯಿಸುತ್ತೇನೆ.



- **ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಮ್ಮ ಮಾಸಿಕ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಕರ್ನಾಟಕದ ಖ್ಯಾತ ಸಾಹಿತಿ ಎಸ್. ಎಲ್. ಭೈರಪ್ಪ ಅವರ ಕೊಡುಗೆ ಮತ್ತು ಸಾಧನೆಗಳನ್ನು ಸ್ಮರಿಸಿದ್ದಾರೆ.**
- **ಭೈರಪ್ಪ ಅವರ ಕೃತಿಗಳು ಯುವ ಪೀಳಿಗೆಗೆ ಮಾರ್ಗದರ್ಶನ ನೀಡುತ್ತವೆ ಎಂದು ಮೋದಿ ಹೇಳಿದ್ದು, ಅವರ ಕೃತಿಗಳನ್ನು ಓದಲು ಯುವಕರನ್ನು ಪ್ರೋತ್ಸಾಹಿಸಿದ್ದಾರೆ**
- **ಮೋದಿ ಇತ್ತೀಚೆಗೆ ನಿಧನರಾದ ಗಾಯಕ ಜುಬೀನ್ ಗರ್ಗ್ ಅವರ ಬಗ್ಗೆ ಸಹ ಶ್ರದ್ಧಾಂಜಲಿ ಸಲ್ಲಿಸಿದರು. ಗರ್ಗ್ ಅವರು ಭಾರತಾದ್ಯಂತ ತಮ್ಮ ಸಂಗೀತದಿಂದ ಗುರುತಿಸಿಕೊಂಡಿದ್ದರು.**

**50,000 ಕಿ.ಮೀ. ನಾವಿಕ ಸಾಗರ ಪರಿಕ್ರಮಕ್ಕೆ ಶ್ಲಾಘನೆ**

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನೌಕಾದಳದ ಅಧಿಕಾರಿಗಳಾದ ಲೆಫ್ಟಿನೆಂಟ್ ಕಮಾಂಡರ್ ದಿಲ್ನಾ ಮತ್ತು ಲೆಫ್ಟಿನೆಂಟ್ ಕಮಾಂಡರ್ ರೂಪಾ ಅವರ ಸಾಹಸಮಯ ಯಾನವನ್ನು ಶ್ಲಾಘಿಸಿದ್ದಾರೆ. ಅವರು 'ನಾವಿಕ ಸಾಗರ ಪರಿಕ್ರಮ'ದಲ್ಲಿ 50,000 ಕಿಲೋಮೀಟರ್ ದೂರ ಪ್ರಯಾಣ ಬೆಳೆಸಿದ್ದಕ್ಕಾಗಿ ಅವರನ್ನು ಅಭಿನಂದಿಸಿದ್ದಾರೆ.

ಲೆಫ್ಟಿನೆಂಟ್ ಕಮಾಂಡರ್‌ಗಳಾದ ದಿಲ್ನಾ ಕೆ ಮತ್ತು ರೂಪಾ ಎ ಅವರು ಭಾರತೀಯ ನೌಕಾ ನೌಕಾಯಾನ ನೌಕೆ ತಾರಿಣಿಯಲ್ಲಿ ಜಾಗತಿಕ ಸುತ್ತು ಸಂಚಾರವಾದ ನಾವಿಕ ಸಾಗರ ಪರಿಕ್ರಮ II ಅನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ಅವರು ಸುಮಾರು 8 ತಿಂಗಳಲ್ಲಿ 50,000 ಕಿ.ಮೀ ದೂರವನ್ನು ಕ್ರಮಿಸಿದ್ದಾರೆ.

**ಗಾಯಕ ಜುಬೀನ್ ಗರ್ಗ್ ಸ್ಮರಣೆ**

**ಇತ್ತೀಚೆಗೆ ನಿಧನರಾದ ಗಾಯಕ ಜುಬೀನ್ ಗರ್ಗ್ ಅವರನ್ನು ಸ್ಮರಿಸಿದ ಪ್ರಧಾನಿ ಮೋದಿ, ಅಸ್ಸಾಂನಲ್ಲಿ ಭೂಪೇನ್ ಹಜಾರಿಕಾ ಅವರ ಜನ್ಮ ಶತಮಾನೋತ್ಸವ ಆಚರಿಸುತ್ತಿರುವಾಗಲೇ, ಕೆಲ ದಿನಗಳ ಹಿಂದೆ ದುಃಖದ ಕ್ಷಣವೂ ಎದುರಾಗಿದೆ. ಜುಬೀನ್ ಗರ್ಗ್ ಅವರ ಅಕಾಲಿಕ ನಿಧನಕ್ಕೆ ಜನತೆ ಶೋಕಿಸುತ್ತಿದ್ದಾರೆ. ಜುಬೀನ್ ಗರ್ಗ್ ಅವರು ದೇಶಾದ್ಯಂತ ತಮ್ಮ ಛಾಪು ಮೂಡಿಸಿದ ಪ್ರಸಿದ್ಧ ಗಾಯಕರಾಗಿದ್ದರು. ಅವರಿಗೆ ಅಸ್ಸಾಮಿ ಸಂಸ್ಕೃತಿಯೊಂದಿಗೆ ಆಳವಾದ ಸಂಬಂಧವಿತ್ತು. ಗರ್ಗ್ ನಮ್ಮ ನೆನಪುಗಳಲ್ಲಿ ಸದಾ ಉಳಿಯಲಿದ್ದಾರೆ ಮತ್ತು ಅವರ ಸಂಗೀತವು ಮುಂದಿನ ಪೀಳಿಗೆಯನ್ನು ಸೆಳೆಯುವುದನ್ನು ಮುಂದುವರೆಸಲಿದೆ ಎಂದರು.**


## ಗಾಜಾ ಮೇಲೆ ಇಸ್ರೇಲ್ ದಾಳಿ: ಭಾರತ, ಆಫ್ರಿಕಾ ಖಂಡನೆ

**ನ್ಯೂಯಾರ್ಕ್:** ಭಾರತ, ಬ್ರೆಜಿಲ್, ದಕ್ಷಿಣ ಆಫ್ರಿಕಾಗಳು ಗಾಜಾ ಮೇಲಿನ ಇಸ್ರೇಲ್ ದಾಳಿಯನ್ನು ತೀವ್ರವಾಗಿ ಖಂಡಿಸಿದವು. ಅಲ್ಲದೇ ಇಸ್ರೇಲ್ ಆಕ್ರಮಿತ ಪ್ಯಾಲೆಸ್ಟೀನ್ ಪರಿಸ್ಥಿತಿಯ ಕುರಿತು ಕಳವಳ ವ್ಯಕ್ತಪಡಿಸಿದವು. ಸಾವು-ನೋವು, ಬಲವಂತದ ಸ್ಥಳಾಂತರ ಹಾಗೂ ನಿರಂತರ ದಾಳಿಯಿಂದಾಗಿ ಜನರು ಸಂಕಟ ಪಡುತ್ತಿದ್ದಾರೆ. ಈ ದಾಳಿ ನಿಲ್ಲಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಸಂದರ್ಭದಲ್ಲಿ ತ್ರಿಪಕ್ಷೀಯ ಸಭೆಯು ನಡೆಯಿತು. ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಭಾರತವನ್ನು ಪ್ರತಿನಿಧಿಸಿದ್ದರು.

**ಸುಂಕ ಹೇರಿಕೆ: ಬ್ರಿಕ್ಸ್ ಕಳವಳ:** ವಿವೇಚನಾರಹಿತ ರೂಪದಲ್ಲಿ ಸುಂಕಗಳನ್ನು ಏರಿಕೆ ಮಾಡುವುದು ಹಾಗೂ ವ್ಯಾಪಾರದ ಮೇಲೆ ನಿರ್ಬಂಧ ಹೇರುವಂತ ಕ್ರಮಗಳ ಕುರಿತು 'ಬ್ರಿಕ್ಸ್' ರಾಷ್ಟ್ರಗಳು ಕಳವಳ ವ್ಯಕ್ತಪಡಿಸಿವೆ. ಅದರಲ್ಲೂ ಸುಂಕವನ್ನು ಬಲವಂತದ ಸಾಧನವನ್ನಾಗಿ ಬಳಸುವ ಕ್ರಮಗಳು ಮತ್ತು ಅಂಥ ಅಭ್ಯಾಸಗಳು ದಕ್ಷಿಣ ರಾಷ್ಟ್ರಗಳನ್ನು ಹಿಂದೆ ಸರಿಸುವ ಅಪಾಯವನ್ನುಂಟು ಮಾಡುತ್ತವೆ. ಜಾಗತಿಕ ವ್ಯಾಪಾರವನ್ನು ಹಾಳು ಮಾಡುತ್ತವೆ ಎಂದು ಎಚ್ಚರಿಸಿವೆ. ಸುಂಕ ಹೇರಿಕೆಯನ್ನು ಬಲವಂತದ ಸಾಧನವನ್ನಾಗಿ ಬಳಸುವುದು, ಜಾಗತಿಕ ಪೂರೈಕೆ ಸರಪಳಿಗೆ ಅಡ್ಡಿಯನ್ನುಂಟುಮಾಡುತ್ತದೆ.

ಅಂತರ ರಾಷ್ಟ್ರೀಯ ವ್ಯಾಪಾರ, ಆರ್ಥಿಕ ಚಟುವಟಿಕೆಗಳಲ್ಲಿ ಅನಿಶ್ಚಿತತೆಯನ್ನುಂಟು ಮಾಡುತ್ತವೆ, ಆರ್ಥಿಕ ಅಸಮಾನತೆಗೆ ಕಾರಣವಾಗುತ್ತವೆ ಎಂದು ಸಚಿವರು ಕಳವಳ ವ್ಯಕ್ತಪಡಿಸಿದರು ಎಂದು ಇಲ್ಲಿ ನಡೆದ ಸಭೆ ಬಳಿಕ ಹೊರಡಿಸಿದ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಅಮೆರಿಕವು ಭಾರತದ ಮೇಲೆ ಇತ್ತೀಚೆಗೆ ಶೇ 50ರಷ್ಟು ಸುಂಕ ಹೇರಿದೆ. ರಷ್ಯಾದಿಂದ ತೈಲ ಖರೀದಿಸುತ್ತಿರುವುದರಿಂದ ಶೇ25ರಷ್ಟು ದಂಡವನ್ನೂ ವಿಧಿಸಿದೆ.

## ಭಾರತವನ್ನು ಧರ್ಮ ಒಗ್ಗೂಡಿಸಿದೆ: ಉಪ ರಾಷ್ಟ್ರಪತಿ




**ಪಾಟ್ನಾ:** ವಿವಿಧ ಭಾಷೆಗಳಲ್ಲಿ ಜನರು ಮಾತನಾಡುತ್ತಿದ್ದರೂ ಧರ್ಮವು ದೇಶವನ್ನು ಒಗ್ಗೂಡಿಸಿದೆ ಎಂದು ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದರು. ಕೇಂದ್ರ ಸಂಸ್ಕೃತಿ ಸಚಿವಾಲಯದ ಸಹಯೋಗದೊಂದಿಗೆ ಸಾಹಿತ್ಯ ಅಕಾಡೆಮಿಯು ಭಾನುವಾರ ಇಲ್ಲಿ ಆಯೋಜಿಸಿದ್ದ ಉನ್ಮೇಶಾ ಅಂತರರಾಷ್ಟ್ರೀಯ ಸಾಹಿತ್ಯ ಉತ್ಸವದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಇಡೀ ದೇಶಕ್ಕೆ ಅನ್ವಯವಾಗುವ ಸಾಮಾನ್ಯ ಭಾಷೆಯಿಲ್ಲದಿದ್ದರೂ ಭಾರತ ಹೇಗೆ ಒಗ್ಗಟ್ಟಿನಿಂದ ಇದೆ ಎಂದು ಯುರೋಪ್‌ನ ಗಣ್ಯರೊಬ್ಬರು ಪ್ರಶ್ನಿಸಿದ್ದರು. ಅದಕ್ಕೆ ಉತ್ತರಿಸಿದ್ದ ನಾನು, ದೇಶದ ಜನರು ವಿವಿಧ ಭಾಷೆಯಲ್ಲಿ ಮಾತನಾಡುತ್ತಿದ್ದಾರೆ.

ಆದರೆ, ಧರ್ಮದ ಪರಿಕಲ್ಪನೆಯಲ್ಲಿ ಇಡೀ ದೇಶದ ಜನರು ಒಂದಾಗಿದ್ದಾರೆ ಎಂದು ತಿಳಿಸಿದ್ದೆನು ಎಂದರು. ಪ್ರಜಾಪ್ರಭುತ್ವ ಎಂಬುದು ಪಾಶ್ಚಿಮಾತ್ಯರ ಪರಿಕಲ್ಪನೆ ಎಂಬ ಅಭಿಪ್ರಾಯವನ್ನು ನಿರಾಕರಿಸಿದ ಅವರು, 2,500 ವರ್ಷಗಳ ಹಿಂದೆಯೇ ಬಿಹಾರದ ನೆಲದಲ್ಲಿ ಜನ್ಮ ತಾಳಿದ ಮೌರ್ಯ ಸಾಮ್ರಾಜ್ಯವು ಅತ್ಯಂತ ಪ್ರಾಚೀನ ಪ್ರಜಾಪ್ರಭುತ್ವವಾಗಿದೆ' ಎಂದು ಪ್ರತಿಪಾದಿಸಿದರು.

## ಲೈಂಗಿಕ ಕಿರುಕುಳ ನೀಡಿದ್ದ ಸ್ವಾಮಿ ಚೈತನ್ಯಾನಂದ ಸರಸ್ವತಿ ಅರೆಸ್ಟ್

**ನವದೆಹಲಿ:** ಆಶ್ರಮದಲ್ಲಿ 17 ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿ ಬಂಧನದ ಭೀತಿಯಿಂದ ತಲೆಮರೆಸಿಕೊಂಡಿದ್ದ ದೆಹಲಿಯ ಸ್ವಾಮಿ ಚೈತನ್ಯಾನಂದ ಸರಸ್ವತಿಯನ್ನು ಕೊನೆಗೂ ಪೊಲೀಸರು ಬಂಧಿಸಿದ್ದಾರೆ. ಸ್ವಾಮಿ ಚೈತನ್ಯಾನಂದ ಸರಸ್ವತಿ ವಿರುದ್ಧ ವಿದ್ಯಾರ್ಥಿನಿಯರಿಗೆ ಅಶ್ಲೀಲ ಸಂದೇಶ, ಬಲವಂತದ ದೈಹಿಕ ಸಂಪರ್ಕ ನಡೆಸಿದ ಆರೋಪಗಳಿವೆ. ಪ್ರಕರಣ ಹೊರಬಂದ ನಂತರ ಆಶ್ರಮದಿಂದ ತಲೆಮರೆಸಿಕೊಂಡು ನಾಲ್ಕು ದಿನಗಳಿಂದ ನಾಪತ್ತೆಯಾಗಿದ್ದ ಇವರನ್ನು ಉತ್ತರಪ್ರದೇಶದ ಆಗ್ರದಲ್ಲಿ ಬಂಧಿಸಿರುವದೆಹಲಿ ಪೊಲೀಸರು, ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗಾಗಿ ತಮ ವಶಕ್ಕೆ ಪಡೆದಿದ್ದಾರೆ.

ದೆಹಲಿಯ ಶಾರದಾ ಇನ್ಸ್ಟಿಟ್ಯೂಟ್ ಆಫ್ ಇಂಡಿಯನ್ ಮ್ಯಾನೇಜೆಂಟ್‌ನ ನಿರ್ವಹಣಾ ಸಮಿತಿಯ ಸದಸ್ಯರಾಗಿರುವ ಆರೋಪಿ ವಿರುದ್ಧ 2009 ಮತ್ತು 2016ರಲ್ಲಿ ಸಹ ಎರಡು ಲೈಂಗಿಕ ಕಿರುಕುಳದ ದೂರು ದಾಖಲಾಗಿದ್ದವು. ಸ್ವಾಮೀಜಿ, ವಿದ್ಯಾರ್ಥಿಗಳನ್ನು ತಮ ಕೋಣೆಗೆ ಕರೆಸಿಕೊಂಡು ಉಚಿತ ವಿದೇಶ ಪ್ರವಾಸಗಳ ಆಮಿಷವೊಡ್ಡಿ ಲೈಂಗಿಕ ಕ್ರಿಯೆಗೆ ಒತ್ತಾಯಿಸುತ್ತಿದ್ದರು. ಮಹಿಳಾ ಹಾಸ್ಟೆಲ್‌ನಲ್ಲಿ ರಹಸ್ಯವಾಗಿ ಕ್ಯಾಮೆರಾಗಳನ್ನು



ಅಳವಡಿಸಿದ್ದರು ಎಂದು ಆರೋಪಿಸಲಾಗಿದೆ. ಈ ಬಗ್ಗೆ ಆರೋಪಗಳು ಹೊರಬಿದ್ದ ನಂತರ, ಆಶ್ರಮದ ಆಡಳಿತ ಮಂಡಳಿ ಚೈತನ್ಯಾನಂದರನ್ನು ಅವರ ಹುದ್ದೆಯಿಂದ ಹೊರಹಾಕಿತ್ತು.

**ವಿದ್ಯಾರ್ಥಿನಿಯರ ದೂರು ಏನು?:** ಸ್ವಾಮಿ ಚೈತನ್ಯಾನಂದ ಸರಸ್ವತಿ ಪಾರ್ಥ ಸಾರಥಿ, ಇಡಬ್ಲ್ಯೂಎಸ್ ವಿದ್ಯಾರ್ಥಿವೇತನದಡಿ ಪಿಜಿಡಿಎಂ ಕೋರ್ಸ್‌ಗಳನ್ನು ಕಲಿಯುತ್ತಿರುವ ಮಹಿಳಾ ವಿದ್ಯಾರ್ಥಿಗಳಿಗೆ ಅಶ್ಲೀಲ ಭಾಷೆಯನ್ನು ಬಳಸಿ ನಿಂದಿಸುತ್ತಿದ್ದರು ಮತ್ತು ವಾಟ್ಸಪ್‌ನಲ್ಲಿ ಅಶ್ಲೀಲ ಸಂದೇಶಗಳನ್ನು ಕಳಿಸುತ್ತಿದ್ದರು. ಅಲ್ಲದೇ ದೈಹಿಕ ಸಂಪರ್ಕಕ್ಕೂ ಪ್ರಯತ್ನಿಸಿದ್ದರು ಸಂಸ್ಥೆಯಲ್ಲಿನ ಕೆಲ ಮಹಿಳಾ ಅಧ್ಯಾಪಕರು ಹಾಗೂ ಆಡಳಿತಾಧಿಕಾರಿಗಳು ಅವರ ಬೇಡಿಕೆ ಈಡೇರಿಸುವಂತೆ ವಿದ್ಯಾರ್ಥಿನಿಯರ ಮೇಲೆ ಒತ್ತಡ ಹೇರುತ್ತಿದ್ದರು. ಇದರಿಂದಾಗಿ ಸಾಕಷ್ಟು ಮಾನಸಿಕ ಹಾಗೂ ದೈಹಿಕ ಹಿಂಸೆ ಅನುಭವಿಸಿದ್ದಾರೆ ಎಂದು ವಿದ್ಯಾರ್ಥಿನಿಯರು ದೂರಿನಲ್ಲಿ ತಿಳಿಸಿದ್ದರು.

**2009, 2016ರಲ್ಲಿ ಇಬ್ಬರು ಮೊಲೆಸ್ಟೇಶನ್ ಕೇಸ್‌ಗಳಲ್ಲಿ ಆತನ ವಿರುದ್ಧ ಪ್ರಕರಣಗಳಿದ್ದು, ಒಂದರಲ್ಲಿ ಸ್ವಲ್ಪಕಾಲ ಬಂಧನಗೊಂಡಿದ್ದನು. ಆದರೆ, ಆಶ್ರಮವು ಯಾವ ಕ್ರಮವೂ ತೆಗೆದುಕೊಂಡಿರಲಿಲ್ಲ. ದೆಹಲಿ ಪೊಲೀಸ್ ಡಿಪ್ಯೂಟಿ ಕಮಿಷನರ್ ಅಮಿತ್ ಗೋಯಲ್, ಆಗ್ರದಲ್ಲಿ ಸ್ವಾಮಿಯ ಸ್ಥಳವನ್ನು ಟ್ರ್ಯಾಕ್ ಮಾಡಿ ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ.**

ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡ ದೆಹಲಿ ಪೊಲೀಸರು, 32 ವಿದ್ಯಾರ್ಥಿನಿಯರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದರು. ಈ ಪೈಕಿ 17 ಮಂದಿ ತಮ ಮೇಲೆ ನಿಂದನೆಯ ಭಾಷೆ ಬಳಸಿದ್ದಾರೆ, ದೈಹಿಕ ಸಂಪರ್ಕಕ್ಕೆ ಒತ್ತಾಯಿಸಿದ್ದಾರೆಂದು ಹೇಳಿಕೊಂಡಿದ್ದಾರೆ. ಇದಕ್ಕೆ ನಾವು ವಿರೋಧ ಮಾಡಿದಾಗ ಕೆಲ ಮಹಿಳಾ ಅಧ್ಯಾಪಕರು ಹಾಗೂ ಆಡಳಿತಾಧಿಕಾರಿಗಳು ಸಹಕರಿಸುವಂತೆ ನಮ ಮೇಲೆ ಒತ್ತಡ ಹೇರುತ್ತಿದ್ದರು. ಇದು ಒಂದು ದಿನದ ಸಮಸ್ಯೆಯಲ್ಲ ದೀರ್ಘಕಾಲದ ಸಮಸ್ಯೆ ಎಂದು ಹೇಳಿದ್ದರು.


## ಆರ್‌ಎಸ್‌ಎಸ್‌ಗೆ 100 ವರ್ಷ: ಅಭೂತಪೂರ್ವ, ಸ್ಫೂರ್ತಿದಾಯಕ ಪ್ರಯಾಣ ಎಂದು ಮೋದಿ ಶ್ಲಾಘನೆ

**ನವದೆಹಲಿ:** ವಿಜಯದಶಮಿಯಂದು ರಾಷ್ಟ್ರೀಯ ಸ್ವಯಂಸೇವಕ ಸಂಘ ಸ್ಥಾಪನೆಯಾಗಿ 100 ವರ್ಷ ಪೂರೈಸಲಿದೆ. ಸಂಘದ ಅಭೂತಪೂರ್ವ ಮತ್ತು ಸ್ಫೂರ್ತಿದಾಯಕ ಪ್ರಯಾಣ ಶ್ಲಾಘನೀಯ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ. ಭಾನುವಾರ ಪ್ರಸಾರಗೊಂಡ ಮಾಸಾಂತ್ಯದ ಮನದ ಮಾತು ಕಾರ್ಯಕ್ರಮದ 126ನೇ ಸಂಚಿಕೆಯನ್ನುದ್ದೇಶಿಸಿ ಮಾತನಾಡಿದ ಅವರು, 'ರಾಷ್ಟ್ರೀಯ ಸ್ವಯಂಸೇವಕ ಸಂಘವು ಸ್ಥಾಪನೆಯಾಗಿ 100 ವರ್ಷಗಳನ್ನು ಪೂರೈಸಲಿದ್ದು, ಈ ಬಾರಿಯ ವಿಜಯದಶಮಿ ಬಹಳ ವಿಶೇಷವಾಗಿದೆ' ಎಂದು ಹೇಳಿದ್ದಾರೆ.

100 ವರ್ಷಗಳ ಹಿಂದೆ ಆರ್‌ಎಸ್‌ಎಸ್ ಸ್ಥಾಪನೆಯಾದ ಸಂದರ್ಭದಲ್ಲಿ ದೇಶವು ಗುಲಾಮಗಿರಿಯ ಸರಪಳಿಯಲ್ಲಿ ಬಂಧಿಸಲ್ಪಟ್ಟಿತ್ತು. ಈ ಗುಲಾಮಗಿರಿಯು ನಮ್ಮ ಸ್ವಾಭಿಮಾನ ಮತ್ತು ಆತ್ಮವಿಶ್ವಾಸವನ್ನು ತೀವ್ರವಾಗಿ ನೋಯಿಸಿತ್ತು.

ವಿಶ್ವದ ಅತ್ಯಂತ ಹಳೆಯದಾದ ನಮ್ಮ ನಾಗರಿಕತೆಯು ಅಸ್ಮಿತೆ ಬಿಕ್ಕಟ್ಟನ್ನು ಎದುರಿಸುತ್ತಿತ್ತು. ನಮ್ಮ ನಾಗರಿಕರು ಕೀಳರಿಮೆಯ ಸಂಕೀರ್ಣಕ್ಕೆ ಬಲಿಯಾಗುತ್ತಿದ್ದರು ಎಂದು ಅವರು ತಿಳಿಸಿದ್ದಾರೆ. ಡಾ. ಕೇಶವ್ ಬಲಿರಾಮ್ ಹೆಡಗೇವಾರ್ ಅವರು 1925ರ ವಿಜಯದಶಮಿಯ ಶುಭ ಸಂದರ್ಭದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಸ್ಥಾಪಿಸಿದ್ದರು. ಹೆಡಗೇವಾರ್ ನಿಧನದ ನಂತರ ಗುರೂಜಿ (ಮೋಹನ್ ಭಾಗವತ್) ರಾಷ್ಟ್ರಕ್ಕೆ ಸೇವೆ ಸಲ್ಲಿಸುವ ಈ ಮಹಾನ್ ಧ್ಯೇಯವನ್ನು ಮುಂದುವರೆಸಿದರು' ಎಂದು ಮೋದಿ ಉಲ್ಲೇಖಿಸಿದ್ದಾರೆ.

ತ್ಯಾಗ, ಸೇವೆಯ ಮನೋಭಾವ ಮತ್ತು ಶಿಸ್ತಿನ ಬೋಧನೆಗಳು ಆರ್‌ಎಸ್‌ಎಸ್‌ನ ನಿಜವಾದ ಶಕ್ತಿಯಾಗಿದೆ. ಸಂಘ ನೂರು ವರ್ಷಗಳಿಂದ ಅವಿಶ್ರಾಂತವಾಗಿ ಮತ್ತು ನಿರಂತರವಾಗಿ ರಾಷ್ಟ್ರ ಸೇವೆಯಲ್ಲಿ ತೊಡಗಿಸಿಕೊಂಡಿದೆ. ಅದಕ್ಕಾಗಿಯೇ ದೇಶದಲ್ಲಿ ಎಲ್ಲಿಯಾದರೂ ನೈಸರ್ಗಿಕ ವಿಕೋಪ ಸಂಭವಿಸಿದಾಗ, ಎಲ್ಲರಿಗಿಂತ ಮೊದಲು ಆರ್‌ಎಸ್ ಎಸ್ ಸ್ವಯಂಸೇವಕರು ಅಲ್ಲಿಗೆ ಹೋಗಿರುತ್ತಾರೆ. ಪರಿಹಾರ ಕಾರ್ಯಗಳಿಗೆ ಬೆಂಬಲ ನೀಡುತ್ತಿರುತ್ತಾರೆ' ಎಂದು ಮೋದಿ ಅವರು ಆರ್‌ಎಸ್‌ಎಸ್‌ನ ಬೋಧನೆಗಳನ್ನು ಸ್ಮರಿಸಿದ್ದಾರೆ.



ಲಕ್ಷಾಂತರ ಸ್ವಯಂಸೇವಕರ ಜೀವನದ ಪ್ರತಿಯೊಂದು ಪ್ರಯತ್ನದಲ್ಲಿ ದೇಶ ಮೊದಲು ಎಂಬ ಮನೋಭಾವವು ಯಾವಾಗಲೂ ಸರ್ವೋಚ್ಚವಾಗಿರುತ್ತದೆ. ರಾಷ್ಟ್ರಕ್ಕೆ ಸೇವೆ ಸಲ್ಲಿಸುವ ಮಹಾ ಯಜ್ಞಕ್ಕೆ ತನ್ನನ್ನು ತಾನು ಅರ್ಪಿಸಿಕೊಳ್ಳುತ್ತಿರುವ ಪ್ರತಿಯೊಬ್ಬ ಸ್ವಯಂಸೇವಕರಿಗೂ ನಾನು ನನ್ನ ಶುಭಾಶಯಗಳನ್ನು ಅರ್ಪಿಸುತ್ತೇನೆ ಎಂದು ಮೋದಿ ತಿಳಿಸಿದ್ದಾರೆ.

## ಮಿನಿ ನ್ಯೂಸ್

### ಚೀನಾದ ಮಾಜಿ ಕೃಷಿ ಸಚಿವ ಟ್ಯಾಂಗ್ ರೆಂಜಿಯಾನ್‌ಗೆ ಮರಣದಂಡನೆ

**ಚೀನಾ:** ಲಂಚ ಪ್ರಕರಣಕ್ಕೆ ಸಂಬಂಧಿಸಿ ಚೀನಾದ ಮಾಜಿ ಕೃಷಿ, ಗ್ರಾಮೀಣ ವ್ಯವಹಾರಗಳ ಸಚಿವ ಟ್ಯಾಂಗ್ ರೆಂಜಿಯಾನ್ ಅವರಿಗೆ ಜಿಲಿನ್ ಪ್ರಾಂತ್ಯದ ನ್ಯಾಯಾಲಯವೊಂದು ಭಾನುವಾರ ಮರಣದಂಡನೆ ವಿಧಿಸಿದೆ ಎಂದು ಸರ್ಕಾರಿ ಸುದ್ದಿ ಸಂಸ್ಥೆ ಕ್ಸಿನ್ನುವಾ ವರದಿ ಮಾಡಿದೆ. 2007ರಿಂದ 2024ರವರೆಗೆ ವಿವಿಧ ಹುದ್ದೆಗಳನ್ನು ಅಲಂಕರಿಸಿದ್ದ ಟ್ಯಾಂಗ್ ಅವರು ಲಂಚದ ರೂಪದಲ್ಲಿ ಅಪಾರ ಪ್ರಮಾಣದ ನಗದು, ಆಸ್ತಿಯನ್ನು ಪಡೆದಿದ್ದಾರೆ ಎಂದು ಕ್ಸಿನ್ನುವಾ ತಿಳಿಸಿದೆ.

ಚೀನಾದ ಕಮ್ಯುನಿಸ್ಟ್ ಪಕ್ಷವು ಟ್ಯಾಂಗ್ ಅವರನ್ನು 2024ರ ನವೆಂಬರ್‌ನಲ್ಲಿ ಪಕ್ಷದಿಂದ ಉಚ್ಚಾಟನೆ ಮಾಡಿತ್ತು. ಕೃಷಿ ಸಚಿವರಾಗಿ ನೇಮಕವಾಗುವುದಕ್ಕೂ ಮುನ್ನ ಟ್ಯಾಂಗ್ ಅವರು 2017ರಿಂದ 2020ರವರೆಗೆ ಚೀನಾದ ಗನ್ಸು ಪ್ರಾಂತ್ಯದ ಗವರ್ನರ್ ಆಗಿದ್ದರು. ಭ್ರಷ್ಟಾಚಾರವು ಚೀನಾದ ಕಮ್ಯುನಿಸ್ಟ್ ಪಕ್ಷಕ್ಕೆ ದೊಡ್ಡ ಬೆದರಿಕೆಯಾಗಿದೆ. ಇದು ಇನ್ನೂ ಹೆಚ್ಚುತ್ತಲೇ ಇದೆ ಎಂದು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಕೆಲವು ತಿಂಗಳ ಹಿಂದೆ ಹೇಳಿದ್ದರು.

### ಇರಾನ್ ಮೇಲಿನ ನಿರ್ಬಂಧ ವಿಳಂಬ: ವಿಶ್ವಸಂಸ್ಥೆ ಭದ್ರತಾ ಮಂಡಳಿ ತಿರಸ್ಕಾರ

**ವಿಶ್ವಸಂಸ್ಥೆ :** ಇರಾನ್ ಮೇಲೆ ನಿರ್ಬಂಧ ವಿಧಿಸುವ ನಿರ್ಧಾರವನ್ನು ವಿಳಂಬಗೊಳಿಸುವ ರಷ್ಯಾ ಹಾಗೂ ಚೀನಾದ ಕೊನೆಯ ಹಂತದ ಪ್ರಯತ್ನವನ್ನು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ತಿರಸ್ಕರಿಸಿದೆ. ಕಳೆದೊಂದು ವಾರದಿಂದ ನಡೆದ ಸಭೆಯು ನಿರ್ದಿಷ್ಟ ಒಪ್ಪಂದಕ್ಕೆ ಬರಲು ವಿಫಲವಾಗಿದೆ ಎಂದು ಐರೋಪ್ಯ ದೇಶಗಳು ತಿಳಿಸಿವೆ. ಇರಾನ್ ಪರಮಾಣು ಒಪ್ಪಂದಕ್ಕೆ ಸಂಬಂಧಿಸಿ ನಿರ್ಬಂಧ ವಿಳಂಬಗೊಳಿಸುವ ನಿರ್ಣಯವನ್ನು ರಷ್ಯಾ ಹಾಗೂ ಚೀನಾ ಮಂಡಿಸಿತ್ತು. ನಿರ್ಣಯ ತಡೆಹಿಡಿಯಲು ಭದ್ರತಾ ಮಂಡಳಿಯ 9 ಸದಸ್ಯರ ಬೆಂಬಲ ಅಗತ್ಯವಿತ್ತು. ಶುಕ್ರವಾರ ಮಂಡಿಸಿದ ನಿರ್ಣಯಕ್ಕೆ ಯಾವುದೇ ಬೆಂಬಲ ಗಳಿಸಲು ಉಭಯ ರಾಷ್ಟ್ರಗಳು ವಿಫಲವಾದವು. ಶನಿವಾರದಿಂದಲೇ ಇರಾನ್ ಮೇಲೆ ನಿರ್ಬಂಧಗಳು ಅನ್ವಯವಾಗಲಿದೆ.

ರಾಜತಾಂತ್ರಿಕತೆ, ಮಾತುಕತೆಯ ಮೂಲಕ ಸಮಸ್ಯೆ ಬಗೆಹರಿಸುವ ಕುರಿತು ಐರೋಪ್ಯ ಒಕ್ಕೂಟದ ಸದಸ್ಯರು, ಅಮೆರಿಕವು ಎರಡನೇ ಬಾರಿ ಚಿಂತನೆ ನಡೆಸಲಿದೆ ಎಂದು ಭಾವಿಸಿದ್ದೆವು. ಬೆದರಿಕೆಯಿಂದ ಆ ಪ್ರಾಂತ್ಯದಲ್ಲಿ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಲಿದೆ ಎಂದು ವಿಶ್ವಸಂಸ್ಥೆಯ ರಷ್ಯಾ ಉಪ ರಾಯಭಾರಿ ಡಿಮಿಟ್ರಿ ಪಾಲಿಅನಸ್ಕಿವ್ ತಿಳಿಸಿದ್ದಾರೆ. ಇರಾನ್ ಮೇಲೆ ಪುನಃ ನಿರ್ಬಂಧ ವಿಧಿಸುವ ಪ್ರಯತ್ನಕ್ಕೆ ಬ್ರಿಟನ್, ಫ್ರಾನ್ಸ್ ಹಾಗೂ ಜರ್ಮನಿಯು ಹೆಚ್ಚಿನ ಒತ್ತಡ ಹೇರಿದ್ದವು. ಇದರಿಂದ, ವಿದೇಶಗಳಲ್ಲಿರುವ ಇರಾನ್‌ನ ಆಸ್ತಿಗಳ ಮುಟ್ಟುಗೋಲು, ಶಸ್ತ್ರಾಸ್ತ್ರ ಒಪ್ಪಂದಗಳ ಸ್ಥಗಿತ, ಇರಾನ್‌ನ ಖಂಡಾಂತರ ಕ್ಷಿಪಣಿ ಅಭಿವೃದ್ಧಿ ಮೇಲೆ ದಂಡ ಸೇರಿದಂತೆ ಹಲವು ನಿರ್ಬಂಧಗಳು ಅನ್ವಯವಾಗಲಿದೆ. ಇದರಿಂದ ಈಗಾಗಲೇ ತತ್ತರಿಸಿರುವ ಇರಾನ್‌ನ ಆರ್ಥಿಕತೆಯ ಮೇಲೆ ಇನ್ನಷ್ಟು ಹೊಡೆತ ಬೀಳಲಿದೆ. ಇರಾನ್ ಹಾಗೂ ಐರೋಪ್ಯ ರಾಷ್ಟ್ರಗಳ ಮಧ್ಯೆ ಮತ್ತಷ್ಟು ಉದ್ವಿಗ್ನತೆ ಸೃಷ್ಟಿಸಲಿದೆ.

### ಕಾಣೆಯಾಗಿದ್ದ ಶಬರಿಮಲೆ ದ್ವಾರಪಾಲಕರ ಸ್ವರ್ಣಲೇಪಿತ ಪೀಠ ಪತ್ತೆ



**ಕೇರಳ:** ಶಬರಿಮಲೆ ದೇವಾಲಯದ ದ್ವಾರಪಾಲಕ ಮೂರ್ತಿಯ ಪೀಠವನ್ನು ತಿರುವಾಂಕೂರು ದೇವಸ್ವಂ ಬೋರ್ಡ್‌ನ ವಿಜಿಲೆನ್ಸ್ ವಿಭಾಗವು ತಿರುವನಂತಪುರದಲ್ಲಿ ವಶಕ್ಕೆ ಪಡೆದಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. ಪೀಠವನ್ನು ಕೊಡುಗೆಯಾಗಿ ನೀಡಿದವರ ಸಂಬಂಧಿಕರ ಮನೆಯಿಂದ ಅದನ್ನು ಪತ್ತೆ ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ. ಟಿಡಿಬಿ ವಿಜಿಲೆನ್ಸ್ ಮತ್ತು ಪೊಲೀಸ್ ಅಧೀಕ್ಷಕ ಸುನಿಲ್ ಕುಮಾರ್ ವಿ. ಅವರ ನೇತೃತ್ವದ ತಂಡವು ಪೀಠವನ್ನು ಕೊಡುಗೆಯಾಗಿದ್ದ ನೀಡಿದ್ದ ವೆಂಜರ್ ಮೂಡ್‌ನ ಉನ್ನಿಕೃಷ್ಣನ್ ಪೊಟ್ಟಿ ಅವರ ಸಂಬಂಧಿಕರ ಮನೆಯಲ್ಲಿ ಪತ್ತೆ ಮಾಡಿತ್ತು.

ಚಿನ್ನದ ಹೊದಿಕೆಯ ತಾಮ್ರದ ದ್ವಾರಪಾಲಕ ಪೀಠದ ತೂಕದಲ್ಲಿ ಇಳಿಕೆ ಆಗಿರುವುದನ್ನು ಗಮನಿಸಿದ್ದ ಕೇರಳ ಹೈಕೋರ್ಟ್, ಅದರ ಬಗ್ಗೆ ತನಿಖೆ ಮಾಡುವಂತೆ ಇತ್ತೀಚೆಗೆ ಆದೇಶಿಸಿತ್ತು. ಇದರ ನಂತರ ಪೀಠ ಕಾಣೆಯಾಗಿತ್ತು. ಅಲ್ಲದೆ, 2019ರಲ್ಲಿ ದ್ವಾರಪಾಲಕರ ಫಲಕವನ್ನು ಲೋಹಲೇಪನಕ್ಕೆಂದು ತೆಗೆದುಕೊಂಡು ಹೋದಾಗ ತಾನು ಚಿನ್ನ ಲೇಪಿತ ಪೀಠವನ್ನು ದೇವಾಲಯಕ್ಕೆ ಕೊಡುಗೆಯಾಗಿ ನೀಡಿದ್ದಾಗಿ ಪೊಟ್ಟಿ ಹೇಳಿದ್ದರು. ಅದರ ಕೆಲಸ 2020ರಲ್ಲಿ ಮುಗಿದಿದ್ದು, ನಂತರ ಕೆಲವು ಭಕ್ತರ ಮೂಲಕ ದೇವಾಲಯದ ಅಧಿಕಾರಿಗಳಿಗೆ ತಲುಪಿಸಲಾಗಿತ್ತು. ಆದರೆ ಅದು ಈಗ ದೇವಾಲಯದಲ್ಲಿ ಕಾಣುತ್ತಿಲ್ಲ ಎಂದು ಅವರು ತಿಳಿಸಿದ್ದರು.

## ತೆರಿಗೆ ಹೆಚ್ಚಳ, ವಿಸಾ ನೀತಿ ಪರಿಣಾಮ: ಪಶ್ಚಿಮ ಬಂಗಾಳದ ದುರ್ಗಾಪೂಜೆ ಪೆಂಡಾಲ್‌ನಲ್ಲಿ ''ಅಸುರ''ನಾಗಿ ಡೊನಾಲ್ಡ್ ಟ್ರಂಪ್

# ಡೊನಾಲ್ಡ್ ಟ್ರಂಪ್ ಈಗ ಭಾರತದ ಪಾಲಿಗೆ ವಿಲನ್

**ಕೋಲ್ಕತ್ತಾ:** ಭಾರತದ ಮೇಲೆ ತೆರಿಗೆ ಮೇಲೆ ತೆರಿಗೆ ವಿಧಿಸುತ್ತಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈಗ ಭಾರತದ ಪಾಲಿಗೆ ವಿಲನ್ ಪಶ್ಚಿಮ ಬಂಗಾಳದ ಬಹರಂಪುರದಲ್ಲಿ ದುರ್ಗಾಪೂಜೆಯೊಂದರಲ್ಲಿ ಅಳವಡಿಸಲಾದ ಪೂಜಾ ಪೆಂಡಾಲ್ ಇದಕ್ಕೆ ಸಾಕ್ಷಿ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಅಸುರ ಅಥವಾ ರಾಕ್ಷಸನ ರೂಪದಲ್ಲಿ ಚಿತ್ರಿಸಿರುವ ಈ ಪೆಂಡಾಲ್ ಈಗ ವ್ಯಾಪಕ ಗಮನ ಸೆಳೆದಿದೆ. ಬಹರಂಪುರದ ಖಾಗ್ರಾ ಸ್ಮಶಾನಘಾಟ್ ದುರ್ಗಾ ಪೂಜಾ ಸಮಿತಿಯ ಸಂಘಟಕರು ಭಾರತೀಯ ಸರಕುಗಳ ಮೇಲೆ ಟ್ರಂಪ್ ಅವರು ವಿಧಿಸಿದ 50 ಪ್ರತಿಶತದಷ್ಟು ಸುಂಕ ಮತ್ತು ಕಠಿಣ ವೀಸಾ ನಿಯಮಗಳೇ ಈ ನಿರ್ಧಾರಕ್ಕೆ ಕಾರಣ ಎಂದು ಹೇಳಿದ್ದಾರೆ. ಇದರ ಜೊತೆಗೆ, ಟ್ರಂಪ್ ಅವರು ಪ್ರಧಾನಿ ನರೇಂದ್ರ ಮೋದಿಯವರ ವಿಶ್ವಾಸಕ್ಕೆ ದ್ರೋಹ ಬಗೆದಿದ್ದಾರೆ ಎಂದು ಸಮಿತಿಯು ಆರೋಪಿಸಿದೆ.

**ಸಮಿತಿಯವರ ಸ್ಪಷ್ಟನೆ:** ಖಾಗ್ರಾ ಸ್ಮಶಾನಘಾಟ್ ದುರ್ಗಾ ಪೂಜಾ ಸಮಿತಿಯ ಸದಸ್ಯರಾದ ಪ್ರಸಾದ್ ಅವರು, ಭಾರತದ ಮೇಲೆ ಟ್ರಂಪ್ ವಿಧಿಸಿದ 50 ಪ್ರತಿಶತದಷ್ಟು ಸುಂಕ ಮತ್ತು ಅವರು ಜಾರಿಗೆ ತಂದ ವೀಸಾ ನೀತಿಗಳೇ ಈ ನಿರ್ಧಾರಕ್ಕೆ ಪ್ರತಿಕ್ರಿಯೆ. ನಮ್ಮ ಪ್ರಧಾನಿಯವರು ಡೊನಾಲ್ಡ್ ಟ್ರಂಪ್ ಅವರನ್ನು ಸ್ನೇಹಿತರೆಂದು ಭಾವಿಸಿದ್ದರು. ಟ್ರಂಪ್ ಆ ವಿಶ್ವಾಸಕ್ಕೆ ದ್ರೋಹ ಬಗೆದರು. ಅದಕ್ಕಾಗಿಯೇ ಅವರನ್ನು ರಾಕ್ಷಸನಂತೆ ಚಿತ್ರಿಸಲಾಗಿದೆ ಎಂದು ಅನಂದ್ ಬಜಾರ್‌ಗೆ ತಿಳಿಸಿದ್ದಾರೆ. ಈ ವಿವಾದಿತ ವಿಗ್ರಹವನ್ನು ಸ್ಥಳೀಯ ಕಲಾವಿದ ಅಸಿಮ್ ಪಾಲ್ ಅವರು ರಚಿಸಿದ್ದು, ಬಹರಂಪುರ ನಗರಸಭೆಯ



**ವಿವಾದಕ್ಕೆ ಮುಖ್ಯ ಕಾರಣ**

ಅಧ್ಯಕ್ಷರಾದ ನರುಗೋಪಾಲ್ ಮುಖೋಪಾಧ್ಯಾಯ ಅವರ ಸಮ್ಮುಖದಲ್ಲಿ ಔಪಚಾರಿಕವಾಗಿ ಉದ್ಘಾಟನೆಗೊಂಡಿತು. ಟ್ರಂಪ್ ಮಾದರಿಯಲ್ಲಿ ನಿರ್ಮಿಸಲಾದ ಈ ಅಸುರನ ವಿಗ್ರಹವು ಅನಾವರಣಗೊಂಡ ತಕ್ಷಣವೇ ಸಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

**ಸಾಮಾಜಿಕ ಜಾಲತಾಣಗಳಲ್ಲಿ ಪ್ರತಿಕ್ರಿಯೆ:** ಫೇಸ್‌ಬುಕ್‌ನಲ್ಲಿ ಹಂಚಿಕೆಯಾದ ಒಂದು ವಿಡಿಯೋದಲ್ಲಿ, ಕಾರ್ಮಿಕರು ಟ್ರಂಪ್ ಅವರಂತೆ ಕಾಣಲು ಅಸುರನ ಕೇಶವಿನ್ಯಾಸ ಮತ್ತು ಹುಬ್ಬುಗಳನ್ನು ವಿನ್ಯಾಸಗೊಳಿಸುವುದು ಕಂಡುಬಂದಿದೆ. ಈ ಬಗ್ಗೆ ನೆಟ್ಟಿಗರು ಕೂಡ ತರಹೇವಾರಿಯಾಗಿ ಪ್ರತಿಕ್ರಿಯಿಸಿದ್ದಾರೆ. ಒಬ್ಬ ಬಳಕೆದಾರರು, ಮೂಲ ಪ್ರತಿಗಿಂತ ಈ ಪ್ರತಿಮೆ ಉತ್ತಮವಾಗಿ ಕಾಣಲು ಕಾರಣವೇನು? ಎಂದು ಹಾಸ್ಯಭರಿತವಾಗಿ ಕಾಮೆಂಟ್ ಮಾಡಿದ್ದಾರೆ. ಮತ್ತೊಬ್ಬರು, ಟ್ರಂಪ್-ಅಸುರ ಎಂದು ಕರೆದಿದ್ದಾರೆ. ಆದರೆ, ಕೆಲವರು ವಿಮರ್ಶಾತ್ಮಕ ದೃಷ್ಟಿಯಿಂದ ಪ್ರತಿಕ್ರಿಯಿಸಿದ್ದಾರೆ. ಪೂಜೆ ಮತ್ತು ಭಕ್ತಿಯನ್ನು ಸರಿಯಾಗಿ ಮಾಡಬೇಕು. ಒಂದು ಅಥವಾ ಹಲವು ರಾಜಕೀಯ ಪಕ್ಷಗಳನ್ನು ಮೆಚ್ಚಿಸಲು ಅದನ್ನು ರಾಜಕೀಯಗೊಳಿಸದಿರುವುದು ಉತ್ತಮ. ನೀವು ಮಾಡುತ್ತಿರುವುದು ಪೂಜೆ, ರಾಜಕೀಯವಲ್ಲ ಎಂದಿದ್ದಾರೆ.

- **ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಪಶ್ಚಿಮ ಬಂಗಾಳದ ಬಹರಂಪುರದಲ್ಲಿ ದುರ್ಗಾಪೂಜೆಯಲ್ಲಿ ಅಸುರ ಅಥವಾ ರಾಕ್ಷಸನ ರೂಪದಲ್ಲಿ ಚಿತ್ರಿಸಲಾಗಿದೆ.**
- **ಟ್ರಂಪ್ ಅವರು ಭಾರತೀಯ ಸರಕುಗಳ ಮೇಲೆ ವಿಧಿಸಿರುವ 50 ಪ್ರತಿಶತದ ಸುಂಕ ಮತ್ತು ಕಠಿಣ ವೀಸಾ ನಿಯಮಗಳ ಕಾರಣಕ್ಕೆ ಈ ನಿರ್ಧಾರಕ್ಕೆ ಕಾರಣವಾಗಿದೆ.**
- **ಪೆಂಡಾಲ್ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಆಯೋಜಕರ ಈ ನಿರ್ಧಾರಕ್ಕೆ ನೆಟ್ಟಿಗರು ತರಹೇವಾರಿಯಾಗಿ ಪ್ರತಿಕ್ರಿಯಿಸಿದ್ದಾರೆ.**

**ವಿಶ್ವಾಸಕ್ಕೆ ದ್ರೋಹ ಬಗೆದಿದ್ದೇ ಇದಕ್ಕೆ ಕಾರಣ**

**ಪಶ್ಚಿಮ ಬಂಗಾಳದ ಬಹರಂಪುರದಲ್ಲಿ ದುರ್ಗಾಪೂಜಾ ಪೆಂಡಾಲ್‌ನಲ್ಲಿ ಅಮೆರಿಕ ಡೊನಾಲ್ಡ್ ಟ್ರಂಪ್ ಅವರನ್ನು ಅಸುರನ ರೂಪದಲ್ಲಿ ಚಿತ್ರಿಸಲಾಗಿದೆ. ಬಹರಂಪುರದ ಖಾಗ್ರಾ ಸ್ಮಶಾನ ಘಾಟ್ ದುರ್ಗಾ ಪೂಜಾ ಸಮಿತಿಯ ಸಂಘಟಕರು ಈ ಪೆಂಡಾಲ್ ಅಳವಡಿಸಿದ್ದಾರೆ. ಭಾರತೀಯ ಸರಕುಗಳ ಮೇಲೆ ಟ್ರಂಪ್ ವಿಧಿಸಿದ 50% ಸುಂಕ, ಕಠಿಣ ವೀಸಾ ನಿಯಮಗಳು ಹಾಗೂ ಪ್ರಧಾನಿ ಮೋದಿಯವರ ವಿಶ್ವಾಸಕ್ಕೆ ದ್ರೋಹ ಬಗೆದಿದ್ದೇ ಇದಕ್ಕೆ ಕಾರಣ ಎಂದು ಆಯೋಜಕರು ಹೇಳಿದ್ದಾರೆ. ಈ ವಿವಾದಿತ ವಿಗ್ರಹ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಗಮನ ಸೆಳೆದಿದೆ.**

**ಭಾರತದ ಮೇಲೆ ಟ್ರಂಪ್‌ನ 50% ಸುಂಕ:** ಈ ವಿವಾದಕ್ಕೆ ಮುಖ್ಯ ಕಾರಣ, ಆಗಸ್ಟ್‌ನಲ್ಲಿ ಟ್ರಂಪ್ ಭಾರತೀಯ ಸರಕುಗಳ ಮೇಲೆ 50 ಪ್ರತಿಶತದಷ್ಟು ಸುಂಕವನ್ನು ಹೇರಿದ್ದು. ಇದು ಉಭಯ ದೇಶಗಳ ನಡುವಿನ ವ್ಯಾಪಾರ ಸಂಬಂಧದಲ್ಲಿ ಬಿಗುವನ್ನು ಹೆಚ್ಚಿಸಿತು. ರಷ್ಯಾದ ತೈಲವನ್ನು ಭಾರತ ನಿರಂತರವಾಗಿ ಖರೀದಿಸುತ್ತಿರುವುದನ್ನು ಗುರಿ ಆಗಿಟ್ಟುಕೊಂಡು ಈ ಸುಂಕವನ್ನು ವಿಧಿಸಲಾಯಿತು.

ಅಂದಾಜು 66 ಶತಕೋಟಿ ಡಾಲರ್ ಮೌಲ್ಯದ ಭಾರತದ ರಫ್ತುಗಳಲ್ಲಿ ಸುಮಾರು ಮೂರನೇ ಎರಡರಷ್ಟು ಭಾಗವು ಇದರಿಂದ ಬಾಧಿತವಾಗಿದ್ದು, ಜವಳಿ, ಚರ್ಮ ಮತ್ತು ರತ್ನಗಳಂತಹ ಕ್ಷೇತ್ರಗಳಿಗೆ ತೀವ್ರ ಹೊಡೆತ ಬಿದ್ದಿದೆ. ಇದರ ಪರಿಣಾಮವಾಗಿ, ವಿಶೇಷವಾಗಿ ತಮಿಳುನಾಡಿನಲ್ಲಿ, ಕಾರ್ಖಾನೆಗಳು ಮುಚ್ಚುವುದು, ಉದ್ಯೋಗ ನಷ್ಟದ ವರದಿಗಳು ತಕ್ಷಣವೇ ಕೇಳಿಬಂದಿವೆ.

## ಮುಂದಿನಿಂದ ನೋಡಿದ್ರೆ ಹಾಟ್



ಹಿಂದೆಗೂ ಮುಂದೆಗೂ ಅಜಗಜಾಂತರ

ಬಾಲಿವುಡ್ ನಟಿ ಹುಮಾ ಖುರೇಷಿ ಏರ್‌ಪೋರ್ಟ್ ಲುಕ್ ಭಾರಿ ಟ್ರೋಲ್ ಆಗ್ತಿದೆ. ಮುಂದಿನಿಂದ ಫ್ಯಾಷನ್ ಐಕಾನ್‌ನಂತೆ ಕಾಣುವ ಹುಮಾ ಹಿಮದೆ ತಿರುಗುತ್ತಿದ್ದಂತೆ ಗಾಬರಿಯಾಗುವ ಸರದಿ ನೋಡುಗರದಾಗಿದೆ. ಅವರ ಈ ವಿಡಿಯೋ ಈಗ ಇಂಟರ್‌ನೆಟ್‌ನಲ್ಲಿ ಸಖತ್ ವೈರಲ್ ಆಗಿದೆ.

ತುಸು ಹರಿದು ಹೋದ ಬಟ್ಟೆಗಳನ್ನು ಜನರು ಹಾಕುವುದಿಲ್ಲ, ಹರಿದ ಬಟ್ಟೆಗಳು ದಾರಿದ್ರ್ಯದ ಸಂಕೇತ ಎಂದೇ ಬಹುತೇಕರು ಭಾವಿಸುತ್ತಾರೆ. ಹೀಗಾಗಿ ತುಸು ಹರಿದರು ಮೊದಲೆಲ್ಲಾ ಜನ ಬಟ್ಟೆಯನ್ನು ಮತ್ತೆ ಹೊಲಿದು ಹಾಕುತ್ತಿದ್ದರು. ಆದರೆ ಕಾಲ ಬದಲಾಗಿದೆ. ಬಟ್ಟೆ ಹರಿದು ಹೋದರೆ ತಿಪ್ಪೆಗೆಸೆದು ಬಿಡುತ್ತಾರೆ. ಅಥವಾ ನೆಲೊರೆಸುವುದಕ್ಕೆ ಬಳಸುತ್ತಾರೆ. ಒಂದು ಬಟ್ಟೆ ಕೊಳ್ಳಲಾಗದಷ್ಟು ಬಡವರು ಇತ್ತೀಚೆಗೆ ಬಹಳ ಕಡಿಮೆ. ಹಾಗೆಯೇ ತಿನ್ನಲೂ ಅನ್ನ ಇಲ್ಲದಿದ್ದರೂ ಜನ ಇಂದು ಶೋಕಿ ಮಾಡೋದು ಬಿಡಲ್ಲ, ದಿನಕ್ಕೊಂದು ಬಟ್ಟೆ ಹಾಕೊಂಡು ಫ್ಯಾಷನ್ ಮಾಡುವವರೇ ಹೆಚ್ಚು. ಫ್ಯಾಷನ್ ಮತ್ತೆ ಮತ್ತೆ ಪುನರಾವರ್ತನೆಯಾಗುತ್ತಿರುತ್ತದೆ. ಆದರೆ ತೂತು ತೂತಾದ ಚಿಂದಿ ಚಿತ್ರನ್ನಾವಾದ ಬಟ್ಟೆಗಳು ಇಂದಿನ ಹೈಕ್ಲಾಸ್ ಜನರ ಫ್ಯಾಷನ್ ಆಗಿದೆ. ಅದೇ ರೀತಿ ಬಾಲಿವುಡ್ ನಟಿಯೊಬ್ಬಳು ಧರಿಸಿರುವ ಬಟ್ಟೆಯೊಂದು ಈಗ ಸಾಕಷ್ಟು ವೈರಲ್ ಆಗಿದೆ. ಅಂದಹಾಗೆ ಈ ವಿಡಿಯೋದಲ್ಲಿ ಕಾಣಿಸ್ತಿರೋದು ಬಾಲಿವುಡ್ ನಟಿ ಹುಮಾ ಖುರೇಷಿ, ಗ್ಯಾಂಗ್ಸ್ ಆಫ್ ವಾಸೆಯ್‌ಪುರ್, ತ್ರಿಷ್ಣಾ, ಬದ್ಲಾಪುರ್, ಹೈವೇ, ಜಾಲಿ ಎಲ್‌ಎಲ್‌ಬಿ 2 ಮುಂತಾದ ಸಿನಿಮಾಗಳು ಸೇರಿದಂತೆ ಹಲವು ಸಿನಿಮಾಗಳಲ್ಲಿ ನಟಿಸಿರುವ ಬಾಲಿವುಡ್ ನಟಿ ಹುಮಾ ಖುರೇಷಿ ಏರ್‌ಪೋರ್ಟ್ ಲುಕ್ ಇದಾಗಿದೆ. ಮುಂದಿನಿಂದ ನೋಡುತ್ತಿದ್ದವರಿಗೆ ಹುಮಾ ಖುರೇಷಿ ಫ್ಯಾಷನ್ ಐಕಾನ್ ನಂತೆಯೇ ಕಾಣುತ್ತಾರೆ.

## ಪ್ರಿಯಾಂಕಾ ಚೋಪ್ರಾ ಹಾಗೆ ಮಾಡಿ ನೋಡಿ..

ವಯಸ್ಸಾದ್ರೂ ಯಂಗ್ ಆಗಿ ಕಾಣಿಸ್ತೀರಾ

ಬಾಲಿವುಡ್‌ನಲ್ಲಿ ಸಂಚಲನ ಸೃಷ್ಟಿಸಿ ಇದೀಗ ಹಾಲಿವುಡ್ ಅಂಗಳದಲ್ಲೂ ಭಾರತದ ಹೆಸರು ಹರಡಿಸುತ್ತಿರುವ ಬ್ಯೂಟಿ. ವಯಸ್ಸು 43 ಆಗಿದ್ದರೂ ಇನ್ನೂ ಯಂಗ್, ಫಿಟ್ ಅಂಡ್ ಫೈನ್ ಆಗಿ ಕಾಣುತ್ತಿರುವ ನಟಿ ಪ್ರಿಯಾಂಕಾ ಚೋಪ್ರಾರ ಸೌಂದರ್ಯದ ಗುಟ್ಟೇನು ಇಲ್ಲಿದೆ ಉತ್ತರ..

ನಟಿ ಪ್ರಿಯಾಂಕಾ ಚೋಪ್ರಾ ಯಾರಿಗೆ ಗೊತ್ತಿಲ್ಲ ಬಾಲಿವುಡ್‌ನಲ್ಲಿ ಸಂಚಲನ ಸೃಷ್ಟಿಸಿ ಇದೀಗ ಹಾಲಿವುಡ್ ಅಂಗಳದಲ್ಲೂ ಭಾರತದ ಹೆಸರು ಹರಡಿಸುತ್ತಿರುವ ಬ್ಯೂಟಿ. ವಯಸ್ಸು 43 ಆಗಿದ್ದರೂ ಇನ್ನೂ ಯಂಗ್, ಫಿಟ್ ಅಂಡ್ ಫೈನ್ ಆಗಿ ಕಾಣುತ್ತಿರುವ ನಟಿ ಪ್ರಿಯಾಂಕಾ ಚೋಪ್ರಾರ ಸೌಂದರ್ಯದ ಗುಟ್ಟೇನು ಈ ಬಗ್ಗೆ ಹಲವರು ರಾತ್ರಿ-ಹಗಲು ತಲೆ ಕೆಡಿಸಿಕೊಂಡಿದ್ದಾರೆ. ಬಾಲಿವುಡ್‌ನಿಂದ ಹಾಲಿವುಡ್ ವರೆಗೆ, ಪ್ರಿಯಾಂಕಾ ಚೋಪ್ರಾ ಅವರಂತಹ ಗ್ಲೋಬಲ್ ಐಕಾನ್‌ಗಳು ಕೂಡ ಇದನ್ನು ತಮ್ಮ ಬ್ಯೂಟಿ ರೂಟಿನ್‌ನ ಭಾಗವಾಗಿಸಿಕೊಂಡಿದ್ದಾರೆ.

ಎಲ್‌ಇಡಿ ಫೇಸ್ ಮಾಸ್ಕ್‌ನ ವಿಶೇಷತೆ ಎಂದರೆ ಇದು ಚರ್ಮದ ಮೇಲೆ ಯಾವುದೇ ಇನ್ವೇಸಿವ್ ಪ್ರಕ್ರಿಯೆ ಇಲ್ಲದೆ ಕೆಲಸ ಮಾಡುತ್ತದೆ.

50ನೇ ವಯಸ್ಸಿನಲ್ಲೂ ನಿಮ್ಮ ಚರ್ಮ 25ರ ಹರೆಯದಂತೆ ಕಾಣಬೇಕೆಂದು ನೀವು ಬಯಸಿದರೆ, ಪ್ರಿಯಾಂಕಾ ಚೋಪ್ರಾ ಅವರಂತೆ ಎಲ್ ಇಡಿ ಫೇಸ್ ಮಾಸ್ಕ್ ಅನ್ನು ನಿಮ್ಮ ಬ್ಯೂಟಿ ರೂಟಿನ್‌ನಲ್ಲಿ ಸೇರಿಸಿಕೊಳ್ಳಿ. ಇದು ಹೊಳಪನ್ನು ಹೆಚ್ಚಿಸುವುದಲ್ಲದೆ, ಚರ್ಮವನ್ನು ದೀರ್ಘಕಾಲದವರೆಗೆ ಆರೋಗ್ಯಕರವಾಗಿ ಮತ್ತು ಯಂಗ್ ಆಗಿಡುತ್ತದೆ.





## ಅನುಷ್ಕಾ ಶೆಟ್ಟಿ ಜತೆ ಯಾರೆಲ್ಲಾ ಪೈಪೋಟಿ?

ಕಲ್ಕಿ ಚಿತ್ರದಲ್ಲಿ ದೀಪಿಕಾ ಪಡುಕೋಣೆ ಸುಮತಿ ಪಾತ್ರದಲ್ಲಿ ನಟಿಸಿದ್ದರು. ಕಲ್ಕಿಗೆ ಜನ್ಮ ನೀಡುವ ಪ್ರಮುಖ ಪಾತ್ರ ಅವರದ್ದಾಗಿತ್ತು. ದೀಪಿಕಾ ಕಲ್ಕಿ 2 ರಿಂದ ಹೊರನಡೆದಿದ್ದಾರೆ. ಹೀಗಾಗಿ ಅವರ ಜಾಗಕ್ಕೆ ಅನುಷ್ಕಾ ಶೆಟ್ಟಿ ಸೇರಿದಂತೆ ಹಲವರ ಹೆಸರುಗಳು ಕೇಳಿಬರುತ್ತಿವೆ.


ಪ್ರಭಾಸ್ ನಟನೆಯ ಕಲ್ಕಿ 2898 ಎಡಿ ಪ್ಯಾನ್ ಇಂಡಿಯಾ ಮಟ್ಟದಲ್ಲಿ ಯಶಸ್ವಿಯಾಗಿದೆ. ಸೈನ್ಸ್ ಫಿಕ್ಷನ್ ಕಥೆಗೆ ಮಹಾಭಾರತದ ಅಂಶಗಳನ್ನು ಸೇರಿಸಿ ನಾಗ್ ಅಶ್ವಿನ್ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಈ ಚಿತ್ರದ ಸೀಕ್ವೆಲ್ 'ಕಲ್ಕಿ 2' ಕೂಡ ಘೋಷಣೆಯಾಗಿದೆ. ಮೊದಲ ಭಾಗದ ಹಲವು ಪ್ರಶ್ನೆಗಳಿಗೆ ಇದರಲ್ಲಿ ಉತ್ತರವಿದೆ. ಸುಮತಿ ಪಾತ್ರಧಾರಿ ದೀಪಿಕಾ, ನಿರ್ಮಾಣ ಸಂಸ್ಥೆಯೊಂದಿಗಿನ ಭಿನ್ನಾಭಿಪ್ರಾಯದಿಂದ ಚಿತ್ರದಿಂದ ಹೊರನಡೆದಿದ್ದಾರೆ.

ದೀಪಿಕಾ ಪಡುಕೋಣೆ ಅವರ ಬೇಡಿಕೆಗಳನ್ನು ಒಪ್ಪುವುದು ಕಷ್ಟವಾದ ಕಾರಣ ಚಿತ್ರತಂಡ ಈ ನಿರ್ಧಾರ ತೆಗೆದುಕೊಂಡಿದೆ. ಈಗ ಸುಮತಿ ಪಾತ್ರಕ್ಕೆ ಸರಿಹೊಂದುವ ನಟಿಗಾಗಿ ಕಲ್ಕಿ 2 ಚಿತ್ರತಂಡ ಹುಡುಕಾಟ ಆರಂಭಿಸಿದೆ. ದೀಪಿಕಾ ಬದಲಿಗೆ ನಿರ್ದೇಶಕ ನಾಗ್ ಅಶ್ವಿನ್ ಕೆಲವು ಹೆಸರುಗಳನ್ನು ಪರಿಗಣಿಸುತ್ತಿದ್ದಾರೆ. ಆದರೆ ಪ್ರಭಾಸ್ ಅಭಿಮಾನಿಗಳು ಸುಮತಿ ಪಾತ್ರಕ್ಕೆ ಅನುಷ್ಕಾ ಶೆಟ್ಟಿಯವರನ್ನೇ ಆಯ್ಕೆ ಮಾಡಬೇಕೆಂದು ಒತ್ತಾಯಿಸುತ್ತಿದ್ದಾರೆ. ಅನುಷ್ಕಾ ಮಾತ್ರವಲ್ಲದೆ, ಸುಮತಿ ಪಾತ್ರಕ್ಕಾಗಿ ನಯನತಾರಾ, ಸಮಂತಾ ಮತ್ತು ಆಲಿಯಾ ಭಟ್ ಅವರ ಹೆಸರುಗಳು ಕೂಡ ಕೇಳಿಬರುತ್ತಿವೆ. ನಯನತಾರಾ ಈ ಪಾತ್ರಕ್ಕೆ ಸೂಕ್ತ ಎಂದು ಅಭಿಮಾನಿಗಳು ಅಭಿಪ್ರಾಯಪಟ್ಟಿದ್ದಾರೆ.

## ಕಾಂತಾರ-1 ಪ್ರೀಮಿಯರ್ ಶೋಗೆ ಅಶ್ವಿನಿ ಚೀಫ್ ಗೆಸ್ಟ್!

ರಿಷಬ್ ಶೆಟ್ಟಿ ನಟಿಸಿ ನಿರ್ದೇಶಿಸಿರುವ ಬಹುನಿರೀಕ್ಷಿತ ಚಲನಚಿತ್ರ 'ಕಾಂತಾರ ಚಾಪ್ಟರ್-1' ಅಕ್ಟೋಬರ್ 2, 2025ರಂದು ವಿಶ್ವವ್ಯಾಪಿ ಗ್ರ್ಯಾಂಡ್ ರಿಲೀಸ್ ಆಗಲಿದೆ. ಚಿತ್ರವನ್ನು 30ಕ್ಕೂ ಹೆಚ್ಚು ದೇಶಗಳಲ್ಲಿ 7 ಭಾಷೆಗಳಲ್ಲಿ ಬಿಡುಗಡೆ ಮಾಡಲಾಗುವುದು. ಲಂಡನ್‌ನಲ್ಲಿ ಅಕ್ಟೋಬರ್ 1ರಂದು ಪ್ರೀಮಿಯರ್ ಶೋಗೆ ಅಶ್ವಿನಿ ಪುನೀತ್ ರಾಜ್ ಕುಮಾರ್ ಚೀಫ್ ಗೆಸ್ಟ್ ಆಗಿದ್ದಾರೆ ಎಂದು ಮೂಲಗಳು ತಿಳಿಸಿವೆ.





ಚಿತ್ರದ ಮುಂಗಡ ಟಿಕೆಟ್ ಬುಕಿಂಗ್ ಈಗಾಗಲೇ ಪ್ರಾರಂಭವಾಗಿದೆ . ಸಿಂಗಲ್ ಸ್ಕ್ರೀನ್ ಚಿತ್ರಮಂದಿರಗಳು ಮತ್ತು ಮಲ್ಟಿಪ್ಲೆಕ್ಸ್‌ಗಳಲ್ಲಿ ಮೊದಲ ದಿನದ ಪ್ರದರ್ಶನಗಳ ಟಿಕೆಟ್‌ಗಳನ್ನು ಬುಕ್ ಮಾಡಿಕೊಳ್ಳಲು ಸಿನಿರಸಿಕರು ಆಸಕ್ತಿ ತೋರಿಸುತ್ತಿದ್ದಾರೆ. ಟಿಕೆಟ್‌ಗಳ ಬೆಲೆ 200 ರಿಂದ 1,000 ರವರೆಗಿರುತ್ತದೆ ಎಂದು ವರದಿಯಾಗಿದೆ, ಮಲ್ಟಿಪ್ಲೆಕ್ಸ್‌ಗಳ ಗೋಲ್ಡ್ ಕ್ಲಾಸ್‌ನಂತಹ ಪ್ರೀಮಿಯಂ ಆಸನಗಳಿಗೆ ಇದು ಅನ್ವಯಿಸಬಹುದು . ಕೆಲವು ಥಿಯೇಟರ್‌ಗಳಲ್ಲಿ ಬೆಳಗಿನ 6:00 ಗಂಟೆಗೆ ಪ್ರದರ್ಶನಗಳನ್ನು ಏರ್ಪಡಿಸಲಾಗುವುದು . ಹಿಂದೆ ಕರ್ನಾಟಕ ಸರ್ಕಾರವು ಚಿತ್ರ ಟಿಕೆಟ್ ಬೆಲೆಗಳಿಗೆ 200 ಗರಿಷ್ಠ ಮಿತಿ ವಿಧಿಸಿದ್ದರೂ, ನಂತರ ಹೈಕೋರ್ಟ್ ಈ ಆದೇಶಕ್ಕೆ ತಡೆಯೊಡ್ಡಿದ್ದರಿಂದ ಚಿತ್ರಗಳ ಟಿಕೆಟ್ ಬೆಲೆ ಹೆಚ್ಚಾಗುವ ಸಾಧ್ಯತೆ ಇದೆ . ಇದರ ಪ್ರಕಾರ, 'ಕಾಂತಾರ ಚಾಪ್ಟರ್-1' ಟಿಕೆಟ್ ಬೆಲೆಗಳು ಕೆಲವು ಪ್ರದರ್ಶನಗಳಿಗೆ ಹೆಚ್ಚಾಗಿರಬಹುದು. ಬೆಂಗಳೂರು ನಗರದಲ್ಲಿ ಮಾತ್ರವೇ, ಮುಂಗಡ ಟಿಕೆಟ್ ಬುಕಿಂಗ್ ಪ್ರಾರಂಭವಾದ ಕೇವಲ 35 ನಿಮಿಷಗಳಲ್ಲಿ 10,000 ಟಿಕೆಟ್‌ಗಳು ಮಾರಾಟವಾದವು.

## ಸಲ್ಮಾನ್ ಬಾಳಲ್ಲಿ ಬಿರುಗಾಳಿ

ಶಾಕಿಂಗ್ ವಿಷ್ಯ ರಿವೀಲ್



ಬಾಲಿವುಡ್ ನಟ ಸಲ್ಮಾನ್ ಖಾನ್ ಅವರು 'ಆತ್ಮಹತ್ಯೆ ಕಾಯಿಲೆ' ಎಂದು ಕರೆಯಲ್ಪಡುವ ಟ್ರೈಜಿಮಿನಲ್ ನರಶೂಲೆ ಎಂಬ ಗಂಭೀರ ಆರೋಗ್ಯ ಸ್ಥಿತಿಯಿಂದ ಬಳಲುತ್ತಿರುವುದಾಗಿ ಬಹಿರಂಗಪಡಿಸಿದ್ದಾರೆ. ಈ ಕಾಯಿಲೆಯು ಉಂಟುಮಾಡುವ ಅಸಹನೀಯ ಮುಖದ ನೋವಿನಿಂದಾಗಿ ತಾವು ಸಾವಿನ ಬಗ್ಗೆಯೂ ಯೋಚಿಸಿದ್ದಾಗಿ ಅವರು ಹೇಳಿಕೊಂಡಿದ್ದಾರೆ.

ವಯಸ್ಸು 60 ಆದರೂ ಮೊನ್ನೆ ಮೊನ್ನೆ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟ 20ರ ಹರೆಯದ ಬೆಡಗಿಯರ ಜೊತೆಗೂ ರೊಮಾನ್ಸ್ ಮಾಡುವಲ್ಲಿ ಎತ್ತಿದ ಕೈ ಎನ್ನಿಸಿಕೊಂಡಿರುವ ಬಾಲಿವುಡ್ ನಟರಲ್ಲಿ ಒಬ್ಬರು ಸಲ್ಮಾನ್ ಖಾನ್. ಕಟ್ಟುಮಸ್ತಾದ ದೇಹ ನೋಡಿದವರು ಅಬ್ಬಾ ನಟನಿಗೆ ಇಷ್ಟು ವಯಸ್ಸಾಯ್ತಾ ಎಂದು ಅಚ್ಚರಿಪಟ್ಟುಕೊಳ್ಳುವುದು ಇದೆ. ಆದರೆ ಬಣ್ಣದ ಲೋಕ ಹೊರಗಡೆಯಿಂದ ನೋಡುವಂತೆ ಇರುವುದಿಲ್ಲ ಎನ್ನುವುದಕ್ಕೆ ಸಾಕ್ಷಿಯಾಗಿದೆ ಸಲ್ಮಾನ್ ಖಾನ್ ಅವರ ಬದುಕು.

ಬಾಲಿವುಡ್ ಭಾಯಿಜಾನ್ ಎಂದೇ ಫೇಮಸ್ ಆಗಿರೋ ಸಲ್ಮಾನ್ ಖಾನ್ ಅವರು ಟ್ರೈಜಿಮಿನಲ್ ನರಶೂಲೆ ಎಂಬ ಗಂಭೀರ ಸ್ಥಿತಿಯ ಬಗ್ಗೆ ಮಾತನಾಡಿದ್ದಾರೆ. ಇದನ್ನು ಆತ್ಮಹತ್ಯೆ ಕಾಯಿಲೆ ಎಂದೂ ಕರೆಯುತ್ತಾರೆ. ಇದು ಅಸಹನೀಯ ಮುಖದ ನೋವನ್ನು ಉಂಟುಮಾಡುವ ಕಾರಣ ಇದನ್ನು ಹೀಗೆ ಕರೆಯಲಾಗುತ್ತದೆ. ಈ ಮೂಲಕ ಸಲ್ಮಾನ್ ಖಾನ್ ಶಾಕಿಂಗ್ ವಿಷ್ಯವನ್ನು ರಿವೀಲ್ ಮಾಡಿದ್ದಾರೆ.

## ಕ್ರಿಸ್ ಗೇಲ್‌ಗಿಂತಲೂ ಡೇಂಜರಸ್ ಬ್ಯಾಟರ್!

ಭಾರತದ ಯುವ ಕ್ರಿಕೆಟಿಗ ಅಭಿಷೇಕ್ ಶರ್ಮಾ ಅವರ ಬ್ಯಾಟಿಂಗ್‌ಗೆ ವಿಶ್ವದಾದ್ಯಂತ ದೊಡ್ಡ ಮನ್ನಣೆ ಸಿಕ್ಕಿದೆ. ಭಾರತದ ಮಾಜಿ ಬ್ಯಾಟ್ಸ್‌ಮನ್ ಮೊಹಮ್ಮದ್ ಕೈಫ್, 25 ವರ್ಷದ ಅಭಿಷೇಕ್ ಶರ್ಮಾ ಅವರು ವೆಸ್ಟ್ ಇಂಡೀಸ್‌ನ ದಿಗ್ಗಜ ಕ್ರಿಕೆಟಿಗ ಕ್ರಿಸ್ ಗೇಲ್‌ಗಿಂತಲೂ ಹೆಚ್ಚು ಅಪಾಯಕಾರಿಯಾಗಿ ಬ್ಯಾಟಿಂಗ್ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ತಮ್ಮ ಯೂಟ್ಯೂಬ್ ಚಾನೆಲ್‌ನಲ್ಲಿ ಮಾತನಾಡಿರುವ ಕೈಫ್, ಅಭಿಷೇಕ್ ಶರ್ಮಾ 2026ರ ಟಿ20 ವಿಶ್ವಕಪ್‌ಗೆ ಮುನ್ನವೇ ಬೌಲರ್‌ಗಳ ಮನಸ್ಸಿನಲ್ಲಿ ಭಯವನ್ನು ಹುಟ್ಟಿಸಿದ್ದಾರೆ ಎಂದು ಶ್ಲಾಘಿಸಿದ್ದಾರೆ.

**ಏಷ್ಯಾ ಕಪ್‌ನಲ್ಲಿ ಸಂಚಲನ**

2025ರ ಏಷ್ಯಾ ಕಪ್ ಟಿ20 ಆವೃತ್ತಿಯಲ್ಲಿ ಅಭಿಷೇಕ್ ಶರ್ಮಾ ತಮ್ಮ ಅದ್ಭುತ ಪ್ರದರ್ಶನದಿಂದ ಗಮನ ಸೆಳೆದಿದ್ದಾರೆ. ಈ ಸೀಸನ್‌ನಲ್ಲಿ 300 ರನ್‌ಗಳ ಗಡಿ ದಾಟಿದ ಏಕೈಕ ಆಟಗಾರ ಎಂಬ ಹೆಗ್ಗಳಿಕೆಗೆ ಇವರು ಪಾತ್ರರಾಗಿದ್ದಾರೆ. 23 ಟಿ20 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ 197.65ರ ಸ್ಟ್ರೈಕ್ ರೇಟ್‌ನೊಂದಿಗೆ ಬ್ಯಾಟಿಂಗ್ ಮಾಡಿರುವ ಅಭಿಷೇಕ್, ಕೇವಲ ಜುಲೈ 2024ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪಾದಾರ್ಪಣೆ ಮಾಡಿದ್ದರು. ಇವರ ಆಕ್ರಮಣಕಾರಿ ಆಟದ ಶೈಲಿಯು ಎದುರಾಳಿ ಬೌಲರ್‌ಗಳಿಗೆ ಸವಾಲಾಗಿದೆ.

ಭಾರತ ತಂಡದ ಪರ 138 ಪಂದ್ಯಗಳನ್ನು (13 ಟೆಸ್ಟ್, 125 ಏಕದಿನ) ಆಡಿರುವ ಮೊಹಮ್ಮದ್ ಕೈಫ್, ಅಭಿಷೇಕ್‌ರ ಬ್ಯಾಟಿಂಗ್ ಶೈಲಿಯನ್ನು ಕ್ರಿಸ್ ಗೇಲ್‌ರೊಂದಿಗೆ ಹೋಲಿಸಿದ್ದಾರೆ. ''ಅಭಿಷೇಕ್ ಶರ್ಮಾ ಕ್ರಿಸ್ ಗೇಲ್‌ರಂತೆ ಬ್ಯಾಟಿಂಗ್ ಮಾಡುತ್ತಾರೆ, ಆದರೆ ಸತ್ಯವನ್ನು ಹೇಳಬೇಕೆಂದರೆ, ಅವರು ಗೇಲ್‌ಗಿಂತ ಉತ್ತಮವಾಗಿ ಆಡುತ್ತಿದ್ದಾರೆ,'' ಎಂದು ಕೈಫ್ ಹೇಳಿದ್ದಾರೆ. ಗೇಲ್ ಒಬ್ಬ ಬೌಲರ್‌ನನ್ನು ಗುರಿಯಾಗಿಸಿಕೊಂಡು ಐದು ಸಿಕ್ಸರ್‌ಗಳನ್ನು ಬಾರಿಸುವ ಶಕ್ತಿಯನ್ನು ಹೊಂದಿದ್ದರು, ಆದರೆ ಚೆಂಡು ಚಲಿಸುವಾಗ ಅಥವಾ ತಿರುಗುವಾಗ ಕೆಲವೊಮ್ಮೆ ಮೇಡನ್ ಓವರ್‌ಗಳನ್ನೂ ಎದುರಿಸುತ್ತಿದ್ದರು ಎಂದು ಕೈಫ್ ವಿವರಿಸಿದ್ದಾರೆ.

ಗೇಲ್ ಜೊತೆ ಹೋಲಿಕೆ ಮಾಡಿದ ಕೈಫ್

ಕೈಫ್‌ರ ಪ್ರಕಾರ, ಅಭಿಷೇಕ್ ಶರ್ಮಾ ತಮ್ಮ ಮೊದಲ ಎಸೆತದಿಂದಲೇ ಸಿಕ್ಸರ್ ಬಾರಿಸುವ ಧೈರ್ಯವನ್ನು ತೋರಿಸುತ್ತಾರೆ. ''ಶಾಹೀನ್ ಅಫ್ರಿದಿಯಂತಹ ದೊಡ್ಡ ಬೌಲರ್‌ನ ಮೊದಲ ಎಸೆತದಲ್ಲೇ ಅಭಿಷೇಕ್ ಮುಂದಕ್ಕೆ ನುಗ್ಗಿ ಫೋರ್ ಬಾರಿಸುತ್ತಾರೆ, ಮತ್ತೆ ಮುಂದಿನ ಎಸೆತದಲ್ಲಿ ಸಿಕ್ಸರ್ ಹೊಡೆಯುತ್ತಾರೆ. ಗೇಲ್ ಇಂತಹ ಆಟವನ್ನು ಎಂದೂ ತೋರಿಸಿರಲಿಲ್ಲ ಎಂದು ಕೈಫ್ ಒತ್ತಿಹೇಳಿದ್ದಾರೆ. ಇದು ಅಭಿಷೇಕ್‌ರ ಆಕ್ರಮಣಕಾರಿ ಮತ್ತು ಭಯವಿಲ್ಲದ ಬ್ಯಾಟಿಂಗ್ ಶೈಲಿಯನ್ನು ಎತ್ತಿ ತೋರಿಸುತ್ತದೆ. ಕೈಫ್, ಕ್ರಿಸ್ ಗೇಲ್‌ರನ್ನು 'ಯೂನಿವರ್ಸ್ ಬಾಸ್' ಎಂದು ಕರೆಯಲಾಗುತ್ತಿದ್ದ 2011-12ರ ಸಮಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದಲ್ಲಿ ಗೇಲ್ ಜೊತೆ ಎರಡು ವರ್ಷ ಆಡಿದ್ದ ಅನುಭವವನ್ನು ನೆನಪಿಸಿಕೊಂಡಿದ್ದಾರೆ. ''ಗೇಲ್ ಆಗ ತುಂಬಾ ಚೆನ್ನಾಗಿ ಆಡುತ್ತಿದ್ದರು, ಆದರೆ ಉತ್ತಮ ಬೌಲರ್‌ಗಳನ್ನು ಗೌರವಿಸುತ್ತಿದ್ದರು. ಆದರೆ, ಅಭಿಷೇಕ್ ಶರ್ಮಾ ಬೌಲರ್‌ಗಳನ್ನು ಹೆದರಿಸುತ್ತಿದ್ದಾರೆ. ಇವರ ಬ್ಯಾಟಿಂಗ್ ನೋಡಿದ ಯಾವುದೇ ಬೌಲರ್ 2026ರ ಟಿ20 ವಿಶ್ವಕಪ್‌ಗೆ ಮುನ್ನವೇ ಭಯಭೀತನಾಗುತ್ತಿದ್ದಾರೆ,'' ಎಂದು ಕೈಫ್ ಹೇಳಿದ್ದಾರೆ.

ಏಷ್ಯಾ ಕಪ್ 2025ರಲ್ಲಿ ಅಭಿಷೇಕ್ ಶರ್ಮಾ ತೋರಿಸಿರುವ ಆಕರ್ಷಕ ಪ್ರದರ್ಶನವು ಭಾರತೀಯ ಕ್ರಿಕೆಟ್‌ಗೆ ಹೊಸ ಭರವಸೆಯನ್ನು ತಂದಿದೆ. ಭಾರತ ಮತ್ತು ಪಾಕಿಸ್ತಾನ ನಡುವಿನ ಫೈನಲ್ ಪಂದ್ಯದಲ್ಲಿ ಇವರ ಆಟವು ತಂಡಕ್ಕೆ ಗೆಲುವಿನ ಕಾಂತಿಯಾಗಬಹುದು.



## ಟೀಂ ಇಂಡಿಯಾಕ್ಕೆ ಇಬ್ಬರು ಹೊಸ ಆಯ್ಕೆದಾರರ ನೇಮಕ

ಬಿಸಿಸಿಐ ವಾರ್ಷಿಕ ಮಹಾಸಭೆಯಲ್ಲಿ ಟೀಂ ಇಂಡಿಯಾಕ್ಕೆ ಇಬ್ಬರು ಹೊಸ ಆಯ್ಕೆದಾರರನ್ನು ನೇಮಿಸಲಾಗಿದೆ. ಈ ಹಿಂದೆ ಆಯ್ಕೆ ಮಂಡಳಿಯಲಿದ್ದ ಎಸ್. ಶರತ್ ಮತ್ತು ಸುಬ್ರೋತೋ ಬ್ಯಾನರ್ಜಿ ಬದಲಿಗೆ ಟೀಂ ಇಂಡಿಯಾದ ಮಾಜಿ ಕ್ರಿಕೆಟಿಗರಾದ ಪ್ರಗ್ಯಾನ್ ಓಜಾ ಮತ್ತು ಆರ್‌ಪಿ ಸಿಂಗ್ ಅವರನ್ನು ಹೊಸ ಆಯ್ಕೆದಾರರನ್ನಾಗಿ ಆಯ್ಕೆ ಮಾಡಲಾಗಿದೆ. ಮುಖ್ಯವಾದ ವಿಷಯವೆಂದರೆ ಈ ಹುದ್ದೆಗೆ ಪ್ರಮುಖ ಸ್ಪರ್ಧಿಯಾಗಿದ್ದ ಭಾರತದ ಮಾಜಿ ವೇಗಿ ಪ್ರವೀಣ್ ಕುಮಾರ್ ಅವರಿಗೆ ಈ ಜವಾಬ್ದಾರಿ ಸಿಕ್ಕಿಲ್ಲ.



ಆರ್‌ಪಿ ಸಿಂಗ್ ವೃತ್ತಿಜೀವನ

ಭಾರತದ ಪರ 24 ಟೆಸ್ಟ್, 18 ಏಕದಿನ ಮತ್ತು 6 ಟಿ20 ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿರುವ ಪ್ರಗ್ಯಾನ್ ಓಜಾ, ಪೂರ್ವ ವಲಯದಿಂದ ಆಯ್ಕೆದಾರರಾಗಿದ್ದಾರೆ. ಇನ್ನು ಆರ್‌ಪಿ ಸಿಂಗ್ ಭಾರತ ಪರ 14 ಟೆಸ್ಟ್ ಪಂದ್ಯಗಳಲ್ಲಿ 40 ವಿಕೆಟ್‌ಗಳನ್ನು ಕಬಳಿಸಿದ್ದು, 58 ಏಕದಿನ ಪಂದ್ಯಗಳಲ್ಲಿ 69 ವಿಕೆಟ್‌ಗಳನ್ನು ಮತ್ತು 10 ಟಿ20ಪಂದ್ಯಗಳಲ್ಲಿ 15 ವಿಕೆಟ್‌ಗಳನ್ನು ಕಬಳಿಸಿದ್ದಾರೆ. ಆರ್‌ಪಿ ಸಿಂಗ್ ದೀರ್ಘಕಾಲದವರೆಗೆ ಪ್ರಥಮ ದರ್ಜೆ ಕ್ರಿಕೆಟ್ ಆಡಿದ್ದು, 94 ಪ್ರಥಮ ದರ್ಜೆ ಪಂದ್ಯಗಳಲ್ಲಿ 301 ವಿಕೆಟ್‌ಗಳನ್ನು ಕಬಳಿಸಿದ್ದಾರೆ.

**ಪ್ರಗ್ಯಾನ್ ಓಜಾ ವೃತ್ತಿಜೀವನ:** ಪ್ರಗ್ಯಾನ್ ಓಜಾ ಬಗ್ಗೆ ಹೇಳುವುದಾದರೆ, ಸಚಿನ್ ತೆಂಡೂಲ್ಕರ್ ಅವರ ಕೊನೆಯ ಅಂತರರಾಷ್ಟ್ರೀಯ ಪಂದ್ಯದ ನಂತರ ಅವರ ವೃತ್ತಿಜೀವನವೂ ಕೊನೆಗೊಂಡಿತು.

ಆ ಪಂದ್ಯದಲ್ಲಿ ಅವರನ್ನು ಪಂದ್ಯಶ್ರೇಷ್ಠ ಪ್ರಶಸ್ತಿಗೂ ಆಯ್ಕೆ ಮಾಡಲಾಗಿತ್ತು. ಓಜಾ 108 ಪ್ರಥಮ ದರ್ಜೆ ಪಂದ್ಯಗಳಲ್ಲಿ ಅನುಭವ ಹೊಂದಿದ್ದು, 424 ವಿಕೆಟ್‌ಗಳನ್ನು ಪಡೆದಿದ್ದಾರೆ. ಹಾಗೆಯೇ ಟಿ20ಯಲ್ಲಿ 156 ವಿಕೆಟ್‌ಗಳನ್ನು ಪಡೆದಿದ್ದಾರೆ.


**ವಾರ್ಷಿಕ ಮಹಾಸಭೆಯಲ್ಲಿ ಹಲವು ನಿರ್ಧಾರ:** ಬಿಸಿಸಿಐ ವಾರ್ಷಿಕ ಮಹಾಸಭೆಯಲ್ಲಿ ಹಲವಾರು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ಮಿಥುನ್ ಮನ್ಹಾಸ್ ಅವರನ್ನು ಬಿಸಿಸಿಐನ ಹೊಸ ಅಧ್ಯಕ್ಷರಾಗಿ ಆಯ್ಕೆ ಮಾಡಿದ್ದರೆ, ರಾಜೀವ್ ಶುಕ್ಲಾ ಉಪಾಧ್ಯಕ್ಷರಾಗಿ ಮರು ಆಯ್ಕೆಯಾಗಿದ್ದಾರೆ. ದೇವಜಿತ್ ಸೈಕಿಯಾ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದರೆ, ಎ. ರಘುರಾಮ್ ಭಟ್ ಖಜಾಂಚಿಯಾಗಿ ಮತ್ತು ಪ್ರಭತೇಜ್ ಸಿಂಗ್ ಭಾಟಿಯಾ ಜಂಟಿ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.

## ಬಿಸಿಸಿಐ ನೂತನ ಅಧ್ಯಕ್ಷರಾಗಿ ಮಿಥುನ್ ಮನ್ಹಾಸ್ ನೇಮಕ

ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ನೂತನ ಅಧ್ಯಕ್ಷರಾಗಿ ಮಾಜಿ ಕ್ರಿಕೆಟಿಗ ಮಿಥುನ್ ಮನ್ಹಾಸ್ ಅವರನ್ನು ನೇಮಿಸಲಾಗಿದೆ. ಭಾನುವಾರ ಮುಂಬೈನಲ್ಲಿ ನಡೆದ ಬಿಸಿಸಿಐನ ವಾರ್ಷಿಕ ಸಾಮಾನ್ಯ ಸಭೆ (ಎಜಿಎಂ) ಮುಕ್ತಾಯದ ನಂತರ ಈ ಘೋಷಣೆ ಮಾಡಲಾಗಿದೆ. ರೋಜರ್ ಬಿನ್ನಿ ಅವರ ಸ್ಥಾನವನ್ನು ಮಿಥುನ್ ಮನ್ಹಾಸ್ ವಹಿಸಿಕೊಳ್ಳಲಿದ್ದಾರೆ. ನೂತನ ಆಡಳಿತ ಮಂಡಳಿ ಮಿಥುನ್ ಮನ್ಹಾಸ್ ಅವರ ನೇತೃತ್ವದ ಜೊತೆಗೆ, ಬಿಸಿಸಿಐನ ಆಡಳಿತ ಮಂಡಳಿಯ ಇತರ ಪ್ರಮುಖ ಹುದ್ದೆಗಳಿಗೂ ನೇಮಕಗಳಾಗಿವೆ. ಮಾಜಿ ಕ್ರಿಕೆಟಿಗ ರಾಜೀವ್ ಶುಕ್ಲಾ ಅವರನ್ನು ಉಪಾಧ್ಯಕ್ಷರಾಗಿ, ದೇವಜಿತ್ ಸೈಕಿಯಾ ಅವರನ್ನು ಕಾರ್ಯದರ್ಶಿಯಾಗಿ, ಪ್ರಭತೇಜ್ ಸಿಂಗ್ ಭಾಟಿಯಾ ಅವರನ್ನು ಜಂಟಿ ಕಾರ್ಯದರ್ಶಿಯಾಗಿ ಮತ್ತು ಎ. ರಘುರಾಮ್ ಭಟ್ ಅವರನ್ನು ಖಜಾಂಚಿಯಾಗಿ ಆಯ್ಕೆ ಮಾಡಲಾಗಿದೆ.

ಇದರ ಜೊತೆಗೆ, ಜಯದೇವ್ ನಿರಂಜನ್ ಶಾ ಅವರು ಸುಪ್ರೀಂ ಕೌನ್ಸಿಲ್‌ನ ಏಕೈಕ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಅರುಣ್ ಸಿಂಗ್ ಧುಮಾಲ್ ಮತ್ತು ಎಂ. ಖೈರುಲ್ ಜಮಾಲ್ ಮಜುಂದಾರ್ ಅವರನ್ನು ಆಡಳಿತ ಮಂಡಳಿಗೆ ಸೇರಿಸಲಾಗಿದೆ. ಮಿಥುನ್ ಮನ್ಹಾಸ್ ಅವರ ಬಿಸಿಸಿಐ ಅಧ್ಯಕ್ಷರಾಗಿ ನೇಮಕಗೊಂಡ ನಂತರ, ಕೇಂದ್ರ ಸಚಿವ ಡಾ. ಜಿತೇಂದ್ರ ಸಿಂಗ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಅವರನ್ನು ಅಭಿನಂದಿಸಿದ್ದಾರೆ.

**ಮಿಥುನ್ ಮನ್ಹಾಸ್ ಯಾರು:** 45 ವರ್ಷದ ಮಿಥುನ್ ಮನ್ಹಾಸ್ ದೆಹಲಿಯ ಮಾಜಿ ಆಲ್‌ರೌಂಡರ್ ಆಗಿದ್ದು, ಭಾರತೀಯ ಕ್ರಿಕೆಟ್‌ನಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ಅವರು 157 ಪ್ರಥಮ ದರ್ಜೆ ಪಂದ್ಯಗಳು, 130 ಲಿಸ್ಟ್ ಎ ಪಂದ್ಯಗಳು ಮತ್ತು 91 ಟಿ20 ಪಂದ್ಯಗಳಲ್ಲಿ ಆಡಿದ್ದಾರೆ.



## ಹ್ಯಾರಿಸ್ ರೌಫ್ ಪತ್ನಿ ಮುಜ್ನಾ ಮಸೂದ್ ಮುದ್ದಾದ ಗೊಂಬೆ!

ಪಾಕ್ ಕ್ರಿಕೆಟಿಗ ಹ್ಯಾರಿಸ್ ರೌಫ್, ಮುಜ್ನಾ ಮಸೂದ್ ಮಲಿಕ್ ಅವರನ್ನು ಮದುವೆಯಾಗಿದ್ದಾರೆ. ಮುಜ್ನಾ ಅಕ್ಟೋಬರ್ 20, 1997 ರಂದು ರಾವಲ್ಪಿಂಡಿಯಲ್ಲಿ ಜನಿಸಿದರು. ವೃತ್ತಿಯಲ್ಲಿ ಫ್ಯಾಷನ್ ಮಾಡೆಲ್ ಮತ್ತು ಸೋಶಿಯಲ್ ಮೀಡಿಯಾ ಇನ್ಫ್ಲುಯೆನ್ಸರ್. ಮುಜ್ನಾ ಮಸೂದ್ ಮತ್ತು ಹ್ಯಾರಿಸ್ ರೌಫ್ ಅವರ ಲವ್ ಸ್ಟೋರಿ ಕಾಲೇಜಿನಿಂದ ಶುರುವಾಯಿತು. ನಿಧಾನವಾಗಿ ಇಬ್ಬರ ನಡುವೆ ಆತ್ಮೀಯತೆ ಬೆಳೆದು, ನಂತರ ಮದುವೆಯಾಗಲು ನಿರ್ಧರಿಸಿದರು. ಡಿಸೆಂಬರ್ 23, 2022 ರಂದು, ಮುಜ್ನಾ ಮಸೂದ್ ಮತ್ತು ಹ್ಯಾರಿಸ್ ರೌಫ್ ಇಸ್ಲಾಮಾಬಾದ್‌ನಲ್ಲಿ ವಿವಾಹವಾದರು. ನಂತರ ಈ ಜೋಡಿ ಜುಲೈ 2023 ರಲ್ಲಿ ತಮ್ಮ ಮದುವೆಯ ಗ್ರ್ಯಾಂಡ್ ಪಾರ್ಟಿ ನೀಡಿದರು. ರೌಫ್ ಪತ್ನಿ ನಿಜಕ್ಕೂ ಗೊಂಬೆಯಂತಿದ್ದಾರೆ. ಮುಜ್ನಾ ಇಸ್ಲಾಮಾಬಾದ್ ವಿಶ್ವವಿದ್ಯಾಲಯದಿಂದ ಮಾಸ್ ಮೀಡಿಯಾ ಕಮ್ಯುನಿಕೇಷನ್‌ನಲ್ಲಿ ಪದವಿ ಪಡೆದಿದ್ದಾರೆ. ಇದಾದ ನಂತರ ಫ್ಯಾಷನ್ ಡಿಸೈನಿಂಗ್ ಕೋರ್ಸ್ ಕೂಡ ಮಾಡಿದ್ದಾರೆ.



ಫ್ಯಾಷನ್ ಡಿಸೈನಿಂಗ್ ಕೋರ್ಸ್

ಮುಜ್ನಾ ಮಸೂದ್ ಚಿಕ್ಕ ವಯಸ್ಸಿನಲ್ಲೇ ಮಾಡೆಲಿಂಗ್ ವೃತ್ತಿ ಆರಂಭಿಸಿದ್ದರು. ಸದ್ಯ ಅವರಿಗೆ ಕೇವಲ 28 ವರ್ಷ ವಯಸ್ಸು. ಮುಜ್ನಾ ಮಸೂದ್ ಪಾಕಿಸ್ತಾನದ ಹಲವು ದೊಡ್ಡ ಬ್ರ್ಯಾಂಡ್‌ಗಳಿಗೆ ಜಾಹೀರಾತು ನೀಡಿದ್ದಾರೆ. ಅವರು ಸೋಶಿಯಲ್ ಮೀಡಿಯಾದಲ್ಲೂ ಸಕ್ರಿಯರಾಗಿದ್ದಾರೆ. ಟಿಕ್ ಟಾಕ್‌ನಲ್ಲಿ ಅವರ ವೀಡಿಯೊಗಳು ವೈರಲ್ ಆಗಿವೆ. ಏಷ್ಯಾಕಪ್ 2025 ರಲ್ಲಿ ಭಾರತ-ಪಾಕಿಸ್ತಾನ ಪಂದ್ಯದಲ್ಲಿ ತಂಡದ ಸೋಲಿನ ನಂತರ ಹ್ಯಾರಿಸ್ ರೌಫ್ ಕೋಪಗೊಂಡಿದ್ದರು. ಆಗ ಅವರ ಪತ್ನಿ ಮುಜ್ನಾ, ಭಾರತದ ವಿರುದ್ಧ ಮಾತನಾಡಿ ಹ್ಯಾರಿಸ್ ಅವರನ್ನು ಬೆಂಬಲಿಸಿದ್ದರು.



**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news

**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**